ಶೀ: ಪ್ರಪಂಚದ ... ಳು

ಕ: ಜವಾಹರಲಾಲ ನೆಹರು

ಪ್ರಕಾಶ ಭಾಂಡಾರ

ಹುಬ್ಬಳ್ಳಿ 1941

ಆರನೆಯ ಪ್ರಕಟನೆ:-

ಮಗಳಿಗೆ ತಂದೆಯ ಓಲೆಗಳು

ಜಗತ್ತಿನ ಪ್ರಾಚೀನ ಕಾಲದ ಸಂಕ್ಷಿಪ್ತ ವೃತ್ತಾಂತ

ಮಕ್ಕಳಿಗಾಗಿ ಬರೆದುದು

ಪಂ. ಜವಾಹರಲಾಲ ನೆಹರು

ಕನ್ನಡಿಸಿದವರು :

ಶ್ರೀ. ಕಪಟರಾಳ ಕೃಷ್ಣರಾಯರು

ಪ್ರಕಾಶಕರು :
ಮಂಗಳೂರು ಗೋವಿಂದರಾಯರು
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

ಸಾಮಾನ್ಯ ಪ್ರತಿ ೧—೦—೦
ಉತ್ತಮ ,, ೧—೮—೦

ಮುದ್ರಕರು :
ಹಣಮಂತ ರಾಘವೇಂದ್ರ ಮೊಹರೆ
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಕನ್ನಡನಾಡಿನ ಚಿಕ್ಕಮಕ್ಕಳಿಗೆ

ಪರಿವಿಡಿ

ಓಲೆಗಳ ಪರಿವಿಡಿ

ಪ್ರಕಾಶಕರ ಅರಿಕೆ

ಈಗ ಸುಮಾರು ಐದು ವರುಷಗಳ ಹಿಂದೆ ನಾನು ನಿಜಾಮು ಕರ್ನಾಟಕದ ಕಲ್ಲಬುರುಗಿಗೆ ಹೋಗುವ ಆವಶ್ಯಕತೆ ಉಂಟಾಗಿತ್ತು. ಆಗ, ಈ ಪುಸ್ತಕವನ್ನು ಕನ್ನಡಿಸಿ ಇದು ಬೆಳಕಿಗೆ ಬರಲು ಕಾರಣರಾದ ಶ್ರೀ. ಕಪಟರಾಳ ಕೃಷ್ಣರಾಯರಲ್ಲಿ ತಂಗುವ, ಅವರ ಅತಿಥಿಯಾಗುವ ಸುಯೋಗ ನನ್ನ ಪಾಲಿಗೆ ಬಂದಿತು. ಅಲ್ಲಿ ಕನ್ನಡ ಸಾಹಿತ್ಯದ ಮಾತು ಬಂದಾಗ ತಾವು ಮಾಡಿದ ಈ ಕೃತಿಯನ್ನು ತೋರಿಸಿ ಇದನ್ನು ಮುದ್ರಿಸುವುದಾದರೆ ನಮಗೆ ಅವಶ್ಯವಾಗಿ ಕೊಡುವುದಾಗಿ ಶ್ರೀ. ಕೃಷ್ಣರಾಯರು ಹೇಳಿದರು. 'ನೀರಿಳಿಯದ ಗಂಟಲಲ್ಲಿ ಕಡು-ಬನ್ನು ತುರುಕಿದಂತೆ,' ಲಲಿತ ಸಾಹಿತ್ಯಕ್ಕೇ ನಮ್ಮಲ್ಲಿ ಪ್ರೋತ್ಸಾಹವಿಲ್ಲದಿರುವಾಗ ಭಾಷೆ, ಜನಾಂಗ, ಸಂಸ್ಕೃತಿ, ಸೂರ್ಯ, ಚಂದ್ರರ ವಿಷಯವನ್ನೊಳಗೊಂಡ ಇಂತಹ ಪುಸ್ತಕಕ್ಕೆ ಕನ್ನಡದಲ್ಲಿ ಮನ್ನಣೆ ದೊರೆಯಬಹುದೆ, ಎಂದು ಆಗ ನಾನು ಸ್ವಲ್ಪ ಅಳುಕಿದೆ. ಆದರೆ ಪುಸ್ತಕದೊಳಗಿನ ವಿಷಯ, ತಿಳಿಯದವರ ಮನಸ್ಸಿನಲ್ಲಿಯೂ ನಾಟುವಂತೆ ಹೇಳುವ ರೀತಿ, ಕನ್ನಡದಲ್ಲಿ ಬಂದ ಮೂಲ ಓಜಸ್ಸು, ಇವುಗಳಿಂದ ಈ ಪುಸ್ತಕ ನನ್ನ ಮೆಚ್ಚಿಕೆಗೆ ಪಾತ್ರವಾಗಿತ್ತು. ಆದರೂ ಆಗ ನಾನು ಈ ಬಗೆಗೆ ಏನನ್ನೂ ಹೇಳುವಂತಿರಲಿಲ್ಲ. ಇದರಲ್ಲಿಯ ಹೊಸತನದಿಂದ ಧೈರ್ಯಗೊಂಡವನಾಗಿ, ಇದರ ಪ್ರಕಾಶನ ಕಾರ್ಯವನ್ನು ಕೈಕೊಳ್ಳಬೇಕೆಂದು ಮುಂದೆ ಒಂದು ವರುಷದ ಮೇಲೆ ಗೊತ್ತುಮಾಡಿಕೊಂಡೆ. ಹಸ್ತ-ಪ್ರತಿಯನ್ನು ತಿದ್ದುವುದಕ್ಕೂ ಅಪ್ಪಣೆಗಾಗಿ ಪಂ. ಜವಾಹರಲಾಲರೊಡನೆ ಸ್ವಲ್ಪ ದೀರ್ಘವಾದ ಪತ್ರವ್ಯವಹಾರಕ್ಕೂ ಎಷ್ಟೋ ದಿನಗಳು ಹೋದವು. ಹೀಗೆ ತಡವಾಗುತ್ತ ಆಗುತ್ತ ಯುಗಾದಿಯ ಇಂದಿನ ಸುಮುಹೂರ್ತದಲ್ಲಿ ಇದು ವಾಚಕರ ಕೈಸೇರುತ್ತಿದೆ.

ಪಂ. ಜವಾಹರಲಾಲರು ಈ ಓಲೆಗಳನ್ನು ಬರೆದುದು ಚುರುಕಾದ, ತೀಕ್ಷ್ಣ-ಬುದ್ಧಿಯ, ಜ್ಞಾನಪಿಪಾಸೆಯುಳ್ಳ ೧೦-೧೧ ವರುಷದ ಹುಡಿಗೆಯೊಬ್ಬಳಿಗೆ. ಭಾಷೆಯ ಶೈಲಿಯಲ್ಲಿ ಆಕರ್ಷಣವಿದೆ, ಸರಳತೆ

ಇದೆ. ಉಕ್ಕನ್ನೂ ಬೆಣ್ಣೆಯಂತೆ ಮಾಡುವ ಒಂದು ಸಾಮರ್ಥ್ಯವಿದೆ, ಒಂದು ಹೊಸತನವಿದೆ. ಶೈಲಿಯ ಈ ಸ್ವಭಾವದಿಂದ ದೊಡ್ಡವರಿಗೂ ತಿಳಿಯದಂತಹ ವಿಷಯ ದಡ್ಡನಿಗೂ ಚಿಕ್ಕ ಮಗುವಿಗೂ ತಿಳಿಯು ವಂತಿದೆ.

ಈ ಪುಸ್ತಕದ ಗುಣಗಳನ್ನು ಎತ್ತಿ ತೋರಿಸಲು ನಾನು ಹೊರ ಟಿಲ್ಲ. ಜಗತ್ತಿನ ಕೆಲವೇ ವ್ಯಕ್ತಿಗಳಲ್ಲಿ ಒಬ್ಬರಾದಂತಹ ಜವಾಹರ ಲಾಲರ ಬರಹದ ವಿಷಯದಲ್ಲಿ ಅಂತಹ ಯಾವ ಮಾತನ್ನಾಡುವುದೂ ನನ್ನ ಯೋಗ್ಯತೆಗೆ ಮೀರಿದುದು. ಇದಲ್ಲದೆ ಅಂತಹ ಕೆಲಸಕ್ಕೆ ಇದು ಸ್ಥಳವೂ ಅಲ್ಲ. ಆದರೆ ಕನ್ನಡದಲ್ಲಿ ಈ ವಿಷಯವನ್ನು ಕುರಿತ ಪುಸ್ತಕ ವಿಲ್ಲವೆಂದು ಹೇಳಬಲ್ಲೆ. ನನಗೆ ತಿಳಿದ ಮಟ್ಟಿಗೆ ಈ ವಿಷಯದಲ್ಲಿ ಇದೇ ಮೊಟ್ಟ-ಮೊದಲಿನ ಪುಸ್ತಕ. ದೇಹದಲ್ಲಿಯೂ ಬುದ್ಧಿಯಲ್ಲಿಯೂ ಎಳೆಯರಾದ ಚಿಕ್ಕ ಮಕ್ಕಳಿಗೆ ಮಾತ್ರವಲ್ಲದೆ ದೇಹದಿಂದ ಬೆಳೆದು ಬುದ್ಧಿಯ ಬೆಳೆವಣಿಗೆಯಾಗದ ಹಿರಿಯರಿಗೂ ಇದು ಉಪಯುಕ್ತ ವಾದೀತು. ಇದಲ್ಲದೆ ನಮ್ಮಲ್ಲಿಯ ಎಷ್ಟೋ ಮೂಢ ನಂಬಿಗೆಗಳನ್ನು ಇದು ಕಿತ್ತೊಗೆಯುತ್ತದೆ. ಕೃತಯುಗ ಜಗತ್ತಿನ ತೀರ ಆರಂಭ ಕಾಲ; ಒಳ್ಳೇ ಸುಸಂಸ್ಕೃತ ಕಾಲ; ಅಂದಿನಿಂದ ಕಲಿಯುಗದೊಳಗಿನ ಇಂದಿನ ವರೆಗೂ ಜಗತ್ತು ಕೆಡುತ್ತಿದೆ; ಜನರು ಅಶಕ್ತರಾಗುತ್ತಿದ್ದಾರೆ; ಸುಳ್ಳು, ಮೋಸ, ತಟವಟಗಳು ಹೆಚ್ಚಾಗುತ್ತಿವೆ; ನಾಗರಿಕತೆಯ ಮೇಲ್ಮಟ್ಟ ದಿಂದ ಮಾನವನು ಕಾಡುತನದ ನಿಕೃಷ್ಟ-ಸ್ಥಿತಿಗೆ ಇಳಿಯುತ್ತಿದ್ದಾನೆ; ಮುಂದೆಯೂ ಹಾಗೆಯೆ; ಎಂಬ ನಮ್ಮ ಹಳೆಯ, ಆಧಾರಗಳಿಲ್ಲದ, ಸಿದ್ಧಾಂತಗಳಿಗೆ ಇಲ್ಲಿ ತಕ್ಕ ಉತ್ತರ ದೊರೆಯುತ್ತದೆ. ಒಟ್ಟಿನಲ್ಲಿ ಮಕ್ಕ ಳಿಗೆ ಇದು ಜಗತ್ತಿನ ಬಾಲ್ಯವನ್ನು, ಜಗತ್ತು ಕ್ಷಣ-ಕ್ಷಣಕ್ಕೂ ವಿಕಾಸ ಹೊಂದುತ್ತಿರುವುದನ್ನು ಹೇಳಿಕೊಡುತ್ತದೆ; ದೊಡ್ಡವರಿಗೆ ನಿಜವಾದ ಜಗತ್ತೆಂದರೆ ಏನು, ಎಂಬುದನ್ನು ಯೋಚಿಸತೊಡಗಿಸುತ್ತದೆ.

ಪಂ. ಜವಾಹರಲಾಲರ ಈ ಪುಸ್ತಕವನ್ನು ಕನ್ನಡಿಸಿ ಅಂತಹ ಮಹಾವ್ಯಕ್ತಿಗಳ ಸಾಹಿತ್ಯವನ್ನು ನಮ್ಮ ಬಡ 'ಭಾಂಡಾರ'ದ

ಮೂಲಕ ಕನ್ನಡ ಓದುಗರಿಗೆ ಒದಗುವಂತೆ ಮಾಡಿದ ಶ್ರೇಯಸ್ಸು ಶ್ರೀ. ಕಪಟರಾಳ ಕೃಷ್ಣರಾಯರಿಗೆ ಸಲ್ಲಬೇಕು. ಪಂ. ಜವಾಹರಲಾಲರ ಅಪ್ಪಣೆ ದೊರಕಿಸಲು ನಮಗೆ ಸರಿಯಾದ ಹಾದಿ ತೋರಿಸಿದವರು ಡಾ. ಹರಡೀಕರರು. ಈ ಹಿರಿಯ ಮುಂದಾಳುಗಳ ನೆರವು ನಮಗೆ ಸಿಕ್ಕಿರದಿದ್ದರೆ ನಮ್ಮ ಕೆಲಸ ಅಲ್ಲಿಗೇ ನಿಲ್ಲುತಿತು. ಮುದ್ರಣಕ್ಕಾಗಿ ಸಿದ್ಧವಾದ ಹಸ್ತ-ಪ್ರತಿ ನಮ್ಮ ಕೈಗೆ ಬಂದಮೇಲೆ, ಅದನ್ನು ನನ್ನಿಂದ ಸಂಪೂರ್ಣವಾಗಿ ಓದಿಸಿ, ಕೇಳಿ, ಕೆಲವು-ಕಡೆಗಳಲ್ಲಿ ತಿದ್ದಿದವರು ಹುಬ್ಬಳ್ಳಿಯ ಆ್ಯಡ್ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀ. ಸ. ಪ. ಗಾವಕರ ಬಿ. ಎ. ಅವರು. ಆದುದರಿಂದ ಭಾಷಾಂತರಕಾರರ ಪರವಾಗಿ ಶ್ರೀ. ಗಾವಕರರ ಆಭಾರ ಮನ್ನಿಸುವುದೂ ನಮ್ಮ ಕರ್ತವ್ಯ. ಮುದ್ದಾಗಿ, ಆದರೆ ತೀರ ಅಲ್ಪಾವಧಿಯಲ್ಲಿ ಮುದ್ರಿಸಿದವರು ಸಂಯುಕ್ತ ಕರ್ನಾಟಕ ಮುದ್ರಣಾಲಯದವರು. ಇವರೆಲ್ಲರಿಗೂ ನಾವು ಋಣಿಗಳು. ತಮ್ಮ ಪುಸ್ತಕವನ್ನು ಕನ್ನಡದಲ್ಲಿ ಮುದ್ರಿಸಲು ಅಪ್ಪಣೆ ಕೊಟ್ಟು ಅನೇಕ ಸಲಹೆ ಸೂಚನೆಗಳನ್ನಿತ್ತ ಪಂ. ಜವಾಹರಲಾಲರಿಗೆ ಅನಂತ ಕೃತಜ್ಞತೆಗಳು.

ಚೈತ್ರ ಶುದ್ಧ ಪ್ರತಿಪದೆ,
ಚಾಲುಕ್ಯ ವಿಕ್ರಮ ವರ್ಷ ೮೬೬
೨೮—೩—೪೧

ಪ್ರಕಾಶಕ

ಭಾಷಾಂತರಕಾರನ ಎರಡು ಮಾತುಗಳು

ಪಂಡಿತ ಜವಾಹರಲಾಲ ನೆಹರೂ ಅವರು ಮಕ್ಕಳಿಗಾಗಿ ಬರೆದ **"Father's letters to his daughter"** ಎಂಬ ಇಂಗ್ಲೀಷು ಪುಸ್ತಕದ ಭಾಷಾಂತರವಿದು. ಇದನ್ನು ಕನ್ನಡಿಸಿರುವುದೂ ಮಕ್ಕಳಿಗಾಗಿಯೆ.

ಗ್ರಂಥಸ್ಥ ಭಾಷೆಗೂ ಮಾತನಾಡುವ ಭಾಷೆಗೂ ಕನ್ನಡದಲ್ಲಿ ವ್ಯತ್ಯಾಸವಿರುವಾಗ, ಭಾಷಾಂತರ ಆದಷ್ಟು ಸುಲಭವಾಗಿರಬೇಕೆಂಬ ದೃಷ್ಟಿಯುಳ್ಳ ನಾನು ಪುಸ್ತಕದ ಭಾಷೆಗಿಂತ ಮನೆ-ಮಾರು, ಹಳ್ಳಿ-ಪಳ್ಳಿಗಳಲ್ಲಿ ಬಳಕೆ ಇರುವ ನುಡಿಗೆ ಮಹತ್ವ ಕೊಡಬೇಕಾಯಿತು. ಅದರಿಂದ ನಮ್ಮ ನಿಜಾಮು ಕರ್ನಾಟಕದಲ್ಲಿಯ ಎಷ್ಟೊ ಶಬ್ದಗಳೂ ವಾಕ್ಪ್ರಯೋಗಗಳೂ ತಾವಾಗಿಯೆ ಬರತೊಡಗಿದವು. ಆದರೆ ಉಳಿದ ಭಾಗಗಳ ಕನ್ನಡಿಗರಿಗೆ ಇದನ್ನು ಓದಿ ತಿಳಿಯಲು ತೊಂದರೆಯಾದೀತೆಂಬ ಭಯ ಮಾತ್ರ ತಪ್ಪಲಿಲ್ಲ. ಈ ಸೀಮೆಗಳ ಹಳ್ಳಿಗಳ ನುಡಿಯ ಪರಿಚಯ ನನಗಿಲ್ಲ. ಅದರಿಂದ ತುಲನೆ ಮಾಡಿ ನೋಡುವುದು ಅಸಾಧ್ಯವಾಯಿತು. ಆದರೂ ಹೊಸ ಶಬ್ದಗಳನ್ನು ಕಲ್ಪಿಸುವಾಗ ಅವು ಎಲ್ಲರಿಗೂ ತಿಳಿಯಬೇಕೆಂಬ ದೃಷ್ಟಿಯನ್ನಿಡಲಾಗಿದೆ. ಒಂದೆರಡು ಕಡೆಗೆ ಇವುಗಳ ಇಂಗ್ಲೀಷು ರೂಪವನ್ನು ಕೂಡ ಬಳಸಲಾಗಿದೆ.

ಭಾಷಾಂತರದ ಕೆಲಸ ಮುಗಿದ ಮೇಲೆ ಇದನ್ನು ತಿದ್ದಲು ನನ್ನ ಗೆಳೆಯರೂ ಕಲ್ಬುರ್ಗಿ ಉಸ್ಮಾನಿಯಾ ಕಾಲೇಜಿನ ಕನ್ನಡ ಲೆಕ್ಚರರೂ ಆದ ಶ್ರೀ. ತವಗದ ಭೀಮಸೇನರಾಯರು ಬಿ. ಎ. ಬಿ. ಟಿ. ಇವರಿಗೆ ಒಪ್ಪಿಸಿದೆನು. ಅವರ ಒಲವು ಈಗಿನ ಹೊಸ-ಗನ್ನಡದ ಕಡೆಗೆ. ನಿಜಾಮು ಕನ್ನಡದ ಬಳಕೆಯ ನುಡಿಯನ್ನೂ ಬಲ್ಲ ಅವರು ನನ್ನ ಎಷ್ಟೋ ಪ್ರಯೋಗಗಳನ್ನು ತೆಗೆದು ಹಾಕಿ, ಕೆಲವಕ್ಕೆ ಹೊಸ ರೂಪು ಕೊಟ್ಟು ತಿದ್ದಿ ನಮ್ಮಿಬ್ಬರಿಗೂ ಒಪ್ಪಿಗೆಯಾಗುವಂತೆ ಮಾಡಿದರು. ಶುದ್ಧ ಪ್ರತಿಯನ್ನು ಬರೆದವರೂ ಅವರೇ.

ಇದೆಲ್ಲ ಮುಗಿದು ಆರು ವರುಷಗಳಾಗಿದ್ದರೂ ಹಸ್ತ-ಪ್ರತಿ ಪ್ರಕಾಶವನ್ನು ಕಾಣದೆ ಹಾಗೆಯೆ ಉಳಿಯಿತು. ಹುಬ್ಬಳ್ಳಿಯ ಸಾಹಿತ್ಯ ಭಾಂಡಾರದ ಒಡೆಯರು ಅಕಸ್ಮಾತ್ತಾಗಿ ಇಲ್ಲಿಗೆ ಬಂದಾಗ ಇದನ್ನು ನೋಡಿ ತಾವು ಪ್ರಕಾಶಕ್ಕೆ ತರುವುದಾಗಿ ಒಪ್ಪಿಕೊಂಡರು. ಪ್ರಕಾಶಕರು ಅಖಿಲ ಕರ್ನಾಟಕ ದೃಷ್ಟಿಯನ್ನಿಡ ಬೇಕಾಗುವುದು. ಅದರಿಂದ ಅವರು ಪ್ರತಿಯನ್ನು ಇನ್ನೊಮ್ಮೆ ತಿದ್ದಲು ತಿರಿಗಿ ನಮ್ಮಲ್ಲಿಗೆ ಬಂದರು. ಮುಂದೆ ಮೂವರೂ ಕೂಡಿ ಅದನ್ನು ಓದಿ ತಿದ್ದಿದೆವು.

ಇಷ್ಟೆಲ್ಲ ಸಂಸ್ಕಾರಗಳಾದರೂ ನನ್ನ ಮೂಲ ಧೋರಣ ಉಳಿಯಲೇ ಬೇಕಾದುದರಿಂದ ಕೆಲವು ಶಬ್ದಗಳಿಗೆ ಅರ್ಥ ಕೊಡುವುದು ಅನಿವಾರ್ಯವಾಯಿತು. ಮೂಲ ಗ್ರಂಥದ ಸಾಮರ್ಥ್ಯವನ್ನು ಕನ್ನಡದಲ್ಲಿ ತರಲು ಶಕ್ತ್ಯಾನುಸಾರ ಯತ್ನಿಸಲಾಗಿದೆ. ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆಯೆಂಬುದನ್ನು ಓದುಗರೇ ನಿರ್ಣಯಿಸಬೇಕು.

ಮೂಲ ಗ್ರಂಥವನ್ನು ಒದಗಿಸಿ ಕೊಟ್ಟು, ಅದನ್ನು ಕನ್ನಡಿಸಲು ನನ್ನನ್ನು ಪ್ರೋತ್ಸಾಹಿಸಿ, ಮೇಲಿಂದ-ಮೇಲೆ ಸೂಕ್ತ ಸಲಹೆಗಳನ್ನಿತ್ತ ನನ್ನ ಗೆಳೆಯರಾದ ಶ್ರೀ. ಹನುಮಸಾಗರ ವಾಜೇಂದ್ರರಾಯರಿಗೂ ವಿಶೇಷತಃ ಅದನ್ನು ಪರಿಷ್ಕರಿಸುವಲ್ಲಿ ಶ್ರಮವಹಿಸಿದ ಗೆಳೆಯ ಶ್ರೀ. ತವಗದ ಭೀಮಸೇನರಾಯರಿಗೂ ನಾನು ಚಿರಋಣಿ. ಈ ಗ್ರಂಥವನ್ನು ಬೆಳಕಿಗೆ ತಂದ ಸಾಹಿತ್ಯ ಭಾಂಡಾರದ ಶ್ರೀ. ಮಂಗಳೂರು ಗೋವಿಂದರಾಯರಿಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೊನೆಗೆ, ಕನ್ನಡ ಮಹಾ ಜನರಲ್ಲಿ ಇದೊಂದು ನನ್ನ ವಿಜ್ಞಾಪನೆ:—

ಅವಧರಿಪುದು ವಿಬುಧರ್ ದೋ।
ಷವಿದರೊಳೇನಾನುಮುಳ್ಳೊಡಂ ಪ್ರಿಯದಿಂ ತಿ॥
ದ್ದುವುದು ಗುಣಯುಕ್ತಮುಂ ದೋ।
ಷ ವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ॥ (ಕೇಶಿರಾಜ)

ಕಲ್ಬುರ್ಗಿ
೨—೩—೪೧

ಕನ್ನಡಿಗರ ಅಡಿಯಾಳು,
ಕಪಟ್ರಾಳ ಕೃಷ್ಣ

ಇಂಗ್ಲಿಷ್ ಆವೃತ್ತಿಗಳಿಗೆ

ಪಂ. ಜವಾಹರಲಾಲರ

ಮುನ್ನುಡಿ

ನನ್ನ ಮಗಳು ಇಂದಿರೆ ೧೯೨೮ರ ಬೇಸಿಗೆಯಲ್ಲಿ ಹಿಮಾಲಯದ ಮುಸೂರಿಯಲ್ಲಿದ್ದಳು. ನಾನು ಕೆಳಗಿನ ಬೈಲು ಪ್ರದೇಶದಲ್ಲಿ, ಅಲಹಾಬಾದಿನಲ್ಲಿದ್ದೆನು. ಆಗ ಅವಳಿಗೆ ಬರೆದ ಓಲೆಗಳಿವು. ಇವು, ಹತ್ತು ವರುಷದ ಚಿಕ್ಕ ಹುಡಿಗೆಯೊಬ್ಬಳಿಗೆ ಬರೆದ ನಮ್ಮ-ನಮ್ಮೊಳಗಿನ ಕಾಗದಗಳು. ತಮ್ಮ ಸಲಹೆಗಳ ಮೂಲಕ ನನ್ನ ಆದರಕ್ಕೆ ಪಾತ್ರರಾದ ಸ್ನೇಹಿತರು ಈ ಓಲೆಗಳಲ್ಲಿ ಕೆಲವು ಗುಣಗಳನ್ನು ಕಂಡು ಇವುಗಳನ್ನು ಹತ್ತು ಜನರೆದುರು ಇಡಲು ನನಗೆ ಸೂಚಿಸಿದರು. ಉಳಿದ ಹುಡುಗರೂ ಹುಡಿಗೆಯರೂ ಇವುಗಳನ್ನು ಮೆಚ್ಚುವರೊ ಇಲ್ಲವೊ ನನಗೆ ತಿಳಿಯದು. ಆದರೆ ಇವುಗಳನ್ನು ಓದಿದವರು ಈ ಜಗತ್ತೆಂದರೆ ಬೇರೆ ಬೇರೆ ರಾಷ್ಟ್ರಗಳ ದೊಡ್ಡ ಕುಟುಂಬವೆಂದು ತಿಳಿಯಲು ಕಲಿಯುವರೆಂದು ನನ್ನ ನಂಬುಗೆ. ನಾನು ಇವುಗಳನ್ನು ಬರೆಯುವಾಗ ನನಗೆ ಆದ ಆನಂದದ ಒಂದಂಶವನ್ನಾದರೂ ಓದುಗರು ಪಡೆಯುವರೆಂದು ಸಂಕೋಚದಿಂದಲಾದರೂ ನಾನು ತಿಳಿಯುತ್ತೇನೆ.

ಈ ಪತ್ರಗಳನ್ನು ಬರೆಯುವುದನ್ನು ಒಮ್ಮಿಂದೊಮ್ಮೆ ನಿಲ್ಲಿಸಲಾಗಿದೆ. ನಿಡಿದಾದ ಬೇಸಿಗೆ ಮುಗಿಯಿತು. ಇಂದಿರೆ ಪರ್ವತ ಪ್ರದೇಶದಿಂದ ಕೆಳಗಿನ ಸೀಮೆಗೆ ಬರಬೇಕಾಯಿತು. ೧೯೨೯ರಲ್ಲಿ ಅವಳು ಮುಸೂರಿಗಾಗಲಿ ಇಲ್ಲವೆ ಇನ್ನಾವ ಬೇಸಿಗೆಯ ಬೀಡಿ (Hill station) ಗಾಗಲಿ ಹೋಗಲಿಲ್ಲ. ಕೊನೆಯ ಮೂರು ಓಲೆಗಳು ಹೊಸ ಕಾಲವೊಂದನ್ನು ಕುರಿತವು. ಈ ಸಂಗ್ರಹದಲ್ಲಿ ಇವುಗಳಿಗೆ ಎಡೆಗೊಟ್ಟದ್ದು ಅಷ್ಟೇನೂ ಸರಿಯಾದುದಲ್ಲ. ಆದರೆ ಇವುಗಳನ್ನು ಇನ್ನೂ ಬೆಳೆಯಿಸುವ ಸಂದರ್ಭವಿಲ್ಲದುದರಿಂದ ಇಲ್ಲಿ ಸೇರಿಸಲಾಗಿದೆ.

ಈ ಓಲೆಗಳು ಇಂಗ್ಲೀಷಿನಲ್ಲಿರುವುದರಿಂದ ಇವು ಹೆಚ್ಚು ಜನರಿಗೆ ಉಪಯೋಗವಾಗಲಾರವು. ಇದನ್ನು ನಾನು ಬಲ್ಲೆ. ಇದರ ಎಲ್ಲ ತಪ್ಪೂ ನನ್ನದು. ಈಗ ಇದನ್ನು ಭಾಷಾಂತರಿಸಿ ಮಾತ್ರ ನಾನು ಈ ತಪ್ಪನ್ನು ತಿದ್ದಿಕೊಳ್ಳ ಬಲ್ಲೆ. ಈಗ ಇದನ್ನು ಹಿಂದಿಯಲ್ಲಿ ಭಾಷಾಂತರಿಸುವ ಕೆಲಸ ನಡೆದಿದೆ. ಎಲ್ಲವೂ ಸರಿಯಾಗಿ ನಡೆದರೆ ಅದು ಬೇಗನೆ ಬೆಳಕನ್ನು ಕಾಣಬಹುದು.

ಅಲಹಾಬಾದು
ನವಂಬರು, ೧೯೨೯ } **ಜವಾಹರಲಾಲ ನೆಹರು**

ಎರಡನೆ ಆವೃತ್ತಿಯ ಮುನ್ನುಡಿ

ನನ್ನ ಮಗಳಿಗಷ್ಟೇ ಉದ್ದೇಶಿಸಿದ್ದ ಈ ಓಲೆಗಳನ್ನು ಇನ್ನೂ ಹೆಚ್ಚು ಜನರೆದುರು ಇಡಲು ನಾನು ಹಿಂದು-ಮುಂದು ನೋಡುತ್ತಲಿದ್ದೆ. ಆದರೆ ಮುದ್ರಣಾಲಯವೂ ಅದಕ್ಕೂ ಹೆಚ್ಚಾಗಿ ಜನತೆಯೂ ತೋರಿಸಿದ ಆದರ, ನನ್ನಲ್ಲಿ ಧೈರ್ಯವನ್ನು ತುಂಬಿ ಭಯ ಸಂಶಯಗಳನ್ನು ಹಿಂದೆ ಸರಿಸಿತು. ಮೊದಲನೆ ಮುದ್ರಣದ ಪ್ರತಿಗಳು ಬಹಳ ಹಿಂದೆಯೆ ಮುಗಿದುವು. ಈ 'ಓಲೆಗಳನ್ನು' ಬರೆದವನಿಗೂ ಒಂದು ಪ್ರತಿ ಉಳಿಯಲಿಲ್ಲ. ಆದುದರಿಂದ ಎರಡನೆ ಆವೃತ್ತಿಯನ್ನು ಅಚ್ಚು-ಹಾಕಲಾಗಿದೆ. ಕೆಲವು ಚಿಕ್ಕ-ಪುಟ್ಟ ತಪ್ಪುಗಳ ಹೊರತು ಇನ್ನಾವ ತಿದ್ದುಪಾಟನ್ನೂ ಮಾಡಲಿಲ್ಲ.

ಈ ಚಿಕ್ಕ ಪುಸ್ತಕಕ್ಕೆ ದೊರೆತ ಸ್ವಾಗತದಿಂದ ಧೈರ್ಯಗೊಂಡು ಈ ಓಲೆಗಳಿಗೆ ಇನ್ನೂ ಕೆಲವನ್ನು ಕೂಡಿಸಲು ಯೋಚಿಸಿದೆನು. ಆದರೆ ಅಸೂಯಾಪರಳಾದ ಒಡತಿಯೊಬ್ಬಳ ಸೇವೆಯಲ್ಲಿ ತೊಡಗಿದುದರಿಂದ

ನನಗೆ ಉಳಿದ ಕೆಲಸಗಳಲ್ಲಿ ಕೈಹಾಕುವ ಮನಸ್ಸಾಗಲಿಲ್ಲ; ಬಿಡುವೂ ಸಿಗಲಿಲ್ಲ. ಕಳೆದ ವರುಷ ನಾನು ನೈನಿ ಸೆರೆಮನೆಗೆ ಹೋದಾಗ ತಿರಿಗಿ ಈ ವಿಚಾರ ತಲೆ-ದೋರಿತು. ಅಲ್ಲಿ ವೇಳೆಗೂ ಕೊರತೆ ಇರಲಿಲ್ಲ. ಆದರೆ ಸೆರೆಮನೆಯಿಂದ ಬರೆಯಬಹುದಾದ ಓಲೆಗಳು ಬಹಳವಾಗಲಾರವು; ಇದಲ್ಲದೆ ಅಲ್ಲಿ ಸಂದರ್ಭ ಗ್ರಂಥಗಳು ದೊರೆಯುವುದಿಲ್ಲ. ಇಷ್ಟೇ ಅಲ್ಲದೆ ದಿನ-ದಿನಕ್ಕೂ ರೂಪುಗೊಳ್ಳುತ್ತಿರುವ ಭಾರತೀಯ ಇತಿಹಾಸದಲ್ಲಿ ನನ್ನ ಮನಸ್ಸು ಹೆಚ್ಚಾಗಿ ತೊಡಗಿರುವಾಗ ಆ ಹಾಳು ಹಿಂದಿನ ಕಾಲದ ಗೊಡವೆ ಏಕೆ, ಎಂದೆನಿಸಿತು. ಆ ಮೇಲೆ ಸೆರೆಮನೆಯಿಂದ ಬಿಡುಗಡೆ ಹೊಂದಿ ಒಂದೇ ವಾರದಲ್ಲಿ ಹಿಂದಿರುಗಬೇಕಾಯಿತು. ಮತ್ತೆ ಎಷ್ಟೋ ತಿಂಗಳು ಸಂದುವು. ಈ ಓಲೆಗಳನ್ನು ಬರೆಯುವ ಕೆಲಸವನ್ನು ಮುಂದುವರಿಸಬೇಕೆಂದು ಇದೇ ವರುಷದ ಜನವರಿಯ ಮೊದಲನೆ ದಿನ ನಿಶ್ಚಯಿಸಿದೆನು. ಈ ಕೆಲಸದಲ್ಲಿ ಸ್ವಲ್ಪ ಪ್ರಗತಿಯೂ ಆಯಿತು. ಆದರೆ ತೀರ ಬೇಗನೆ, ಜನವರಿ ೨೬ರ ದಿನ ಒಮ್ಮಿಂದೊಮ್ಮೆ ನನ್ನ ಬಿಡುಗಡೆಯಾಯಿತು. ಮನೆ-ಮಾರಿನ ಚಿಂತೆ ಮತ್ತು ಸಾರ್ವಜನಿಕ ಕೆಲಸಗಳ ಮಡುವು ತಮ್ಮ ಸುಳಿಯಲ್ಲಿ ನನ್ನನ್ನು ಹಿಡಿದು ಅಲ್ಲಿಂದ ಇಲ್ಲಿಗೂ ಇಲ್ಲಿಂದ ಅಲ್ಲಿಗೂ ತೂರ-ತೊಡಗಿದುವು. ಆದುದರಿಂದ ಈ ಕೆಲಸವನ್ನು ಮುಂದೆ ಸಾಗಿಸಲು ಸೆರೆಮನೆಯ ಚಿಕ್ಕ ಕೋಣೆಯೊಳಗಿನ ಸಮಾಧಾನವನ್ನೂ ಶಾಂತಿಯನ್ನೂ ನಾನು ಇದಿರು ನೋಡುತಿದ್ದೇನೆ.

ಈ ನಡುವೆ ಇಂದಿರೆ ದೊಡ್ಡವಳಾಗುತಿದ್ದಾಳೆ. ದಿನ-ದಿನವೂ ಬೆಳೆಯುತ್ತಿರುವ ಅವಳ ತಿಳಿವಳಿಕೆಯೊಂದಿಗೆ ಬಹಳ ಕಾಲದ ವರೆಗೆ ನಾನು ನಡೆಯಲಾರೆ.

ಅಲಹಾಬಾದು
ಅಕ್ಟೋಬರು, ೧೯೩೧

ಜವಾಹರಲಾಲ ನೆಹರು

ಮಗಳಿಗೆ

ತಂದೆಯ ಓಲೆಗಳು

೧

ಸೃಷ್ಟಿಯ ಪುಸ್ತಕ

ಪ್ರಿಯ ಇಂದಿರಾ,

ನೀನೂ ನಾನೂ ಕೂಡಿರುವಾಗ ನೀನು ನನಗೆ ಆಗಿಂದಾಗ ಅನೇಕ ವಿಷಯಗಳನ್ನು ಕೇಳುತ್ತಿರುವಿ. ನಾನು ಅವುಗಳಿಗೆ ಉತ್ತರ ಕೊಡಲು ಯತ್ನಿಸುತ್ತಿರುವೆನು. ಈಗ ನೀನು ಮಸೂರಿಯಲ್ಲಿರುವಿ; ನಾನು ಅಲಹಾಬಾದಿನಲ್ಲಿ. ಆದುದರಿಂದ ನಾವು ಹಾಗೆ ಮಾತಾಡ ಲಾರೆವು. ಅದಕ್ಕಾಗಿಯೇ ನಾನು ನಿನಗಾಗಿ ನಮ್ಮ ಭೂಮಿ ಮತ್ತು ಅದರಲ್ಲಿ ಉಂಟಾಗಿರುವ ಸಣ್ಣ ದೊಡ್ಡ ದೇಶಗಳ ಕಿರಿಯ ಚರಿತೆಯನ್ನು ಕಾಲ ಕಾಲಕ್ಕೆ ಬರೆಯುತ್ತಿರುವೆನು. ನೀನು ಇಂಗ್ಲಂಡಿನ ಇತಿಹಾಸ ವನ್ನೂ ಭಾರತದ ಇತಿಹಾಸವನ್ನೂ ಅಲ್ಪಸ್ವಲ್ಪ ಓದಿಕೊಂಡಿರುವಿ. ಇಂಗ್ಲಂಡು ಒಂದು ಚಿಕ್ಕ ನಡುಗಡ್ಡೆಯಾಗಿರುವುದು. ಭರತಖಂಡ ದೊಡ್ಡ ದೇಶವಾಗಿದ್ದರೂ ಭೂಮಿಯ ಹೊರ ಮೈಯ್ಯ ಸಣ್ಣ ಭಾಗವೇ ಸರಿ. ಈ ನಮ್ಮ ಜಗತ್ತಿನ ಚರಿತೆಯ ಬಗೆಗೆ ನಾವು ಏನಾದರೂ ತಿಳಿದು ಕೊಳ್ಳಬೇಕಾದರೆ ನಾವು ಹುಟ್ಟಿರುವ ಚಿಕ್ಕ ದೇಶವನ್ನು ಮಾತ್ರವಲ್ಲದೆ ಉಳಿದೆಲ್ಲ ದೇಶಗಳನ್ನೂ, ಅವುಗಳಲ್ಲಿ ನೆಲೆಗೊಂಡಿರುವ ಎಲ್ಲ ಜನರನ್ನೂ ಕುರಿತು ಯೋಚಿಸಬೇಕಾಗುತ್ತದೆ.

ಈ ನನ್ನ ಪತ್ರಗಳಲ್ಲಿ ನಾನು ನಿನಗೆ ಸ್ವಲ್ಪವನ್ನು ಮಾತ್ರ ಹೇಳ ಬಲ್ಲೆನು. ಅದು ಸ್ವಲ್ಪವೇ ಆದರೂ ನಿನಗೆ ಮೆಚ್ಚಿಕೆಯಾಗಿ ಈ ಜಗ ತ್ತನ್ನು ಒಟ್ಟಾಗಿ ನೋಡುವುದಕ್ಕೂ ಅದರಲ್ಲಿರುವ ಬೇರೆ ಬೇರೆ ಜನರು ನಮ್ಮ ಸಹೋದರ ಸಹೋದರಿಯರೆಂದು ತಿಳಿಯುವುದಕ್ಕೂ ನಿನ್ನನ್ನು ತೊಡಗಿಸುವುದೆಂದು ನನ್ನ ನಂಬುಗೆ. ನೀನು ದೊಡ್ಡವಳಾಗಿ, ಭೂಮಿ

ಮತ್ತು ಅದರಲ್ಲಿ ಆಗಿ ಹೋಗಿರುವ ಚರಿತೆಯ ವಿಷಯದಲ್ಲಿ ದೊಡ್ಡ ದೊಡ್ಡ ಪುಸ್ತಕಗಳನ್ನು ಓದಿಕೊಳ್ಳುವಾಗ ಮಿಕ್ಕ ಯಾವ ಕತೆ-ಕಾದಂಬರಿಗಳೂ ನಿನಗೆ ಅಷ್ಟು ಒಗ್ಗಲಾರವು.

ನಮ್ಮ ಭೂಮಿ ಕೋಟ್ಯನುಕೋಟಿ ವರ್ಷಗಳದ್ದಾಗಿಯೂ ಬಹಳೇ ಬಹಳ ಪುರಾತನದ್ದಾಗಿಯೂ ಇರುವ ಸಂಗತಿ ನಿನಗೆ ಗೊತ್ತೇ ಇದೆ. ಎಷ್ಟೋ ಕಾಲದ ವರೆಗೆ ಅಲ್ಲಿ ಹೆಂಗುಸರಾಗಲಿ ಗಂಡುಸರಾಗಲಿ ಇದ್ದಿಲ್ಲ. ಮನುಷ್ಯರು ಕಾಣಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲಿ ಬೇರೆ ಪಶುಗಳಿದ್ದುವು. ಈ ಪಶುಗಳಿಗಿಂತ ಮೊದಲು ಯಾವ ತರದ ಪ್ರಾಣಿಯೂ ಭೂಮಿಯ ಮೇಲೆ ಇಲ್ಲದಿರುವ ಕಾಲವೊಂದಿತ್ತು. ಎಲ್ಲ ತರದ ಪ್ರಾಣಿಗಳಿಂದ ಮತ್ತು ಮನುಷ್ಯರಿಂದ ಈಗ ಇಷ್ಟೊಂದು ತುಂಬಿ ಕೊಂಡಿರುವ ಈ ನಮ್ಮ ಜಗತ್ತು, ಇವೆಲ್ಲವುಗಳಿಲ್ಲದೇ ಹೇಗಿತ್ತೆಂದು ಊಹಿಸುವುದು ಬಹಳ ಕಷ್ಟ. ಆದರೆ ಈ ಭೂಮಿ ಅತಿಶಯ ಉಷ್ಣ ಮಯವಾಗಿದ್ದು, ಪ್ರಾಣಿಗಳು ಇದರಲ್ಲಿ ಬಾಳಿಕೊಂಡಿರಲು ಅಶಕ್ಯವಾದ ಕಾಲವೊಂದಿತ್ತೆಂದು ಶಾಸ್ತ್ರಜ್ಞರೂ, ಇಂತಹ ಸಂಗತಿಗಳನ್ನೆ ಕುರಿತು ವಿಶೇಷವಾಗಿ ಅಭ್ಯಾಸ ಮತ್ತು ವಿಚಾರ ಮಾಡಿದವರೂ ನಮಗೆ ಹೇಳು ವರು. ನಾವು ಅವರ ಪುಸ್ತಕಗಳನ್ನೋದಿದರೆ, ಬೆಟ್ಟಗಳು ಮತ್ತು ಫಾಸಿಲ್—ಎಂದರೆ ಪೂರ್ವಕಾಲದ ಪ್ರಾಣಿಗಳ ಅವಶೇಷ—ಗಳನ್ನು ನೋಡಿದರೆ ಇದು ಹೀಗೆಯೇ ಇದ್ದಿರಬಹುದೆಂದು ನಮಗೂ ಎನಿಸು ತ್ತದೆ.

ನೀನು ಇತಿಹಾಸವನ್ನು ಓದುವೆ. ಆದರೆ ಮನುಷ್ಯರಿಲ್ಲದ ಪೂರ್ವಕಾಲದಲ್ಲಿ ಪುಸ್ತಕಗಳೇ ಬರೆಯಲ್ಪಡುತ್ತಿದ್ದಿಲ್ಲವೆಂಬುದು ಖಂಡಿತ. ಹಾಗಾದರೆ ಆಗ ನಡೆದುದನ್ನು ನಾವು ಕಂಡುಹಿಡಿ ಯುವುದು ಹೇಗೆ? ಕುಳಿತಲ್ಲಿಯೇ ನಾವು ಎಲ್ಲವನ್ನೂ ಯೋಚಿಸ ಲಾರೆವು. ನಮಗೆ ಬೇಕಾದ ಹಾಗೆ ನಾವು ಯೋಚಿಸಿ ಒಳ್ಳೇ ಸುಂದರ ವಾದ ಕಟ್ಟು-ಕತೆಗಳನ್ನು ಮಾತ್ರ ರಚಿಸಬಲ್ಲೆವು. ಅವು ಒಳ್ಳೇ ಮನೋರಂಜಕವಾಗಿಯೂ ಆಗಬಹುದು. ಆದರೆ ಅವು ನಿಜವಾಗಿರ ಲಾರವು. ಯಾಕೆಂದರೆ, ನಾವು ಕಣ್ಣಾರೆ ನೋಡಿದ ಸಂಗತಿಗಳನ್ನು

ಅವು ಹೊಂದಿಕೊಂಡಿರುವುದಿಲ್ಲ. ಅಂತಹ ಪ್ರಾಚೀನ ಕಾಲದಲ್ಲಿ ಬರೆದ ಪುಸ್ತಕಗಳು ನಮಗೆ ದೊರೆಯದಿದ್ದರೂ, ಎಲ್ಲವನ್ನೂ ಒಳ್ಳೆಯ ರೀತಿಯಿಂದ ತಿಳಿಸುವ ಪುಸ್ತಕಗಳಂತೆ, ಅನೇಕ ಸಂಗತಿಗಳನ್ನೊಳಗೊಂಡ ಪದಾರ್ಥಗಳು, ಸುದೈವದಿಂದ ನಮಗೆ ದೊರೆಯುತ್ತವೆ. ಬೆಟ್ಟ, ಗುಡ್ಡ, ಸಮುದ್ರ, ಹೊಳೆ, ಚುಕ್ಕೆ, ಕಾಡು ಮತ್ತು ಹಳೆಯ ಪಶುಗಳ ಅವಶೇಷಗಳು ನಮಗೆ ಸಿಗುತ್ತವೆ. ಇವುಗಳಾಗಲಿ ಇಂತಹ ಇನ್ನುಳಿದ ಪದಾರ್ಥಗಳಾಗಲಿ ಪೃಥ್ವಿಯ ಪ್ರಾಚೀನ ಚರಿತೆಯ ಪುಸ್ತಕಗಳಾಗಿವೆ. ಈ ಚರಿತೆಯನ್ನು ಅರಿತುಕೊಳ್ಳುವ ನಿಜವಾದ ಮಾರ್ಗವೆಂದರೆ, ಬೇರೆಯವರು ಬರೆದ ಪುಸ್ತಕಗಳನ್ನು ಓದುವುದು ಮಾತ್ರವಲ್ಲ; ಆದರೆ ಪ್ರತ್ಯಕ್ಷ ಸೃಷ್ಟಿಯ ಪುಸ್ತಕದೆಡೆಗೆ ತೆರಳುವುದು. ಗುಡ್ಡ ಬೆಟ್ಟಗಳಿಂದ ಈ ಚರಿತೆಯನ್ನು ಹೇಗೆ ಓದಬೇಕೆಂಬುದನ್ನು ನೀನು ಬೇಗನೆ ಕಲಿತುಕೊಳ್ಳುವಿಯೆಂದು ನನ್ನ ಭಾವನೆ. ಅದು ಎಷ್ಟು ಚಿತ್ತಾಕರ್ಷಕವಾಗಿರುವುದೆಂಬುದನ್ನು ಯೋಚಿಸು! ದಾರಿಯಲ್ಲಿ ಇಲ್ಲವೆ ಗುಡ್ಡದ ಬದಿಯಲ್ಲಿ ಬಿದ್ದಿರುವ ಪ್ರತಿಯೊಂದು ಸಣ್ಣ ಕಲ್ಲು ಸೃಷ್ಟಿಯ ಪುಸ್ತಕದ ಚಿಕ್ಕ ಓಲೆಯಾಗಬಹುದು. ಮತ್ತು ಅದನ್ನು ಹೇಗೆ ಓದಬೇಕೆಂಬುದನ್ನು ನೀನು ಅರಿತುಕೊಂಡರೆ ಮಾತ್ರ ಅದು ನಿನಗೆ ಏನಾದರೊಂದನ್ನು ತಿಳಿಸಬಹುದು. ಹಿಂದಿ, ಕನ್ನಡ, ಇಂಗ್ಲೀಷು ಅಥವಾ ಯಾವ ಭಾಷೆಯನ್ನು ಓದುವುದಾದರೂ ಮೊದಲು ಅದರ ಅಕ್ಷರಗಳನ್ನು ನೀನು ಕಲಿಯುವೆ. ಆದರಂತೆ, ಬೆಟ್ಟ ಮತ್ತು ಕಲ್ಲಿನ ಪುಸ್ತಕಗಳಲ್ಲಿ ಸೃಷ್ಟಿಯ ಚರಿತೆಯನ್ನು ಓದುವ ಮೊದಲು ನೀನು ಆ ಸೃಷ್ಟಿಯ ಅಕ್ಷರಗಳನ್ನು ಕಲಿತುಕೊಳ್ಳಬೇಕು. ಇದನ್ನು ಹೇಗೆ ಓದಬೇಕೆಂಬುದು ಈಗಾಗಲೇ ನಿನಗೆ ತುಸು ತಿಳಿದಿರಬಹುದು. ಹೊಳಪಿರುವ ದುಂಡಗಾದ ಸಣ್ಣ ಮಿಣ್ಣೆಯನ್ನು ನೀನು ನೋಡಿದರೆ ಅದು ನಿನಗೆ ಏನಾದರೊಂದು ಸಂಗತಿಯನ್ನು ಹೇಳುವುದಿಲ್ಲವೆ? ಮೈತುದಿ ಚೂಪಾಗಿಯೂ ಒರಟಾಗಿಯೂ ಇರದೆ, ಆ ಮಿಣ್ಣೆಗಳು ನುಣ್ಣಗಾಗಿಯೂ ಗುಂಡಗಾಗಿಯೂ ಹೊಳಪುಳ್ಳವಾಗಿಯೂ ಹೇಗಾದುವು? ಒಂದು ದೊಡ್ಡ ಬಂಡೆಯನ್ನು ಅನೇಕ ತುಂಡುಗಳಾಗುವಂತೆ ಒಡೆದರೆ, ಅದರ ಪ್ರತಿ

ಯೊಂದು ತುಣುಕು ಒರಟಾಗಿಯೂ, ಅದರ ಕೊನೆಗಳು ಚೂಪಾಗಿಯೂ ಇರುವವು. ದುಂಡಗಿನ ನುಣ್ಣಗಾದ ಮಿಣ್ಣೆಯಂತೆ ಅದು ಎಂದಿಗೂ ಇರುವುದಿಲ್ಲ. ಇದರ ಕಾರಣವೇನು? ನೀನು ಕಣ್ಣಿಟ್ಟು ನೋಡಿ ಕಿವಿಗೊಟ್ಟು ಕೇಳಿದೆಯಾದರೆ ಅದು ತನ್ನ ಕತೆಯನ್ನು ತಾನೇ ಹೇಳುವುದು. ನೀನು ಒಡೆದಿರುವ ಅರೆಯ ಒಂದು ತುಂಡು ಚೂಪಾಗಿಯೂ ಒರಟಾಗಿಯೂ ಇಲ್ಲವೇ? ತೀರ ಹಿಂದಿನ ಒಂದಾನೊಂದು ಕಾಲದಲ್ಲಿ ತಾನೂ ಹೀಗೆಯೆ ಇದ್ದುದೆಂದು ಈ ಮಿಣ್ಣೆ ನಿನಗೆ ತಿಳಿಸುತ್ತದೆ. ಆಗ ಅದು ಗುಡ್ಡದ ಒಂದು ಪಕ್ಕದಲ್ಲಿದ್ದಿರಬಹುದು. ಮಳೆಯಿಂದ ಅದು ಕೊಚ್ಚಿಕೊಂಡು ಹೋಗಿ ಗುಡ್ಡಗಳ ನಡುವಿನ ದರಿಯಲ್ಲಿ ಹರಿಯುತ್ತಿರುವ ಒಂದು ಹಳ್ಳಕ್ಕೆ ಕೂಡಿರಬಹುದು. ಆ ಹಳ್ಳದಿಂದ ಅದು ಮುಂದು ಮುಂದಕ್ಕೆ ಹೋಗಿ ಚಿಕ್ಕ ಹೊಳೆಗೆ ಕೂಡಿ, ಅಲ್ಲಿಂದ ದೊಡ್ಡ ಹೊಳೆಗೆ ಹರಿದು ಹೋಗಿರಬಹುದು. ಇಷ್ಟೆಲ್ಲ ಹೊತ್ತಿನ ವರೆಗೆ ಅದು ಹೊಳೆಯ ಬುಡದಲ್ಲಿ ಉರುಳುತ್ತ ಉರುಳುತ್ತ ನಡೆದಿರುವಾಗ ಅದರ ಕೊನೆಗಳು ಸವೆದು ಒರಟಾದ ಮೆಯ್ಯು ನುಣ್ಣಗಾಗಿ ಹೊಳಪುಳ್ಳದ್ದಾಯಿತು. ಹೀಗೆ ಅದು ಈಗ ನಿನ್ನ ಕಣ್ಣಿಗೆ ಬೀಳುವ ಮಿಣ್ಣೆಯಾಯಿತು. ಆದರೆ ನದಿಯಿಂದ ಹೇಗೋ ಹೊರಗಾಗಿ ನಿನ್ನ ಕಣ್ಣಿಗೆ ಬಿತ್ತು. ಆ ನದಿಯ ಹರಿ ಅದನ್ನು ಇನ್ನೂ ಮುಂದಕ್ಕೆ ಒಯ್ದಿದ್ದರೆ ಅದು ಇನ್ನಷ್ಟು ಸವೆದು ಕಟ್ಟಕಡೆಗೆ ಉಸುಕಿನ ಸಣ್ಣ ಕಣವಾಗಿ, ಕಡಲ ದಂಡೆಯ ಬೈಲಿನಲ್ಲಿ ತನ್ನಂತಿರುವ ಇತರ ಉಸುಕಿನ ಕಣಗಳಲ್ಲಿ ಸೇರಿಕೊಳ್ಳುತಿತ್ತು. ಚಿಕ್ಕ ಮಕ್ಕಳು ಮನೆಕಟ್ಟಿ ಆಟವಾಡುವುದು ಇಲ್ಲಿಯೆ ಅಲ್ಲವೆ?

ಒಂದು ಸಣ್ಣ ಮಿಣ್ಣೆ ನಿನಗೆ ಇಷ್ಟೊಂದು ತಿಳಿಸುವುದಾದರೆ ನಾವು ನಮ್ಮ ಸುತ್ತುಮುತ್ತು ನೋಡುತ್ತಿರುವ ಗುಡ್ಡಗಳು, ಬೆಟ್ಟಗಳು ಮತ್ತು ಇನ್ನುಳಿದ ಪದಾರ್ಥಗಳು ನಮಗೆ ಇನ್ನೆಷ್ಟು ಹೆಚ್ಚಿನ ಸಂಗತಿಗಳನ್ನು ತಿಳಿಸಲಿಕ್ಕಿಲ್ಲ?

೨

ಪ್ರಾಚೀನ ಕಾಲದ ಇತಿಹಾಸ ಹೇಗೆ ಬರೆಯಲ್ಪಟ್ಟಿತು ?

ನಾನು ನಿನಗೆ ಬರೆದ ನಿನ್ನೆಯ ಪತ್ರದಲ್ಲಿ, ಸೃಷ್ಟಿಯ ಪುಸ್ತಕದಿಂದ ಭೂಮಿಯ ಪ್ರಾಚೀನ ಚರಿತೆಯನ್ನು ಹೇಗೆ ತಿಳಿದುಕೊಳ್ಳಬೇಕೆಂಬುದನ್ನು ತಿಳಿಸಿದೆನು. ಈ ಪುಸ್ತಕ, ನಾವು ನಮ್ಮ ಸುತ್ತು-ಮುತ್ತು ನೋಡುತ್ತಿರುವ ಪ್ರತಿಯೊಂದು ಪದಾರ್ಥ-ಬೆಟ್ಟ, ಗುಡ್ಡ, ದರಿ, ಹೊಳೆ, ಸಮುದ್ರ ಮತ್ತು ಜ್ವಾಲಾಮುಖಿ ಪರ್ವತ- ಇವೆಲ್ಲವುಗಳನ್ನೊಳಗೊಂಡು ಕಂಗೊಳಿಸುತ್ತದೆ. ಈ ಪುಸ್ತಕ ಯಾವಾಗಲೂ ತೆರೆದಿರುತ್ತದೆ. ಆದರೆ ಅತ್ತ ಲಕ್ಷ್ಯಗೊಡುವ ಇಲ್ಲವೆ ಅದನ್ನು ಓದಲು ಹವಣಿಸುವ ಜನರೆಷ್ಟು ? ಈ ಪುಸ್ತಕವನ್ನು ಓದಿ ತಿಳಿಯಬಲ್ಲೆವಾದರೆ ಅದು ನಮಗೆ ಎಂತಹ ಮನೋರಂಜಕವಾದ ಕತೆಯನ್ನು ಹೇಳಬಲ್ಲುದು ! ನಾವು ಕಲ್ಲಿನ ಪುಸ್ತಕಗಳಲ್ಲಿ ಓದಿಕೊಳ್ಳುವ ಈ ಕತೆಗಳು, ಕಟ್ಟುಕತೆಗಳಿಗಿಂತ ಹೆಚ್ಚು ಮನೋರಂಜಕವಾಗಿರುವವು.

ಯಾವ ಕಾಲದಲ್ಲಿ ಈ ನಮ್ಮ ಭೂಮಿಯ ಮೇಲೆ ಮನುಷ್ಯನು ಮತ್ತು ಪಶುಗಳು ಬದುಕಿ ಬಾಳುತ್ತಿರಲಿಲ್ಲವೊ ಅಂತಹ ತೀರ ಹಿಂದಿನ ಕಾಲದ ಸಂಗತಿಗಳನ್ನು ಈ ಸೃಷ್ಟಿಯ ಪುಸ್ತಕದಿಂದ ನಾವು ಕಲಿಯಬಲ್ಲೆವು. ನಾವು ಅದನ್ನು ಓದುತ್ತ ಹೋದಂತೆ ನಮಗೆ ತಿಳಿದುಬರುವದೇನೆಂದರೆ:— ಮೊಟ್ಟಮೊದಲಿನ ತರಹದ ಪಶುಗಳೂ ಆ ಮೇಲೆ ಅನೇಕ ಪಶುಗಳೂ ಕಾಣಿಸಿಕೊಳ್ಳುವವು. ಆ ಮೇಲೆ ಬರುವವರು ಮನುಷ್ಯರು–ಗಂಡಸರು ಮತ್ತು ಹೆಂಗಸರು. ಆದರೆ ಆ ಕಾಲದ ಮನುಷ್ಯರು ನಾವು ಈಗ ನೋಡುತ್ತಿರುವ ಮನುಷ್ಯರಿಗಿಂತ ತೀರ ಬೇರೆ ತರದವರು. ಅವರು ಪಶುಗಳಿಗಿಂತ ಬಹಳ ಭಿನ್ನರಾಗಿರುವುದಿಲ್ಲ. ಮೆಲ್ಲ-ಮೆಲ್ಲನೆ ಅವರು ಅನುಭವ ಪಡೆದು ವಿಚಾರ ಮಾಡತೊಡಗುವರು. ಈ ವಿಚಾರ-ಶಕ್ತಿಯೆ ಅವರನ್ನು ಪಶುಗಳಿಂದ

ಬೇರ್ಪಡಿಸುವುದು. ಈ ವಿಚಾರ-ಶಕ್ತಿಯೆ ಅವರನ್ನು ಬಹಳ ದೊಡ್ಡ ಮತ್ತು ಅತಿ ಭಯಂಕರ ಪಶುಗಳಿಗಿಂತ ಬಲಿಷ್ಠರನ್ನಾಗಿ ಮಾಡುವುದು. ಒಬ್ಬ ಚಿಕ್ಕ ಮನುಷ್ಯನು ಬಹಳ ದೊಡ್ಡದಾದ ಆನೆಯ ಮೇಲೆ ಕುಳಿತು ತನ್ನ ಮನ ಬಂದಂತೆ ಅದನ್ನು ಕೆಲಸದಲ್ಲಿ ತೊಡಗಿಸುವುದನ್ನು ನೀನು ಈಗ ನೋಡುತ್ತಿರುವೆ. ಆನೆ ಬಹು ದೊಡ್ಡದಾದ ಬಲಿಷ್ಠವಾದ ಪ್ರಾಣಿ. ತನ್ನ ಮೇಲೆ ಕುಳಿತಿರುವ ಮಾವುತನಿಗಿಂತ ಅದು ಎಷ್ಟೋ ಬಲವುಳ್ಳದ್ದು. ಆದರೆ ಮಾವುತನು ಯೋಚಿಸಬಲ್ಲನು. ಮನುಷ್ಯನು ಆನೆಯ ಒಡೆಯನಾಗಿರುವದೂ ಆನೆ ಅವನ ಆಳಾಗಿರುವುದೂ ಇದರಿಂದಲೇ. ಹೀಗೆ ಮನುಷ್ಯನಲ್ಲಿ ವಿಚಾರ-ಶಕ್ತಿ ಬೆಳೆದಂತೆ ಅವನು ಹೆಚ್ಚು ಜಾಣನಾಗತೊಡಗಿದನು; ಅವನ ಬುದ್ಧಿ ಹೆಚ್ಚು ಚುರುಕಾಯಿತು. ಅವನು ಅನೇಕ ವಿಷಯಗಳನ್ನು, ಎಂದರೆ ಬೆಂಕಿಹೊತ್ತಿಸುವುದು, ಉತ್ತು ಬೆಳೆಯುವುದು, ನೇಯುವುದು, ಮನೆ ಕಟ್ಟುವುದು, ಮೊದಲಾದುವುಗಳನ್ನು ಕಂಡುಹಿಡಿದನು. ಎಷ್ಟೋ ಗಂಡುಸರೂ, ಹೆಂಗುಸರೂ ಕೂಡಿ ಇರತೊಡಗಿದರು. ಮೊಟ್ಟ-ಮೊದಲು ಊರುಗಳಾದುದು ಹೀಗೆ. ಊರುಗಳಾಗುವ ಮೊದಲು ಮನುಷ್ಯರು ಪ್ರಾಯಶಃ ಅಲೆದಾಡುತ್ತಲಿದ್ದರು. ಆಗ ಅವರಿಗೆ ಭೂಮಿಯಿಂದ ಧಾನ್ಯವನ್ನು ಹೇಗೆ ಬೆಳೆಯಬೇಕೆಂದು ಗೊತ್ತಿರಲಿಲ್ಲ. ಆದುದರಿಂದ ಅವರಲ್ಲಿ ಅಕ್ಕಿಯೂ ಇರಲಿಲ್ಲ; ರೊಟ್ಟಿ ಮಾಡಲು ಬೇಕಾದ ಜೋಳವೂ ಇರಲಿಲ್ಲ. ಕಾಯಿಪಲ್ಲೆಯೂ ಈಗ ನೀನು ಉಣ್ಣುವ ಅನೇಕ ಪದಾರ್ಥಗಳೂ ಅವರಿಗೆ ತಿಳಿದಿರಲಿಲ್ಲ. ಕೆಲವು ಕಾಡುಗಡ್ಡೆಗಳು ಮತ್ತು ಹಣ್ಣು-ಹಂಪಲುಗಳು ಸಿಗುತಿದ್ದು ಅವರು ಅವುಗಳನ್ನೇ ತಿನ್ನುತ್ತಿದ್ದಿರಬಹುದು. ಬಹಳವಾಡಿ, ತಾವು ಬೇಟೆಯಾಡಿ ತಂದ ಪಶುಗಳಿಂದಲೇ ಅವರು ಜೀವಿಸುತಿದ್ದಿರಬಹುದು.

ಊರು ಮತ್ತು ಪಟ್ಟಣಗಳು ಬೆಳೆದಂತೆ ಜನರು ಸೊಗಸಾದ ಕೈಗಾರಿಕೆಗಳನ್ನು ಕಲಿತುಕೊಂಡರು. ಬರೆಯುವುದನ್ನೂ ಅವರು ಕಲಿತರು. ಆದರೆ ಬಹಳ ಕಾಲದ ವರೆಗೆ ಬರೆಯಲು ಕಾಗದವಿರಲಿಲ್ಲ. ಜನರು ಭೂರ್ಜಪತ್ರ ಇಲ್ಲವೆ ತಾಡವೋಲೆಗಳ ಮೇಲೆ ಬರೆಯುತಿದ್ದರು.

ಬಹಳ ಹಿಂದಿನದಾದ ಆಗಿನ ಕಾಲದಲ್ಲಿ ತಾಡೋಲೆಗಳ ಮೇಲೆ ಸಂಪೂರ್ಣವಾಗಿ ಬರೆದ ಪುಸ್ತಕಗಳನ್ನು ಹಲ-ಕೆಲವು ಪುಸ್ತಕಾಲಯ ಗಳಲ್ಲಿ ಇಂದಿಗೂ ನೀನು ನೋಡಬಹುದು. ಅಲ್ಲಿಂದ ಹಾಳೆ ಬಳಕೆಗೆ ಬಂದು ಬರೆಯಲು ಸುಲಭವಾಯಿತು. ಆದರೆ ಅಚ್ಚು–ಮನೆ (Printing Press) ಗಳಿಲ್ಲದುದರಿಂದ ಈಗಿನಂತೆ ಸಾವಿರಾರು ಪುಸ್ತಕ ಗಳನ್ನು ಅಚ್ಚುಹಾಕಲು ಆಗುತ್ತಿರಲಿಲ್ಲ. ಒಂದು ಸಲ ಒಂದು ಪುಸ್ತಕ ವನ್ನು ಮಾತ್ರ ಬರೆಯಬಹುದಾಗಿತ್ತು. ಆಮೇಲೆ ಕೈಯಿಂದ ಬಹಳ ಕಷ್ಟಪಟ್ಟು ಅದರ ಪ್ರತಿಗಳನ್ನು ತೆಗೆಯಬೇಕಾಗುತಿದ್ದಿತು. ಆದುದ ರಿಂದ ಪುಸ್ತಕಗಳು ವೆಗ್ಗಳವಾಗಿರುವುದು ಸಾಧ್ಯವಿರಲಿಲ್ಲ. ಪುಸ್ತಕ ಗಳನ್ನು ಮಾರುವವನಲ್ಲಿ ಇಲ್ಲವೆ ಪುಸ್ತಕಗಳ ಅಂಗಡಿಗಳಿಗೆ ಹೋಗಿ ಪುಸ್ತಕವನ್ನು ಕೊಂಡುಕೊಳ್ಳುವುದು ನಿನಗೆ ಶಕ್ಯವಿರಲಿಲ್ಲ. ಅದರ ಪ್ರತಿಯನ್ನು ಮಾಡಿಸಿಕೊಳ್ಳಲು ಬಹಳ ಕಾಲ ಬೇಕಾಗುತಿತ್ತು. ಆದರೆ ಆಗಿನ ಕಾಲದಲ್ಲಿ ಜನರು ಬಹಳ ಮುದ್ದಾಗಿ ಬರೆಯುತಿದ್ದರು. ನಮ್ಮ ಪುಸ್ತಕಾಲಯದಲ್ಲಿ ಸುಂದರವಾದ ಕೈಬರಹದ ಅನೇಕ ಹೊತ್ತಗೆಗಳು ಈಗ ನಮಗೆ ದೊರೆಯುತ್ತವೆ. ಸಂಸ್ಕೃತ, ಪಾರಸಿ, ಹಿಂದಿ ಮತ್ತು ಕನ್ನಡ ಕೈಬರಹದ ಹೊತ್ತಗೆಗಳು ಹಿಂದುಸ್ತಾನದಲ್ಲಿವೆ. ಪುಸ್ತಕವನ್ನು ಪ್ರತಿಮಾಡಿದವನು ಹಲವು ಸಲ ಓಲೆಯ ಇಕ್ಕೆಲದಲ್ಲಿಯೂ ಹೂಗಳನ್ನೂ ಚಿತ್ರಗಳನ್ನೂ ತೆಗೆದಿರುವನು.

ಊರುಗಳು ಬೆಳೆದಂತೆಲ್ಲ ದೇಶಗಳೂ ರಾಷ್ಟ್ರಗಳೂ ರೂಪು ಗೊಂಡುವು. ದೇಶದಲ್ಲಿ ಒಬ್ಬರಿಗೊಬ್ಬರು ನೆರೆ-ಹೊರೆಯಾಗಿ ಜನರು ಇರತೊಡಗಿದುದರಿಂದ ಒಬ್ಬರಿಗೊಬ್ಬರ ಗುರುತು ತಾನಾಗಿಯೆ ಆಯಿತು. ಬೇರೆ ದೇಶಗಳ ಜನರಿಗಿಂತ ತಾವು ಹೆಚ್ಚಿನವರೆಂದು ಅವರು ತಿಳಿದುಕೊಂಡರು. ಮತ್ತು ಬುದ್ಧಿಗೇಡಿಗಳಾಗಿ ಅವರೊಂದಿಗೆ ಕಾದಾಡತೊಡಗಿದರು. ಕಾದಾಡುವುದು, ಒಬ್ಬರನ್ನೊಬ್ಬರು ಕೊಲ್ಲು ವುದು ತೀರ ತಿಳಿಗೇಡಿತನದ ಕೆಲಸವೆಂದು ಆಗಿನವರು ತಿಳಿದಿರಲಿಲ್ಲ; ಇಂದಿಗೂ ತಿಳಿದುಕೊಳ್ಳಲೊಲ್ಲರು. ಆದರಿಂದ ಯಾರಿಗೂ ಒಳ್ಳೆಯ ದಾಗುವುದಿಲ್ಲ.

ಈ ಊರು ಮತ್ತು ದೇಶಗಳ ಚರಿತೆಯನ್ನು ತಿಳಿದುಕೊಳ್ಳುವುದಕ್ಕಾಗಿ ನಾವು ಹಳೆಯ ಪುಸ್ತಕಗಳ ನೆರವನ್ನು ಪಡೆಯಬೇಕಾಗುತ್ತದೆ. ಆದರೆ ಇಂತಹ ಹೊತ್ತಗೆಗಳು ಬಹಳ ದೊರೆಯುವುದಿಲ್ಲ. ನಮಗೆ ನೆರವಾಗುವ ಬೇರೆ ಕೆಲವು ಒಡವೆಗಳಿವೆ. ಹಿಂದಿನ ಕಾಲದ ಅರಸರು ಮತ್ತು ಸಾಮ್ರಾಟರು ತಮ್ಮ ಆಳಿಕೆಯ ಕಾಲದಲ್ಲಿ ನಡೆದ ಸಂಗತಿಗಳನ್ನು ಕಲ್ಲಿನ ಕಂಬಗಳ ಮೇಲೆ ಇಲ್ಲವೆ ಇಟ್ಟಂಗಿಗಳ ಮೇಲೆ ಬರೆಯಿಸುತಿದ್ದರು. ಪುಸ್ತಕಗಳು ಬಹಳ ಕಾಲ ಬಾಳುವುದಿಲ್ಲ. ಅವುಗಳ ಕಾಗದಗಳು ಹುಳುತುಹೋಗುತ್ತವೆ. ಆದರೆ ಕಲ್ಲುಗಳು ಬಹಳ ಕಾಲದ ವರೆಗೆ ಬಾಳುತ್ತವೆ. ಅಲಹಾಬಾದಿನ ಕೋಟೆಯಲ್ಲಿ ಅಶೋಕನ ದೊಡ್ಡ ಕಲ್ಲಿನ ಕಂಬವನ್ನು ನೋಡಿದ್ದುದು ನಿನಗೆ ನೆನಪಿರಬಹುದು. ಅಶೋಕನು ನೂರಾರು ವರುಷಗಳ ಹಿಂದೆ ಹಿಂದುಸ್ತಾನದ ದೊಡ್ಡ ಅರಸನಾಗಿದ್ದನು. ಅವನು ಇಂತಹ ಕಂಬಗಳ ಮೇಲೆ ತನ್ನ ಶಾಸನಗಳನ್ನು ಕೊರೆಯಿಸಿ ಸಾರಿರುವನು. ನೀನು ಲಖನೌ ಪಟ್ಟಣದಲ್ಲಿಯ ಪುರಾತನ ವಸ್ತು-ಸಂಗ್ರಹಾಲಯಕ್ಕೆ ಹೋದರೆ ಅಕ್ಷರಗಳನ್ನು ಕೆತ್ತಿದ ಹಲವು ಇಟ್ಟಂಗಿಗಳು ನಿನ್ನ ಕಣ್ಣಿಗೆ ಬೀಳುವವು.

ಬೇರೆ ಬೇರೆ ದೇಶಗಳ ಪ್ರಾಚೀನ ಇತಿಹಾಸವನ್ನು ನಾವು ಅಭ್ಯಾಸ ಮಾಡುವಾಗ, ಬಹಳ ಹಿಂದಿನ ಕಾಲದಲ್ಲಿ ಚೀನ ಮತ್ತು ಇಜಿಪ್ತ್ ದೇಶಗಳಲ್ಲಿ ಅಲ್ಲಿಯ ಜನರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿರುವುದು ನಮಗೆ ಗೊತ್ತಾಗುತ್ತದೆ. ಆಗ ಯುರೋಪಿನ ದೇಶಗಳು ಇನ್ನೂ ಕಾಡು ಜನರಿಂದ ತುಂಬಿದ್ದುವು. ರಾಮಾಯಣ ಮಹಾಭಾರತಗಳನ್ನು ಬರೆದ ಕಾಲದಲ್ಲಿ ಹಿಂದುಸ್ತಾನದ ವೈಭವದ ದಿನಗಳ ಸಂಗತಿಗಳೂ ನಮಗೆ ಗೊತ್ತಾಗುತ್ತವೆ. ಆಗಿನ ಕಾಲದಲ್ಲಿ ನಮ್ಮ ಹಿಂದುಸ್ತಾನ ಬಲಿಷ್ಠವಾಗಿಯೂ ಸಿರಿಯುಳ್ಳದ್ದಾಗಿಯೂ ಇದ್ದಿತು. ಇಂದು ಅದು ತೀರ ಬಡತನಕ್ಕೆ ಈಡಾಗಿದೆ; ಮತ್ತು ಪರಕೀಯರ ಆಳಿಕೆಗೆ ಒಳಪಟ್ಟಿದೆ. ನಮ್ಮ ದೇಶದಲ್ಲಿಯೆ ನಮಗೆ ಸ್ವಾತಂತ್ರ್ಯವಿಲ್ಲ. ಅದರಿಂದ ನಮಗೆ ಬೇಕಾದುದನ್ನು ನಾವು ಮಾಡಲಾರೆವು. ಆದರೆ ಈ ಸ್ಥಿತಿ ಹಿಂದಿನಿಂದಲೂ ಇರಲಿಲ್ಲ. ನಾವು ಯತ್ನಮಾಡಿದರೆ ನಮ್ಮ

ದೇಶವನ್ನು ನಾವು ಸ್ವತಂತ್ರವಾಗಿ ಮಾಡಬಲ್ಲೆವು. ಆದರಿಂದ ನಮ್ಮ ಬಡ ಜನರೆಲ್ಲರನ್ನೂ ಒಳ್ಳೆಯ ಸ್ಥಿತಿಗೆ ತರಬಹುದು. ಯುರೋಪಿನ ಸುಖಮಯವಾದ ಕೆಲವು ದೇಶಗಳಂತೆ ನಮ್ಮ ಭರತ ಭೂಮಿಯೂ ಆಗಬಹುದು.

ಭೂಮಿಯ ಮನೋಹರವಾದ ಚರಿತೆಯನ್ನು ಮೊದಲಿನಿಂದ ನನ್ನ ಮುಂದಿನ ಓಲೆಯಲ್ಲಿ ಬರೆಯತೊಡಗುವೆನು.

೩

ಭೂಮಿಯ ರಚನೆ

ಭೂಮಿಯು ಸೂರ್ಯನ ಸುತ್ತಲೂ ಚಂದ್ರನು ಭೂಮಿಯ ಸುತ್ತಲೂ ತಿರುಗುತ್ತಿರುವುದನ್ನು ನೀನು ಬಲ್ಲೆ. ಭೂಮಿಯಂತೆ ಇನ್ನೂ ಅನೇಕ ವಸ್ತುಗಳು ಸೂರ್ಯನನ್ನು ಸುತ್ತುತ್ತಿರುವುದೂ ನಿನಗೆ ಗೊತ್ತಿದೆ. ನಮ್ಮ ಭೂಮಿಯನ್ನೊಳಗೊಂಡ ಇವೆಲ್ಲ ವಸ್ತುಗಳಿಗೆ ಸೂರ್ಯನ ಗ್ರಹಗಳೆನ್ನುತ್ತಾರೆ. ಚಂದ್ರ-ಬಿಂಬ ಭೂಮಿಯ ಉಪ-ಗ್ರಹ (Satellite) ವೆಂದೆನ್ನಿಸಿಕೊಳ್ಳುವುದು. ಯಾಕೆಂದರೆ ಅದರ ಸುತ್ತಾಟ ಪೃಥ್ವಿಯನ್ನೇ ಅವಲಂಬಿಸಿಕೊಂಡಿರುವುದು. ಉಳಿದ ಗ್ರಹಗಳಿಗೂ ಅವುಗಳ ಉಪ-ಗ್ರಹಗಳುಂಟು. ಸೂರ್ಯನೂ ಗ್ರಹಗಳೂ ತಮ್ಮ ತಮ್ಮ ಉಪ-ಗ್ರಹಗಳೊಂದಿಗೆ ಆದೊಂದು ಸೊಗಸಾದ ಕುಟುಂಬದಂತಿರುವುದು. ಇದಕ್ಕೆ ಸೂರ್ಯ-ಮಾಲಿಕೆಯೆಂದು ಹೆಸರು. ಸೂರ್ಯನು ಎಲ್ಲ ಗ್ರಹಗಳಿಗೆ ತಂದೆಯಂತಿರುವುದರಿಂದ ಇವೆಲ್ಲವುಗಳಿಗೆ ಸೂರ್ಯ-ಮಾಲಿಕೆಯೆನ್ನುವರು.

ರಾತ್ರಿಯಲ್ಲಿ ನಿನಗೆ ಸಾವಿರಾರು ಚುಕ್ಕೆಗಳು ಕಾಣುತ್ತವೆ. ಅವುಗಳಲ್ಲಿ ಕೆಲವು ಮಾತ್ರ ಗ್ರಹಗಳು. ಇವುಗಳು ನಕ್ಷತ್ರಗಳೆನ್ನಿಸಿಕೊಳ್ಳುವುದೇ ಇಲ್ಲ. ನಕ್ಷತ್ರ ಮತ್ತು ಗ್ರಹಗಳಲ್ಲಿ ಇರುವ ಭೇದವನ್ನು ನೀನು ತಿಳಿದುಕೊಳ್ಳಬಲ್ಲೆಯಾ ? ನಕ್ಷತ್ರಗಳೊಡನೆ ಹೋಲಿಸಿದರೆ ಗ್ರಹಗಳು ನಮ್ಮ ಭೂಮಿಯಂತೆ ತೀರ ಚಿಕ್ಕವಾಗಿರುವವು. ಆದರೆ ಅವು ನಮಗೆ ಅತಿ ಹತ್ತಿರದಲ್ಲಿರುವುದರಿಂದ ಆಕಾಶದಲ್ಲಿ ದೊಡ್ಡವಾಗಿ ಕಾಣಿಸುತ್ತವೆ. ಚಂದ್ರನು ಮಗುವಿನಂತಿದ್ದು ಹೇಗೆ ದೊಡ್ಡವನಾಗಿ ಕಾಣುತ್ತಾನೆ ನೋಡು. ಯಾಕೆಂದರೆ ಅವನು ನಮಗೆ ತೀರ ಹತ್ತಿರದಲ್ಲಿರುವನು. ಚುಕ್ಕೆಗಳು ಯಾವುವು ಮತ್ತು ಗ್ರಹಗಳು ಯಾವುವು ಎಂಬುದನ್ನು ಗುರುತಿಸುವ ನಿಜವಾದ ಮಾರ್ಗವೆಂದರೆ ಅವು ಮಿನುಗುತ್ತವೆಯೊ ಇಲ್ಲವೊ ಕಂಡುಕೊಳ್ಳುವುದು. ನಕ್ಷತ್ರಗಳು ಮಿನುಗುತ್ತವೆ. ಗ್ರಹಗಳು ಮಿನುಗುವದಿಲ್ಲ. ಗ್ರಹಗಳು ಹೊಳೆಯುವುದು ಸೂರ್ಯನ

ಬೆಳಕಿನಿಂದ. ಗ್ರಹಗಳಲ್ಲಿ ಇಲ್ಲವೆ ಚಂದ್ರನಲ್ಲಿ ನಾವು ಕಾಣುವ ಹೊಳಪು ಸೂರ್ಯನ ಬಿಸಿಲು ಮಾತ್ರ. ನಿಜವಾದ ನಕ್ಷತ್ರಗಳಿರುವುದು ನಮ್ಮ ಸೂರ್ಯನಂತೆ. ಅವು ತಮ್ಮಿಂದ ತಾವೇ ಹೊಳೆಯುತ್ತವೆ. ಯಾಕೆಂದರೆ ಅವು ನಿಗಿನಿಗಿ ಕೆಂಡದಂತೆ ಸುಡುತ್ತಿರುವವು. ನಿಜವಾಗಿ ನೋಡಿದರೆ ನಮ್ಮ ಸೂರ್ಯನೂ ಒಂದು ಚುಕ್ಕೆಯೇ. ಅವನು ನಮಗೆ ತೀರ ಸಮೀಪದಲ್ಲಿರುವುದರಿಂದ ದೊಡ್ಡವನಾಗಿ ಕೆಂಡದ ಚೆಂಡಿನಂತೆ ಕಾಣುತ್ತಾನೆ.

ಹೀಗೆ ನಮ್ಮ ಭೂಮಿ ಸೂರ್ಯನ ಕುಟುಂಬಕ್ಕೆ, ಎಂದರೆ, ಸೂರ್ಯ-ಮಾಲೆಗೆ ಸಂಬಂಧಿಸಿರುವುದು. ಭೂಮಿ ಬಹಳ ದೊಡ್ಡದಾಗಿದೆಯೆಂದು ನಾವು ತಿಳಿದುಕೊಂಡಿದ್ದೇವೆ. ಅಲ್ಪರಾದ ನಮಗಿಂತಲೂ ಅದು ದೊಡ್ಡದು. ಬಹಳ ವೇಗದಿಂದ ಓಡುವ ಉಗೆ-ಬಂಡಿ ಅಥವಾ ಉಗೆ-ಹಡಗಿನ ಮೂಲಕ ಭೂಮಿಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಲು ಎಷ್ಟೋ ವಾರಗಳೂ ತಿಂಗಳುಗಳೂ ಬೇಕಾಗುತ್ತವೆ. ನಮಗೆ ದೊಡ್ಡದಾಗಿ ಕಂಡರೂ ಅದು ಗಾಳಿಯಲ್ಲಿ ಕಂಡುಬರುವ ಧೂಳಿಯ ಒಂದು ಕಣದಂತೆ ಇದೆ. ಸೂರ್ಯನು ಎಷ್ಟೋ ಕೋಟಿ ಮೈಲು ದೂರವಿರುವನು. ಉಳಿದ ಚುಕ್ಕೆಗಳು ಅವನಿಗಿಂತ ಬಹಳ ದೂರದಲ್ಲಿರುವುವು.

ಚುಕ್ಕೆಗಳ ವಿಷಯದಲ್ಲಿ ಅಭ್ಯಾಸ ಮಾಡುವ ಜನರಿಗೆ ಖಗೋಲ ಶಾಸ್ತ್ರಜ್ಞರೆಂದು ಹೆಸರು. ಭೂಮಿ ಮತ್ತು ಎಲ್ಲ ಗ್ರಹಗಳು ಒಂದಾನೊಂದು ಕಾಲದಲ್ಲಿ ಸೂರ್ಯನ ಅಂಗಗಳಾಗಿದ್ದುವೆಂದು ಅವರು ನಮಗೆ ಹೇಳುತ್ತಾರೆ. ಈಗಿರುವಂತೆ ಆಗಲೂ ಸೂರ್ಯನು ಭಯಂಕರವಾದ ಉರಿಯ ರಾಶಿಯೇ ಆಗಿದ್ದನು. ಏನೊ ಒಂದು ಕಾರಣದಿಂದ ಸೂರ್ಯನ ಕೆಲವು ಸಣ್ಣ ಭಾಗಗಳು ಸಡಿಲಾಗಿ ಗಾಳಿಯಲ್ಲಿ ಸಿಡಿದು ಬಿದ್ದುವು. ಆದರೆ ತಮ್ಮ ತಂದೆಯಾದ ಸೂರ್ಯನಿಂದ ಅವು ಸಂಪೂರ್ಣವಾಗಿ ಬಿಡುಗಡೆ ಹೊಂದಲಿಲ್ಲ. ಅವುಗಳಿಗೆ ಹಗ್ಗವನ್ನು ಕಟ್ಟಿದಂತಾಗಿ ಸೂರ್ಯನ ಸುತ್ತಲೂ ಗರಗರನೆ ತಿರುಗುತ್ತಿರುವವು. ನಾವು ಹಗ್ಗಕ್ಕೆ

ಹೋಲಿಸಿರುವ ಈ ಶಕ್ತಿ ಬಹು ಅಗಾಧವಾದದ್ದು. ಅದು ಸಣ್ಣ ವಸ್ತುಗಳನ್ನು ದೊಡ್ಡ ವಸ್ತುಗಳ ಕಡೆಗೆ ಸೆಳೆಯುತ್ತದೆ. ಪದಾರ್ಥಗಳು ಕೆಳಗೆ ಬೀಳುವುದು ಇದೇ ಶಕ್ತಿಯಿಂದ. ನಮಗೆ ಹತ್ತಿರದಲ್ಲಿರುವ ಅತಿ ದೊಡ್ಡ ವಸ್ತು ಭೂಮಿಯೆ ಆಗಿರುವುದರಿಂದ ಅದು ನಮ್ಮಲ್ಲಿಯ ಪ್ರತಿಯೊಂದು ಪದಾರ್ಥವನ್ನು ಸೆಳೆದುಕೊಳ್ಳುತ್ತದೆ.

ಹೀಗೆ ನಮ್ಮ ಭೂಮಿಯೂ ಸೂರ್ಯನಿಂದ ಸಿಡಿದು ಹೊರ ಬಿದ್ದಿದೆ. ಭಯಂಕರವಾದ ಉಗೆಯಿಂದಲೂ ಸುತ್ತು ಮುತ್ತು ವ್ಯಾಪಿಸಿರುವ ಗಾಳಿಯಿಂದಲೂ ಮೊದಲು ಅದು ಬಹಳ ಬಿಸಿಯಾಗಿದ್ದಿರಬಹುದು. ಆದರೆ ಅದು ಸೂರ್ಯನಿಗಿಂತ ತೀರ ಚಿಕ್ಕದಾಗಿರುವುದರಿಂದ ತಣ್ಣಗಾಗತೊಡಗಿತು. ಸೂರ್ಯನ ಉಷ್ಣತೆಯೂ ಕಡಿಮೆಯಾಗುತ್ತಲಿರುವುದು. ಆದರೆ ಅದು ತೀರ ಕಡಿಮೆಯಾಗಿ, ತಂಪಾಗಲು ಕೋಟ್ಯನುಕೋಟಿ ವರುಷಗಳು ಬೇಕಾಗುವವು. ಭೂಮಿ ತಣ್ಣಗಾಗಲಿಕ್ಕೆ ತೀರ ತುಸು ಕಾಲ ಸಾಕಾಯಿತು. ಅದು ಬಿಸಿಯಾಗಿರುವಾಗ ಮನುಷ್ಯರು, ಪಶುಗಳು, ಗಿಡಗಂಟೆ ಮುಂತಾದ ಯಾವುದಕ್ಕೂ ಅದರ ಮೇಲೆ ಬದುಕಿರಲು ಸಾಧ್ಯವಾಗುವಂತಿದ್ದಿಲ್ಲ. ಪ್ರತಿಯೊಂದೂ ಸುಟ್ಟು ಹೋಗಬಹುದಾಗಿತ್ತು.

ಸೂರ್ಯನ ಒಂದು ಪಾಲು ಸಿಡಿದು ಹೊರ ಹೊರಟು ಭೂಮಿಯಾದಂತೆ, ಭೂಮಿಯ ಒಂದು ಭಾಗ ಸಿಡಿದು ಬೇರೆಯಾಗಿ ಚಂದ್ರ-ಬಿಂಬವಾಯಿತು. ದೊಡ್ಡದಾದ ಪೊಳ್ಳು ಸ್ಥಳದಿಂದ ಚಂದ್ರನು ಹೊರಬಿದ್ದಿರಬಹುದೆಂದೂ, ಅಮೇರಿಕೆ ಮತ್ತು ಜಪಾನುಗಳ ನಡುವಿನ ಶಾಂತಿ (ಪ್ಯಾಸಿಫಿಕ್) ಮಹಾಸಾಗರವೇ ಆ ಪೊಳ್ಳು ಸ್ಥಳವಾಗಿರಬಹುದೆಂದೂ ಎಷ್ಟೋ ಜನರು ತಿಳಿಯುತ್ತಾರೆ.

ಹೀಗೆ ಭೂಮಿ ತಂಪಾಗತೊಡಗಿತು. ಅದು ತಂಪಾಗುವುದಕ್ಕೆ ಬಹಳ ಕಾಲ ಬೇಕಾಯಿತು. ಭೂಮಿಯ ಒಳಭಾಗ ಬಿಸಿಯಾಗಿ ಉಳಿದುಕೊಂಡಿದ್ದರೂ ಅದರ ಹೊರಮೈಯ್ಯು ಮೆಲ್ಲ-ಮೆಲ್ಲನೆ ತಂಪಾಯಿತು. ಇಂದಿಗೂ ಕಲ್ಲಿದ್ದಲಿಯ ಕಣಿಯೊಳಗೆ ಇಳಿದರೆ, ಕೆಳಗೆ

ಇಳಿದಂತೆ ಹೆಚ್ಚು ಬೆಚ್ಚಗೆನಿಸುವುದು. ಭೂಮಿಯ ಒಳಭಾಗದಲ್ಲಿ ಬಹಳ ಆಳವಾಗಿ ಕೆಳಗೆ ಹೋಗುವುದು ಸಾಧ್ಯವಿದ್ದಿದ್ದರೆ, ಅಲ್ಲಿ ಅದು ಕೆಂಪಗೆ ಕಾದಿದ್ದುದು ನಿನ್ನ ಕಣ್ಣಿಗೆ ಬೀಳುತಿತ್ತು. ಚಂದ್ರಬಿಂಬವೂ ತಂಪಾಗತೊಡಗಿತು. ಚಂದ್ರಬಿಂಬ ಭೂಮಿಗಿಂತ ಚಿಕ್ಕದಾಗಿರುವುದರಿಂದ ಭೂಮಿಗಿಂತ ಬೇಗನೆ ತಣ್ಣಗಾಯಿತು. ಈಗ ಅದು ಸೊಗಸಾಗಿಯೂ ತಂಪಾಗಿಯೂ ತೋರುವುದಿಲ್ಲವೆ? ಆದುದರಿಂದಲೇ ಅದಕ್ಕೆ "ಶೀತಲ ಚಂದ್ರ"ನೆಂದು ಹೆಸರು. ಬಹುಶಃ ಅದು ಮಂಜುಗುಡ್ಡಗಳಿಂದಲೂ ಮಂಜು ಬೈಲುಗಳಿಂದಲೂ ತುಂಬಿಕೊಂಡಿರಬಹುದು.

ಭೂಮಿಯು ತಣ್ಣಗಾದ ಕೂಡಲೇ ಉಗೆಯು ಹೆಪ್ಪುಗಟ್ಟಿ ನೀರಾಗಿ ಮಳೆಯ ರೂಪಾಂತರ ಹೊಂದಿರಬಹುದು; ಮತ್ತು ಆಗ ದೊಡ್ಡ ಮಳೆಯಾಗಿರಬಹುದು. ಆ ಮಳೆನೀರೆಲ್ಲ ಭೂಮಿಯ ದೊಡ್ಡದೊಡ್ಡ ಪೊಳ್ಳು ಸ್ಥಳಗಳಲ್ಲಿ ತುಂಬಿಕೊಂಡಿತು. ಹೀಗೆ ನೀರು ನಿಂತ ಸ್ಥಳಗಳೇ ಸಮುದ್ರಗಳೂ ಮಹಾಸಾಗರಗಳೂ ಆದುವು.

ಭೂಮಿಯೂ ಮಹಾಸಾಗರಗಳೂ ತಂಪಾಗುತಿದ್ದಂತೆ ಭೂಮಿಯ ಹೊರಮೈಯಲ್ಲಾಗಲಿ ಸಮುದ್ರದಲ್ಲಾಗಲಿ ಪ್ರಾಣಿಗಳಿಗೆ ಬದುಕಲು ಅನುಕೂಲವಾಯಿತು. ಪ್ರಾಣಿಗಳ ಮೊಟ್ಟ-ಮೊದಲಿನ ಸ್ಥಿತಿಯನ್ನು ನಾವು ಇನ್ನೊಂದು ಪತ್ರದಲ್ಲಿ ಚರ್ಚಿಸುವಾ.

೪

ಜೀವವುಳ್ಳ ನೊಟ್ಟ-ಮೊದಲಿನ ವಸ್ತುಗಳು

ನಮ್ಮ ಭೂಮಿ ಎಷ್ಟೋ ಕಾಲದ ತನಕ ಕಿಚ್ಚಿನಂತೆ ಬಿಸಿಯಾಗಿದ್ದು, ಅದರಲ್ಲಿ ಯಾವ ಪ್ರಾಣಿಗೂ ಬದುಕಿರಲು ಸಾಧ್ಯವಿದ್ದಿಲ್ಲವೆಂದು ಹಿಂದಿನ ಓಲೆಯಿಂದ ನಮಗೆ ತಿಳಿಯಿತು. ಭೂಮಿಯ ಮೇಲೆ ಜೀವನ ಎಂದು ಮೊದಲಾಯಿತು, ಮತ್ತು ಮೊದಲನೆ ಪ್ರಾಣಿಗಳು ಯಾವುವು, ಎಂಬ ಪ್ರಶ್ನೆ ಬಹಳ ಮನೋರಂಜಕವಾಗಿದೆ. ಆದರೆ ಇದಕ್ಕೆ ಉತ್ತರ ಕೊಡುವುದು ಮಾತ್ರ ಬಲು ಬಿಗಿಯಾದ ಕೆಲಸ. ಜೀವವೆಂದರೇನು, ಎಂಬುದನ್ನು ಕುರಿತು ಮೊದಲು ಯೋಚಿಸೋಣ. ಮನುಷ್ಯರೂ, ಅವರಂತೆ ಪಶುಗಳೂ ಜೀವವುಳ್ಳ ಪ್ರಾಣಿಗಳೆಂದು ನೀನು ಹೇಳಬಹುದು. ಆದರೆ ಗಿಡಗಂಟೆ, ಹೂ, ಶಾಕಾದಿಗಳ ಬಗೆಗೆ ನೀನೇನೆನ್ನುವಿ? ನಿಜವಾಗಿ ಅವೂ ಪ್ರಾಣಿಗಳೇ. ಅವೂ ಬೆಳೆಯುವವು, ನೀರು ಕುಡಿಯುವವು, ಉಸಿರಾಡಿಸುವವು ಮತ್ತು ಸಾಯುವವು. ಗಿಡಗಳಿಗೂ ಪಶುಗಳಿಗೂ ಇರುವ ಮುಖ್ಯ ಭೇದವೇನೆಂದರೆ, ಗಿಡಗಳು ನಡೆದಾಡುವುದಿಲ್ಲ. ಲಂಡನ್ ಪಟ್ಟಣದ 'ಕ್ಯೂ' ಎಂಬ ತೋಟದಲ್ಲಿ ನಾನು ನಿನಗೆ ಕೆಲವು ಸಸಿಗಳನ್ನು ತೋರಿಸಿರುವೆನು. ಇದು ನಿನಗೆ ನೆನಪಿರಬಹುದು. ಈ 'ಆರ್ಚಿಡ್' ಮತ್ತು 'ಪಿಚರ್' ಎಂಬ ಸಸಿಗಳು ನೊಣಗಳನ್ನು ತಿನ್ನುತ್ತವೆ. ಕಡಲ-ಪಾಚಿ (Sponges) ಗಳಂತಿರುವ ಇನ್ನೂ ಕೆಲವು ತಿರುಗಾಡದ ಪ್ರಾಣಿಗಳುಂಟು. ಇವು ಸಮುದ್ರದ ತಳದಲ್ಲಿರುವವು. ಯಾವುದೊಂದು ವಸ್ತುವನ್ನು, ಅದೇನು ಪ್ರಾಣಿಯೊ ಇಲ್ಲವೆ ಸಸಿಯೊ ಎಂದು ಒಮ್ಮೊಮ್ಮೆ ಹೇಳುವುದು ಕಷ್ಟವಾಗುತ್ತದೆ. ವನಸ್ಪತಿಗೆ ಸಂಬಂಧಪಟ್ಟಿರುವ ವನಸ್ಪತಿ ಶಾಸ್ತ್ರವನ್ನಾಗಲಿ ಪ್ರಾಣಿಗಳಿಗೆ ಸಂಬಂಧಿಸಿರುವ ಪ್ರಾಣಿ ಶಾಸ್ತ್ರವನ್ನಾಗಲಿ ನೀನು ಅಭ್ಯಾಸ ಮಾಡಿದರೆ ನಿನಗೆ ಕೆಲವು ವಿಲಕ್ಷಣ ಪದಾರ್ಥಗಳು ಗೊತ್ತಾಗುವವು. ಇಂತಹವು ಪೂರ್ಣವಾಗಿ ಪ್ರಾಣಿಗಳೂ ಅಲ್ಲ, ಸಸಿಗಳೂ ಅಲ್ಲ.

ಕಲ್ಲುಗಳಿಗೂ ಗುಡ್ಡಗಳಿಗೂ ಒಂದು ತರದ ಪ್ರಾಣವಿದೆಯೆಂದೂ, ಅವುಗಳಿಗೂ ನೋವಿನ ಅನುಭವ ಆಗುವುದೆಂದೂ ಕೆಲವು ಜನರು ಹೇಳುತ್ತಾರೆ. ಆದರೆ ಅದನ್ನು ಕಂಡುಕೊಳ್ಳುವುದು ಬಹಳ ಗಡ ಚಾದುದು. ಜಿನೇವಾ ಪಟ್ಟಣದಲ್ಲಿ ಒಬ್ಬ ಗೃಹಸ್ಥನು ನಮ್ಮನ್ನು ಕಾಣಲು ಬಂದದ್ದು ನಿನಗೆ ನೆನಪಿರಬಹುದು. ಆ ಗೃಹಸ್ಥನ ಹೆಸರು ಸರ್. ಜಗದೀಶ ಚಂದ್ರ ಬೋಸ. ಸಸಿಗಳಿಗೂ ಜೀವವಿದೆಯೆಂದು ಅವನು ಪ್ರಯೋಗದಿಂದ ಸಿದ್ಧಪಡಿಸಿದ್ದಾನೆ. ಕಲ್ಲುಗಳಲ್ಲಿಯೂ ಒಂದು ತರದ ಜೀವವಿದೆಯೆಂದು ಅವನ ಅಭಿಪ್ರಾಯ.

ಪ್ರಾಣವಿರುವ ವಸ್ತು ಯಾವುದು, ಪ್ರಾಣವಿಲ್ಲದಿರುವ ವಸ್ತು ಯಾವುದು ಎಂದು ಹೇಳುವುದು ಸುಲಭವಲ್ಲ. ಸದ್ಯಕ್ಕೆ ಕಲ್ಲುಗಳ ವಿಷಯವನ್ನು ಬಿಟ್ಟು ಗಿಡಗಂಟಿ ಮತ್ತು ಪ್ರಾಣಿಗಳನ್ನಷ್ಟೆ ಯೋಚಿಸೋಣ. ಎಣಿಕೆ ಇಲ್ಲದಷ್ಟು ಪ್ರಾಣಿಗಳು ಈಗ ನಮ್ಮ ಕಣ್ಣಿಗೆ ಬೀಳುತ್ತವೆ. ಇವುಗಳಲ್ಲಿ ಎಲ್ಲ ತರದ ಪ್ರಾಣಿಗಳೂ ಸೇರಿವೆ. ಗಂಡುಸರೂ ಸೇರಿದ್ದಾರೆ, ಹೆಂಗುಸರೂ ಸೇರಿದ್ದಾರೆ. ಇವರಲ್ಲಿ ಕೆಲವರು ಚುರುಕು ಬುದ್ಧಿಯವರಿರುವರು. ಕೆಲವರು ಮಂದ-ಬುದ್ಧಿಯವರು ಇಲ್ಲವೆ ದಡ್ಡರು. ಇದಲ್ಲದೆ ಪಶುಗಳು ಬೇರೆ. ಅವುಗಳಲ್ಲಿಯೂ ಆನೆ, ಕೋತಿ, ಇರುವೆಗಳಂತಹ ಚುರುಕು ಪ್ರಾಣಿಗಳಿವೆ. ಬುದ್ಧಿ ಇಲ್ಲದ ಮಂಕು ಪ್ರಾಣಿಗಳೂ ಕಾಣುತ್ತವೆ. ಸಮುದ್ರದಲ್ಲಿಯ ಮೀನುಗಳು ಮತ್ತು ಜೀವವುಳ್ಳ ಅನೇಕ ಪದಾರ್ಥಗಳು ಪ್ರಾಣಿ ವರ್ಗಗಳಲ್ಲಿ ಇನ್ನೂ ಕೆಳಗಿನ ತರಗತಿಯವು. ಇವೆಲ್ಲಕ್ಕಿಂತ ಕೆಳಗಿನ ಪಂಗಡದ ಪ್ರಾಣಿಗಳೆಂದರೆ ಕಡಲ-ಪಾಚಿ, ಜಲ್ಲಿ-ಮೀನುಗಳು, ಮತ್ತು ಅರ್ಧಸಸಿ ಅರ್ಧ ಪ್ರಾಣಿಗಳಂತಿರುವ ವಸ್ತುಗಳು.

ಈ ಎಲ್ಲ ತರದ ಬೇರೆ ಬೇರೆ ಪ್ರಾಣಿಗಳು ಒಂದೇ ಸಮಯದಲ್ಲಿ ಹುಟ್ಟಿದುವೋ ಅಥವಾ ಮೆಲ್ಲ-ಮೆಲ್ಲನೆ ಒಂದರ ಹಿಂದೆ ಒಂದರಂತೆ ಹುಟ್ಟಿ ಬಂದುವೊ ಎಂಬುದನ್ನು ಗೊತ್ತುಮಾಡಿಕೊಳ್ಳಲು ನಾವು ಯತ್ನಿಸಬೇಕಾಗಿದೆ. ಇದು ನಮಗೆ ಗೊತ್ತಾಗುವುದು ಹೇಗೆ?

ಅಂತಹ ಪುರಾತನ ಕಾಲದ ಪುಸ್ತಕಗಳು ನಮಗೆ ದೊರೆಯುವುದಿಲ್ಲ. ಆದರೆ ಸೃಷ್ಟಿಯ ಪುಸ್ತಕ ನಮಗೆ ನೆರವಾಗಬಹುದೆ? ಅಹುದು, ನೆರವಾಗುವುದು. ಹಳೆಯ ಬೆಟ್ಟಗಳಲ್ಲಿ ಪ್ರಾಣಿಯ ಎಲುಬುಗಳು ನಮಗೆ ದೊರೆಯುತ್ತವೆ. ಇವುಗಳಿಗೆ ಇಂಗ್ಲೀಷಿನಲ್ಲಿ 'ಫಾಸಿಲ್ಸ್' ಎಂದು ಹೆಸರು. ಆ ಬೆಟ್ಟ ರಚನೆಯಾಗುವ ಪ್ರಾಚೀನ ಕಾಲದಲ್ಲಿ ಆಯಾ ಪ್ರಾಣಿಗಳು ಬದುಕಿ ಬಾಳಿರಬಹುದೆಂದು ಈ ಎಲುಬುಗಳಿಂದ ನಾವು ಹೇಳಬಲ್ಲೆವು. ಈ ತರದ ಸಣ್ಣದೊಡ್ಡ ಅನೇಕ ಎಲುಬುಗಳ ಅವಶೇಷಗಳನ್ನು ಲಂಡನ್ ನಗರದಲ್ಲಿಯ ಸೌಥ್ ಕೆನ್ಸಿಂಗ್‌ಟನ್ ಎಂಬ ಪ್ರಾಚೀನ ವಸ್ತು-ಸಂಗ್ರಹಾಲಯದಲ್ಲಿ ನೀನು ನೋಡಿರುವಿ.

ಪ್ರಾಣಿ ಸತ್ತಕೂಡಲೇ, ಅದರ ಶರೀರದ ಮಾಂಸ ಬೇಗನೆ ಕೊಳೆತುಹೋಗುವುದು. ಆದರೆ ಅದರ ಎಲುಬುಗಳು ಬಹಳ ಕಾಲದ ವರೆಗೆ ಉಳಿಯುತ್ತವೆ. ಹಿಂದಿನ ಕಾಲದಲ್ಲಿ ಬಾಳಿಹೋದ ಪ್ರಾಣಿಗಳ ಸಂಗತಿಗಳು ನಮಗೆ ಗೊತ್ತಾಗುವುದು ಇವೇ ಎಲುಬುಗಳಿಂದ. ಆದರೆ ಜೆಲ್ಲಿ-ಮೀನುಗಳಂತಹ ಪ್ರಾಣಿಗಳಿಗೆ ಎಲುಬುಗಳು ಇರುವುದಿಲ್ಲ. ಆದುದರಿಂದ ಅವು ಸತ್ತ ಮೇಲೆ ಅವುಗಳ ಯಾವ ಗುರುತೂ ಉಳಿಯುವುದಿಲ್ಲ.

ಬೆಟ್ಟಗಳನ್ನು ನಾವು ಎಚ್ಚರದಿಂದ ಪರೀಕ್ಷಿಸಿ ನಮಗೆ ದೊರೆಯುವ ಹಿಂದಿನ ಕಾಲದ 'ಫಾಸಿಲ್' ಎಲುಬುಗಳನ್ನು ಕಲೆಹಾಕಿದರೆ, ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಜಾತಿಯ ಪ್ರಾಣಿಗಳು ಬದುಕಿ ಬಾಳಿದ್ದವೆಂದು ನಮಗೆ ಗೊತ್ತಾಗುತ್ತದೆ. ಇವೆಲ್ಲವೂ ಒಟ್ಟುಗೂಡಿ ಒಮ್ಮಿಂದೊಮ್ಮೆ ಹುಟ್ಟಿಬರಲಿಲ್ಲ. ಮೊಟ್ಟ-ಮೊದಲು ಇದ್ದುದು ಶಂಖಗಳಿಂದೊಡಗೂಡಿದ ಸಾಮಾನ್ಯ ಪ್ರಾಣಿಗಳು, ಎಂದರೆ, ಶಂಖದ ಮೀನುಗಳು. ಕಡಲ ದಂಡೆಯಲ್ಲಿ ದೊರೆಯುವ ಚೆಲುವಾದ ಶಂಖಗಳೆಲ್ಲವೂ ಸತ್ತುಹೋದ ಪ್ರಾಣಿಗಳ ಎಲುಬಿನ ಹಂದರಗಳೇ. ಆ ಮೇಲೆ ಹೆಚ್ಚು-ಹೆಚ್ಚಾದ ತೊಡಕುಳ್ಳ ಪ್ರಾಣಿಗಳು, ಎಂದರೆ ಹಾವುಗಳು, ಈಗಿನ ಆನೆಗಳಿಗಿಂತ ಬಲು ದೊಡ್ಡ ಪಶುಗಳು, ಮತ್ತು ಈಗಿನ ಪಶು

ಪಕ್ಷಿಗಳಂತಹ ಪ್ರಾಣಿಗಳು ನಮಗೆ ಕಾಣುತ್ತವೆ. ನಮಗೆ ಸಿಗುವ ಕೊನೆಯ ಅವಶೇಷವೆಂದರೆ ಮನುಷ್ಯ ಪ್ರಾಣಿಯದು. ಹೀಗೆ ಪ್ರಾಣಿಯ ಹುಟ್ಟುವಳಿಯಲ್ಲಿ ಒಂದು ಕ್ರಮ ಕಂಡುಬರುವುದು. ಮೊಟ್ಟ-ಮೊದಲು ಅತಿ ಸಾದಾ ಪ್ರಾಣಿಗಳು, ಅಲ್ಲಿಂದ ಹೆಚ್ಚು-ಹೆಚ್ಚಾದ ತೊಡಕುಳ್ಳ ಮೇಲ್ತರಗತಿಯ ಪ್ರಾಣಿಗಳು, ಕೊನೆಗೆ ಇವೆಲ್ಲವುಗಳಿಗಿಂತ ಶ್ರೇಷ್ಠ ಪ್ರಾಣಿಯಾದ ಮನುಷ್ಯನು. ಸುಲಭವಾದ ಪಾಚಿ ಮತ್ತು ಶಂಖದ ಮೀನುಗಳು ಬೆಳೆಯುತ್ತ, ಬದಲಾಗುತ್ತ, ರೂಪುಗೊಳ್ಳುತ್ತ, ಕೊನೆಗೆ ತಾವಾಗಿಯೆ ಇಷ್ಟೊಂದು ಹೇಗೆ ಸುಧಾರಿಸಿಕೊಂಡವು ಎಂಬುದು ಅತಿ ಮನೋಹರವಾದ ವಿಷಯವಾಗಿದೆ. ಯಾವುದಾದರೊಂದು ದಿನ ನಾನು ಈ ವಿಷಯವನ್ನೆಲ್ಲ ನಿನಗೆ ತಿಳಿಹೇಳುವೆನು. ಆದರೆ ಸದ್ಯಕ್ಕೆ ಜೀವವುಳ್ಳ ಮೊಟ್ಟ-ಮೊದಲಿನ ವಸ್ತುಗಳ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಭೂಮಿ ತಣ್ಣಗಾದ ಕೂಡಲೆ, ಶಂಖ ಅಥವಾ ಎಲುಬುಗಳಿಲ್ಲದ ಜಲ್ಲಿಯಂತಹ ಮೆತ್ತಗಿನ ವಸ್ತುಗಳೆ ಜೀವವುಳ್ಳ ಮೊದಲನೆ ಪದಾರ್ಥಗಳೆಂದು ತೋರುತ್ತದೆ. ಇವು ಸಮುದ್ರದಲ್ಲಿದ್ದಿರಬಹುದು. ಈ ಜೀವಿತ ವಸ್ತುಗಳ ಎಲುಬಿನ ಅವಶೇಷಗಳು ನಮಗೆ ದೊರೆಯುವುದಿಲ್ಲ. ಯಾಕೆಂದರೆ ಇವುಗಳಿಗೆ ಎಲುಬುಗಳಿದ್ದಿಲ್ಲ. ಆದುದರಿಂದ ನಾವು ಅಂತೂ ಇಂತೂ ಊಹಿಸಬೇಕಾಗಿದೆ. ಜಲ್ಲಿಯಂತಹ ಇಂತಹ ವಸ್ತುಗಳು ಇಂದಿಗೂ ನಮಗೆ ಸಮುದ್ರದಲ್ಲಿ ದೊರೆಯುತ್ತವೆ. ಇವು ಗುಂಡಗಿರುತ್ತವೆ. ಆದರೆ ಎಲುಬು ಇಲ್ಲವೆ ಶಂಖವಿಲ್ಲದುದರಿಂದ ಇವುಗಳ ಆಕಾರ ಒಂದೇ-ಸಮನಾಗಿ ಬದಲಾಗುತ್ತಿರುತ್ತದೆ. ಇವು ಸಾಧಾರಣವಾಗಿ ಹೀಗೆ ಇರುವವು:



ಇವುಗಳ ನಡುವೆ ಒಂದು ಚುಕ್ಕೆ ನಿನಗೆ ಕಾಣುವುದು. ಅದು ಒಂದು ತರದ ಹೃದಯ. ಈ ಪ್ರಾಣಿಗಳು ಏನೇ ಇರಲಿ, ಇವುಗಳಲ್ಲಿ ತಮ್ಮಿಂದ ತಾವೇ ಇಬ್ಭಾಗವಾಗುವ ಬಲು ವಿಲಕ್ಷಣವಾದ ರೀತಿ ಇದೆ. ಒಂದು ಸ್ಥಳದಲ್ಲಿ ಇವು ಚಿಕ್ಕವಾಗತೊಡಗುತ್ತವೆ. ಹೀಗೆಯೇ ಚಿಕ್ಕ ವಾಗುತ್ತ ಆಗುತ್ತ ಕೊನೆಗೆ ಒಡೆದು ಜಲ್ಲಿಯಂತಹ ಎರಡು ವಸ್ತು ಗಳಾಗುತ್ತವೆ. ಆದರೆ ಇವೆರಡೂ ಮೂಲ ವಸ್ತುವಿನಂತೆಯೆ ಆಗುವವು. ಈ ಇಬ್ಭಾಗವಾಗುವುದು ಹೀಗೆ:



ಇಲ್ಲಿ ಹೃದಯವು ಕೂಡ ಇಬ್ಭಾಗವಾಗುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದೊಂದು ಭಾಗಕ್ಕೆ ಅದರ ಒಂದೊಂದು ತುಣುಕು ಸೇರಿಕೊಳ್ಳುತ್ತದೆ. ಹೀಗೆಯೇ ಈ ಪ್ರಾಣಿಗಳು ಭಾಗವಾಗುತ್ತ ಮತ್ತು ಬೆಳೆಯುತ್ತ ನಡೆಯುತ್ತವೆ.

ಇದೇ ಬಗೆಯ ಪ್ರಾಣಿಯೊಂದು ಮೊದಲು ನಮ್ಮ ಭೂಮಿಯ ಮೇಲೆ ಇದ್ದಿರಬಹುದು. ಪ್ರಾಣಿಯ ಎಂತಹ ಬಡ ಮತ್ತು ಸಾದಾ ಮಾದರಿಯದು! ಆಗ ಇದಕ್ಕಿಂತ ಉತ್ತಮವಾದ ಮತ್ತು ಶ್ರೇಷ್ಠವಾದ ಪ್ರಾಣಿ ಇಡೀ ಜಗತ್ತಿನಲ್ಲೇ ಇರಲಿಲ್ಲ. ನಿಜವಾದ ಪ್ರಾಣಿ ಇನ್ನೂ ಹುಟ್ಟಿರಲಿಲ್ಲ. ಮನುಷ್ಯನಂತೂ ಮುಂದಿನ ಲಕ್ಷೋಪಲಕ್ಷ ವರುಷ ಗಳ ವರೆಗೆ ಹುಟ್ಟಿರಲಿಲ್ಲ.

ಈ ಜಲ್ಲಿಯಂತಹ ವಸ್ತುಗಳ ನಂತರ ಸಮುದ್ರದ-ಆಪು (Sea-weeds), ಶಂಖದ ಮೀನು, ಏಡಿ ಮತ್ತು ಹುಳು ಹುಪ್ಪಡಿಗಳು ತಲೆದೋರಿದುವು. ಇವುಗಳ ಬಗೆಗೆ ನಮಗೆ ಅನೇಕ ಸಂಗತಿಗಳು ಗೊತ್ತಾಗುತ್ತವೆ. ಯಾಕೆಂದರೆ, ಇವುಗಳಿಗೆ ಬಿರುಸಾದ ಎಲುಬಿನ ಭಾಗಗಳು ಮತ್ತು ಶಂಖಗಳಿದ್ದುವು. ಈ ಪ್ರಾಣಿಗಳು ಬಿಟ್ಟು ಹೋದ ತಮ್ಮ ಎಲುಬುಗಳು ಬಹಳ ಕಾಲದ ನಂತರವೂ ಈಗ ನಮಗೆ ದೊರೆ

ಯುತ್ತವೆ. ನಾವು ಅವುಗಳ ಅಭ್ಯಾಸ ಮಾಡಬಹುದು. ಶಂಖಗಳು ಸಮುದ್ರದ ಬುಡದ ಕೆಸರಿನಲ್ಲಿ ಸಿಕ್ಕಿಕೊಂಡವು. ಅವುಗಳ ಮೇಲೆ ಹೊಸ ಒಂಡು ಮತ್ತು ಉಸುಕು ಬಿಟ್ಟು ಹುಗಿದು ಹೋಗಿ ಹಾಗೆಯೆ ಉಳಿದುಕೊಂಡವು. ಮೇಲೆ ಬಿದ್ದ ಉಸುಕಿನ ಹೊರೆಯಿಂದ ಈ ಕೆಸರು ಗಟ್ಟಿಯಾಯಿತು. ಗಟ್ಟಿಯಾಗುತ್ತ ಆಗುತ್ತ ನೀರ್ವೆಟ್ಟವಾಯಿತು. ಸಮುದ್ರದಲ್ಲಿ ನೀರ್ವೆಟ್ಟಗಳಾದುದು ಹೀಗೆಯೆ. ಭೂಕಂಪ ಇಲ್ಲವೆ ಇನ್ನೇನಾದರೊಂದು ಕಾರಣದಿಂದ ಈ ಬೆಟ್ಟ ಸಮುದ್ರದ ಬುಡದಿಂದ ಮೇಲಕ್ಕೆದ್ದು ಅದೇ ಒಣ ನೆಲವಾಯಿತು. ಮುಂದೆ ಮಳೆಯು ಮತ್ತು ನದಿಯ ನೀರಿನಿಂದ ಈ ಒಣ ದಿನ್ನೆಗಳು ಕೊಚ್ಚಿ ಹೋಗಿ ಸವೆದುವು. ಆಗ ಕಾಲಾನುಕಾಲದಿಂದ ಹುದುಗಿಕೊಂಡಿದ್ದ ಈ ಶಂಖಗಳು ಹೊರ ಬಿದ್ದುವು. ಶಂಖಗಳು ಅಥವಾ ಎಲುಬಿನ ಹಂದರ (ಫಾಸಿಲ್ಲು)ಗಳು ನಮಗೆ ದೊರೆಯುವ ಬಗೆ ಇದೇ. ಇದೇ ಎಲುಬಿನ ಹಂದರಗಳನ್ನು ನಾವು ಪರೀಕ್ಷಿಸಿ ಅಭ್ಯಾಸಮಾಡಿ, ಮನುಷ್ಯನು ಕಾಣಿಸಿಕೊಳ್ಳುವ ಮೊದಲು, ಪ್ರಾಚೀನ ಕಾಲದಲ್ಲಿ ನಮ್ಮ ಭೂಮಿ ಹೇಗಿದ್ದಿರಬಹುದೆಂದು ಕಂಡುಹಿಡಿಯುತ್ತೇವೆ.

ಇಂತಹ ತೊಡಕಿಲ್ಲದ ಪ್ರಾಣಿಗಳು ಹೇಗೆ ಬೆಳೆದುವು, ಮತ್ತು ಅವು ಈಗಿರುವಂತೆ ಹೇಗೆ ಆದುವು ಎಂಬುದನ್ನು ನಾವು ಮುಂದಿನ ಓಲೆಯಲ್ಲಿ ಯೋಚಿಸೋಣ.

ಪಶುಗಳು ಕಾಣೆಸಿಕೊಂಡವು

ಸಮುದ್ರದೊಳಗಿನ ಸರಳಾಕಾರದ ಪುಟ್ಟ ಪ್ರಾಣಿಗಳೂ ನೀರಿನಲ್ಲಿಯ ಮೆದೆಗಳೂ ನಮ್ಮ ಜಗತ್ತಿನಲ್ಲಿ ಹುಟ್ಟಿದ ಪ್ರಾಣಿಗಳ ಮೊಟ್ಟ-ಮೊದಲಿನ ಗುರುತಾಗಿರಬಹುದೆಂದು ನಾವು ತಿಳಿದುಕೊಂಡೆವು. ಈ ವಸ್ತುಗಳು ನೀರೊಳಗೆ ಮಾತ್ರ ಬದುಕಿರಬಲ್ಲುವಾಗಿದ್ದುವು. ಈಗಿನ ಜಲ್ಲಿ-ಮೀನು ದಂಡೆಯ ಮೇಲೆ ಬಂದರೆ ಒಣಗಿ ಸಾಯುವಂತೆ ಅವೂ ನೀರ ಹೊರಗೆ ಬಂದ ಕೂಡಲೇ ಸಾಯುತಿದ್ದಿರಬಹುದು. ಈಗಿನಕಿಂತ ಆಗಿನ ಕಾಲದಲ್ಲಿ ನೀರು ಮತ್ತು ಜವುಗು ಭೂಮಿಯೆ ಹೆಚ್ಚಾಗಿದ್ದಿರಬಹುದು. ಆದರೆ ತುಸು ಮಾತ್ರ ಮೈದೊಗಲುಳ್ಳ ಜಲ್ಲಿ-ಮೀನುಗಳು ಮತ್ತು ಕಡಲ ಪ್ರಾಣಿಗಳು ನೆಲದ ಮೇಲೆ ಇತರ ಪ್ರಾಣಿಗಳಿಗಿಂತ ಹೆಚ್ಚು ಕಾಲ ಬಾಳಬಲ್ಲವಾಗಿದ್ದುವು. ಯಾಕೆಂದರೆ ಇವು ಬೇಗನೆ ಒಣಗುತಿದ್ದಿಲ್ಲ. ಹೀಗೆ ಇವುಗಳಿಗಿಂತ ಮೆದುವಾದ ಜಲ್ಲಿ-ಮೀನುಗಳು ಮತ್ತು ಇಂತಹ ಉಳಿದ ವಸ್ತುಗಳು ಒಣ ನೆಲವನ್ನು ಎದುರಿಸುವ ಶಕ್ತಿ ಇಲ್ಲದುದರಿಂದ ಮೆಲ್ಲ-ಮೆಲ್ಲನೆ ಕಡಿಮೆಯಾಗತೊಡಗಿದುವು; ಮತ್ತು ಬಿರುಸು ಹೊದಿಕೆಯುಳ್ಳ ಪ್ರಾಣಿಗಳು ಹೆಚ್ಚಾದುವು. ಇದು ತಿಳಿದುಕೊಳ್ಳಲು ಒಳ್ಳೆ ಮನೋಹರವಾದ ಸಂಗತಿ. ಪ್ರಾಣಿಗಳು ತಮ್ಮ ತಮ್ಮ ಸುತ್ತು-ಮುತ್ತಲಿನ ಪರಿಸ್ಥಿತಿಯೊಂದಿಗೆ ಮೆಲ್ಲ-ಮೆಲ್ಲನೆ ತಮ್ಮನ್ನು ಸರಿಪಡಿಸಿಕೊಳ್ಳುತ್ತವೆಂಬುದೇ ಇದರ ಅರ್ಥ. ಚಳಿಗಾಲದಲ್ಲಿ ಮತ್ತು ಚಳಿಯುಳ್ಳ ಹಿಮ-ಪ್ರದೇಶದಲ್ಲಿ ಪಶು-ಪಕ್ಷಿಗಳು ಹಿಮದಂತೆ ಹೇಗೆ ಬೆಳ್ಳಗಾಗಿರುತ್ತವೆಂಬುದನ್ನು ಲಂಡನ್ ಪಟ್ಟಣದ ಸೌಥ್ ಕೆನ್ಸಿಂಗ್‌ಟನ್ ವಸ್ತು ಸಂಗ್ರಹಾಲಯದಲ್ಲಿ ನೀನು ನೋಡಿರುವೆ. ಹಸುರು ಗಿಡ-ಗಂಟಿಗಳಿರುವ ಬಿಸಿಲಿನ ದೇಶದಲ್ಲಿ ಅವು ಹಸುರು ಇಲ್ಲವೆ ಮಿಂಚುವ ಬೇರೆ ಒಂದು ಬಣ್ಣವನ್ನು ತಳೆಯುತ್ತವೆ. ಎಂದರೆ ತಮ್ಮ ಸುತ್ತು-ಮುತ್ತಲಿನ ಪರಿಸ್ಥಿತಿಗೆ ತಕ್ಕಂತೆ ಅವು ತಮ್ಮನ್ನು ಹೊಂದಿಸಿಕೊಳ್ಳುತ್ತವೆ. ಸುತ್ತು-ಮುತ್ತಲಿನ ಬಣ್ಣದಂತೆ ಅವುಗಳ ಮೈಬಣ್ಣ

ವಾಗುವುದರಿಂದ ಅವು ಸಹಜವಾಗಿ ಹಗೆಗಳ ಕಣ್ಣಿಗೆ ಬೀಳುವುದಿಲ್ಲ. ತಮ್ಮನ್ನು ಹಗೆಗಳಿಂದ ಕಾಪಾಡಿಕೊಳ್ಳುವುದಕ್ಕಾಗಿ ಅವು ಹೀಗೆ ಬಣ್ಣವನ್ನು ಮಾರ್ಪಡಿಸಿಕೊಳ್ಳುತ್ತಿರುತ್ತವೆ. ಚಳಿಗಾಲದಲ್ಲಿ ಬೆಚ್ಚಗೆಮಾಡಿಕೊಳ್ಳುವುದಕ್ಕಾಗಿ ಶೀತ ಪ್ರದೇಶದೊಳಗಿನ ಈ ಪ್ರಾಣಿಗಳು ತಮ್ಮ ಮೈಮೇಲೆ ಉಣ್ಣೆಯನ್ನು ಬೆಳೆಯಿಸಿಕೊಳ್ಳುತ್ತವೆ. ಹುಲಿ ಪಟ್ಟೆ-ಪಟ್ಟೆಯಾಗಿಯೂ ಹಚ್ಚಗಾಗಿಯೂ ಇರುವುದು ಇದೇ ಕಾರಣದಿಂದ. ಕಾಡಿನೊಳಗಿನ ಗಿಡಗಳ ನಡುವಿನಿಂದ ತೂರಿ ಬರುವ ಸೂರ್ಯನ ಬೆಳಕಿನಂತೆ ಅದು ಕಾಣುತ್ತಿರುತ್ತದೆ. ದಟ್ಟವಾದ ಕಾಡಿನಲ್ಲಿ ಹುಲಿಯನ್ನು ಗುರುತಿಸುವುದು ಬಹಳ ಕಷ್ಟ.

ಪ್ರಾಣಿಗಳು ತಮ್ಮ ಸುತ್ತು-ಮುತ್ತಲಿನ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವ ಮನೋಹರವಾದ ವಿಷಯ ಬಹಳ ಮಹತ್ವದ್ದು. ಪ್ರಾಣಿಗಳು ಮಾರ್ಪಡಿಸಿಕೊಳ್ಳಲು ತಾವಾಗಿಯೆ ಯತ್ನಿಸುವುದಿಲ್ಲ. ಆದರೆ ಪರಿಸ್ಥಿತಿಯೊಂದಿಗೆ ಹೊಂದಿಕೆಯಾಗುವಂತೆ ತಮ್ಮನ್ನು ಸರಿಪಡಿಸಿಕೊಳ್ಳುವ ಪ್ರಾಣಿಗಳಿಗೆ ಬಾಳಿರಲು ಹೆಚ್ಚು ಅನುಕೂಲ. ಆದುದರಿಂದ ಇಂತಹ ಪ್ರಾಣಿಗಳು ಹೆಚ್ಚುತ್ತವೆ; ಉಳಿದವು ಹೆಚ್ಚುವುದಿಲ್ಲ. ಇದರಿಂದ ನಮಗೆ ಗೊತ್ತಾಗುವ ಸಂಗತಿಗಳು ಬಹಳ. ಸರಳವಾದ ಪ್ರಾಣಿಗಳು ಬೆಳೆದು ಶ್ರೇಷ್ಠ ತರದ ಪ್ರಾಣಿಗಳಾಗುತ್ತ ಲಕ್ಷೋಪಲಕ್ಷ ವರುಷಗಳಾದ ಮೇಲೆ ಮನುಷ್ಯನ ಉದಯವಾಗಿರಬಹುದು. ನಮ್ಮ ಬಾಳುವೆ ತೀರ ಚಿಕ್ಕದಾಗಿರುವುದರಿಂದ ಮತ್ತು ಈ ಮಾರ್ಪಾಡುಗಳು ಅತಿ ಮೆಲ್ಲನೆ ಸಾಗುವುದರಿಂದ ಇವುಗಳನ್ನು ನಾವು ನೋಡಲಾರೆವು. ಆದರೆ ಸೃಷ್ಟಿಯು ಮಾತ್ರ ವಸ್ತುಗಳನ್ನು ಮಾರ್ಪಡಿಸುತ್ತಲೂ ಪೂರ್ಣಗೊಳಿಸುತ್ತಲೂ ಎಡೆಬಿಡದೆ ನಡೆದಿರುತ್ತದೆ. ಅದು ಎಂದಿಗೂ ನಿಲ್ಲುವುದೂ ಇಲ್ಲ, ವಿಶ್ರಾಂತಿ-ಗೆಯ್ಯುವುದೂ ಇಲ್ಲ.

ಜಗತ್ತು ತಣ್ಣಗಾಗುತ್ತ ಮೆಲ್ಲ-ಮೆಲ್ಲನೆ ಒಣಗುತ್ತ ನಡೆದಿರುವ ಸಂಗತಿ ನಿನಗೆ ನೆನಪಿರಬಹುದು. ಅದು ಹೆಚ್ಚು-ಹೆಚ್ಚಾಗಿ ತಣ್ಣಗಾದಂತೆ ವಾತಾವರಣ ಮಾರ್ಪಟ್ಟು ಎಷ್ಟೋ ವಸ್ತುಗಳು ಬದಲಾದುವು. ಭೂಮಿ ಬದಲಾದಂತೆ ಪ್ರಾಣಿಗಳೂ ಬದಲಾದುವು. ಹೊಸ

ತರದ ಪ್ರಾಣಿಗಳು ಮೆಲ್ಲನೆ ತಲೆದೋರಿದುವು. ಮೊಟ್ಟ-ಮೊದಲು ಸಮುದ್ರದೊಳಗಿನ ಬರಿಯ ಸಾದಾ ಪ್ರಾಣಿಗಳೂ ಅನಂತರ ಕಡಲೊಳಗಿನ ತೊಡಕುಳ್ಳ ಪ್ರಾಣಿಗಳೂ ಕಣ್ಣಿಗೆ ಕಾಣುತ್ತವೆ. ಬರಬರುತ್ತ ಒಣ ನೆಲ ಹೆಚ್ಚಾದಂತೆ, ನೀರೊಳಗೂ ನೆಲದ ಮೇಲೂ ಇರುವ ಈಗಿನ ಕಪ್ಪೆ, ಮೊಸಳೆಗಳಂತಹ ಪ್ರಾಣಿಗಳು ಹುಟ್ಟಬರುತ್ತವೆ. ಆ ಮೇಲೆ, ಬರಿಯ ನೆಲದ ಮೇಲೆಯೆ ಸಂಚರಿಸುವ ಪ್ರಾಣಿಗಳೂ, ಮುಂದೆ ಗಾಳಿಯಲ್ಲಿ ಹಾರಾಡಬಲ್ಲ ಹಕ್ಕಿಗಳೂ ಒಂದರ ಹಿಂದೆ ಒಂದರಂತೆ ಹುಟ್ಟಿ ಬರುತ್ತವೆ.

ನಾನು ಈಗ ಕಪ್ಪೆಯನ್ನು ಕುರಿತು ಹೇಳಲಿಲ್ಲವೆ? ಇದರಿಂದ ನಮಗೊಂದು ಮನೋಹರವಾದ ಸಂಗತಿ ಗೊತ್ತಾಗುತ್ತದೆ. ಪ್ರಾಣಿಗಳು ಮೊದಲು ಮೊದಲು ನೀರಿನಲ್ಲಿಯೆ ಇರುತ್ತಿದ್ದು ಬರಬರುತ್ತ ಹೇಗೆ ನೆಲದ ಮೇಲೆ ಇರತೊಡಗಿದವೆಂಬುದು ನಮಗೆ ಕಪ್ಪೆಯ ಬಾಳುವೆಯಿಂದ ಗೊತ್ತಾಗುತ್ತದೆ. ಕಪ್ಪೆ ಮೊದಲು ಮೀನಾಗಿದ್ದು ಅನಂತರ ನೆಲದ ಮೇಲಿನ ಪ್ರಾಣಿಯಂತಾಗಿ, ಉಳಿದೆಲ್ಲ ಪ್ರಾಣಿಗಳು ಉಸಿರಾಡಿಸುವಂತೆ ಅದೂ ತನ್ನ ಪುಪ್ಪುಸಗಳಿಂದ ಉಸಿರಾಡಿಸುತ್ತದೆ.

ಪ್ರಾಚೀನ ಕಾಲದಲ್ಲಿ ನೆಲದ ಮೇಲೆ ಜೀವನ ಮೊದಲಾದಾಗ ಅಲ್ಲಿ ದೊಡ್ಡ ದೊಡ್ಡ ಕಾಡುಗಳಿದ್ದುವು. ದಟ್ಟಡವಿಗಳಿದ್ದುದರಿಂದ ನೆಲವೆಲ್ಲ ತೇವಾಗಿದ್ದಿತು. ಆ ಮೇಲೆ ಈ ಅಡವಿಗಳು ಮುಚ್ಚಿಹೋದುವು. ಮೇಲಿನ ಕಲ್ಲು ಮಣ್ಣಿನ ಹೊರೆಯಿಂದ ಈ ಎಲ್ಲ ಕಾಡುಗಳು ಕಲ್ಲಿದ್ದಲಾದುವು. ಭೂಮಿಯಲ್ಲಿ ತೀರ ಒಳಗಿರುವ ಕಣಿಗಳಿಂದ ಕಲ್ಲಿದ್ದಲು ದೊರೆಯುತ್ತಿರುವುದು ನಿನಗೆ ಗೊತ್ತಿದೆ. ಕಲ್ಲಿದ್ದಲಿನ ಕಣಿಗಳು ಆ ಹಿಂದಿನ ಕಾಲದ ಹಳೆಯ ಕಾಡುಗಳೇ.

ನೆಲದ ಮೇಲಿನ ಮೊಟ್ಟ-ಮೊದಲಿನ ಪ್ರಾಣಿಗಳೆಂದರೆ ದೊಡ್ಡ ದೊಡ್ಡ ಹಲ್ಲಿಗಳು, ಮೊಸಳೆಗಳು, ಹೆಬ್ಬಾವುಗಳು. ಇವುಗಳಲ್ಲಿ ಕೆಲವಂತೂ ನೂರಾರು ಅಡಿ ಉದ್ದವಾಗಿದ್ದುವು. ನೂರು ಅಡಿ ಉದ್ದವಾಗಿದ್ದ ಹಾವಾಗಲಿ ಹಾವು-ರಾಣಿಯಾಗಲಿ ಹೇಗಿದ್ದಿರಬಹುದು, ಊಹಿಸಿ

ನೋಡು ! ಲಂಡನ್ ಪಟ್ಟಣದ ವಸ್ತು ಸಂಗ್ರಹಾಲಯದಲ್ಲಿ ಚಿಪ್ಪುಗಟ್ಟಿದ ಇಂತಹ ಪ್ರಾಣಿಗಳನ್ನು ನೋಡಿದುದು ನಿನಗೆ ನೆನಪಿದೆಯೆ ?

ಆಮೇಲೆ, ಸ್ವಲ್ಪ ಹೆಚ್ಚು-ಕಡಿಮೆಯಾಗಿ ಈಗ ನಮ್ಮ ಕಣ್ಣಿಗೆ ಬೀಳುವಂತಹ ಮಾದರಿಯ ಪ್ರಾಣಿಗಳು ಹುಟ್ಟಿಬಂದುವು. ಇವುಗಳಿಗೆ ಮೊಲೆಯೂಡುವ ಪ್ರಾಣಿಗಳೆನ್ನುತ್ತಾರೆ. ಯಾಕೆಂದರೆ ಇವು ತಮ್ಮ ಮರಿಗಳಿಗೆ ಮೊಲೆ ಕೊಡುತ್ತವೆ. ಇವಾದರೂ ಈಗಿನವುಗಳಿಗಿಂತ ಬಹಳ ದೊಡ್ಡವಾಗಿದ್ದುವು. ಮನುಷ್ಯನನ್ನು ಬಹು ಮಟ್ಟಿಗೆ ಹೋಲುವ ಮೊಲೆಯೂಡುವ ಪ್ರಾಣಿಯೆಂದರೆ ಮಂಗ. ಆದುದರಿಂದ ಮನುಷ್ಯನು ಮಂಗನ ವಂಶದವನೆಂದು ಜನರು ತಿಳಿಯುತ್ತಾರೆ. ಪ್ರತಿಯೊಂದು ಪ್ರಾಣಿ ಸಾವಕಾಶವಾಗಿ ತನ್ನ ಸುತ್ತು-ಮುತ್ತಲಿನ ಪರಿಸ್ಥಿತಿಗೆ ಹೊಂದಿ ಕೊಂಡಿರುತ್ತ ತನ್ನ ಸ್ಥಿತಿಯನ್ನು ಉತ್ತಮಗೊಳಿಸುತ್ತ ಇರುತ್ತದೆಂಬುದೆ ಇದರ ಅರ್ಥ. ಮನುಷ್ಯನಾದರೂ ಮೊದಲು ಸುಧಾರಿಸಿದ ಮಂಗನೇ ಆಗಿದ್ದನು. ಕಾಲ ಕಳೆದಂತೆ, ಅಥವಾ ಸೃಷ್ಟಿಯ ವ್ಯಾಪಾರ ಮುಂದೆ ಸಾಗಿದಂತೆ ಇವನು ಸುಧಾರಿಸುತ್ತ ನಡೆದನು. ಈಗ ತನ್ನನ್ನು ಮೀರುವವರು ಇಲ್ಲವೇ ಇಲ್ಲವೆಂದು ಇವನು ತಿಳಿದಿರುವನು ! ಪಶುಗಳು ಮತ್ತು ಇನ್ನುಳಿದ ಪ್ರಾಣಿಗಳಿಗಿಂತ ತಾನು ತೀರ ಬೇರೆಯೆಂದು ಇವನು ಭಾವಿಸಿಕೊಳ್ಳುತ್ತಾನೆ. ಆದರೆ ನಾವೆಲ್ಲ ಮಂಗನ ಅಣ್ಣ-ತಮ್ಮಂದಿರೆಂದು ನೆನಪಿನಲ್ಲಿಡುವುದು ಒಳಿತು ! ಯಾಕೆಂದರೆ ನಮ್ಮೊಳಗಿನ ಎಷ್ಟೋ ಜನರು ಮಂಗನಂತೆ ನಡವಳಿಸುತ್ತಿರುವುದನ್ನು ನಾವು ನೋಡುವುದಿಲ್ಲವೆ ?

೬

ಮನುಷ್ಯನ ಉದಯ

ಜೀವವುಳ್ಳ ವಸ್ತುಗಳು ಭೂಮಿಯ ಮೇಲೆ ಸುಲಭಾಕೃತಿಯಿಂದ ಕಾಣಿಸಿಕೊಂಡದ್ದೂ ಲಕ್ಷಾವಧಿ ವರುಷಗಳಲ್ಲಿ ಮೆಲ್ಲ-ಮೆಲ್ಲನೆ ಬೆಳೆದು ಈಗಿನ ಸ್ಥಿತಿಗೆ ಬಂದದ್ದೂ ಹಿಂದಿನ ಪತ್ರದಲ್ಲಿ ನಾವು ನೋಡಿದೆವು. ಪ್ರಾಣಿಗಳ ಬೆಳವಣಿಗೆಯಲ್ಲಿ ಮನೋರಂಜಕವಾದ ಮತ್ತು ಮಹತ್ವವುಳ್ಳ ನಿಯಮವೊಂದನ್ನು ತಿಳಿದುಕೊಂಡೆವು. ಈ ನಿಯಮವೆಂದರೆ, ಪ್ರಾಣಿಗಳು ತಮ್ಮ ಸುತ್ತು-ಮುತ್ತಲಿನ ಪರಿಸ್ಥಿತಿಗಳೊಂದಿಗೆ ತಮ್ಮನ್ನು ಹೊಂದಿಸಿಕೊಳ್ಳಲು ಯತ್ನಿಸುತ್ತಿರುವುದು. ಹೀಗೆ ಹವಣಿಸುವಾಗ ಅವು ಅನೇಕ ಹೊಸ ಹೊಸ ಗುಣಗಳನ್ನು ಮೈಗೂಡಿಸಿಕೊಂಡು, ಸುಧಾರಿಸಿದ ಮತ್ತು ಹೆಚ್ಚು ಹೆಚ್ಚು ತೊಡಕುಳ್ಳ ಪ್ರಾಣಿಗಳಾದುವು. ಈ ರೂಪಾಂತರ ಮತ್ತು ಬೆಳವಣಿಗೆಯನ್ನು ನಾವು ಬಗೆಬಗೆಯಿಂದ ಕಾಣಬಲ್ಲೆವು. ಉದಾಹರಣಾರ್ಥವಾಗಿ, ಮೊಟ್ಟ-ಮೊದಲು ಎಲುಬುಗಳಿಲ್ಲದ ಪ್ರಾಣಿಗಳಿದ್ದುವು. ಆದರೆ ಇವುಗಳಿಂದ ಬಹಳಕಾಲ ಬದುಕುವುದಾಗಲಿಲ್ಲ. ಆದುದರಿಂದ ಇವು ಎಲುಬುಗಳನ್ನು ಬೆಳೆಯಿಸಿಕೊಂಡವು. ಇವು ಮೊಟ್ಟ-ಮೊದಲು ಬೆಳೆಯಿಸಿಕೊಂಡ ಎಲುಬು ಬೆನ್ನೆಲುಬು. ಎಲುಬುಳ್ಳ ಪ್ರಾಣಿಗಳು ಮತ್ತು ಎಲುಬಿಲ್ಲದ ಪ್ರಾಣಿಗಳು, ಹೀಗೆ ಪ್ರಾಣಿಗಳ ಎರಡು ಪಂಗಡಗಳು ನಮಗೆ ಕಾಣಿಸಿಕೊಂಡವು. ಅರ್ಥಾತ್, ನಿನಗೆ ನಾಲ್ಕೂ ನಿಟ್ಟಿನಲ್ಲಿ ಕಾಣುತ್ತಿರುವ ಮನುಷ್ಯರು ಮತ್ತು ಪಶುಗಳು ಎಲುಬುಳ್ಳ ಪ್ರಾಣಿಗಳು.

ಮುಂದೆ, ಮೀನುಗಳಂತಹ ಸಾದಾ ಪ್ರಾಣಿಗಳು ತತ್ತಿಗಳನ್ನಿಟ್ಟು ಅವುಗಳನ್ನು ಬಿಟ್ಟುಬಿಡುವುದು ತಿರಿಗಿ ನಿನಗೆ ಗೊತ್ತಾಗುವುದು. ಇಂತಹ ಪ್ರಾಣಿಗಳು ಒಂದೇ ವೇಳೆಯಲ್ಲಿ ಸಾವಿರಾರು ತತ್ತಿಗಳನ್ನಿಡುವವು. ಆದರೆ ಈ ತತ್ತಿಗಳನ್ನು ಜೋಕೆಮಾಡುವುದಿಲ್ಲ. ತಾಯಿಗೆ ಮಕ್ಕಳ ಪರಿವೆಯೆ ಇಲ್ಲ! ಅದು ಬರಿಯ ತತ್ತಿಗಳನ್ನಿಡುವ ಕೆಲಸ

ವನ್ನಷ್ಟೇ ಮಾಡಿ ಬಿಟ್ಟು ಹೋಗುವುದು. ತತ್ತಿಗಳಿದ್ದಲ್ಲಿ ಅದು ಎಂದಿಗೂ ತಿರಿಗಿ ಬರುವುದಿಲ್ಲ. ಈ ತತ್ತಿಗಳನ್ನು ಜೋಕೆ ಮಾಡು ವವರು ಯಾರೂ ಇಲ್ಲದುದರಿಂದ ಇವುಗಳೊಳಗಿನ ಎಷ್ಟೋ ತತ್ತಿಗಳು ಹಾಳಾಗುವವು. ಕೆಲವೇ ಮಾತ್ರ ಉಳಿದು ಬೆಳೆದು ಮೀನುಗಳಾ ಗುವವು. ದೊಡ್ಡ ಹಾನಿಯಲ್ಲವೆ ಇದು? ನಾವು ಮೇಲ್ತರದ ಪ್ರಾಣಿಗಳನ್ನು ಪರೀಕ್ಷಿಸುತ್ತ ಮುಂದೆ ಮುಂದೆ ಸಾಗಿದರೆ ಅವುಗಳ ತತ್ತಿಗಳು ಅಥವಾ ಮರಿಗಳು ಕಡಿಮೆ ಸಂಖ್ಯೆಯಲ್ಲಿದ್ದು ಅವುಗಳನ್ನು ಚೆನ್ನಾಗಿ ಕಾಪಾಡುತ್ತಿರುವುದು ಕಾಣಬರುತ್ತದೆ.

ಕೋಳಿ, ತತ್ತಿಗಳನ್ನಿಡುವುದಲ್ಲದೆ ಅವುಗಳಮೇಲೆ ಕುಳಿತು ಕಾವು ಕೊಡುತ್ತಿರುತ್ತದೆ. ಮರಿಗಳು ಹುಟ್ಟಿದ ಮೇಲೆ ಕೆಲವು ಕಾಲದ ವರೆಗೆ ಅವುಗಳಿಗೆ ತಿನ್ನಿಸುತ್ತವೆ. ಅವು ದೊಡ್ಡವಾದ ಮೇಲೆ ಅವುಗಳ ಚಿಂತೆ ಮಾಡುವುದಿಲ್ಲ.

ನಾನು ಹಿಂದಿನ ಓಲೆಯಲ್ಲಿ ಹೇಳಿದ ಮೇಲ್ತರಗತಿಯ ಪ್ರಾಣಿ ಗಳಲ್ಲಿ ದೊಡ್ಡದೊಂದು ಮಾರ್ಪಾಟು ಉಂಟಾದುದು ಗೊತ್ತಾಗುತ್ತದೆ. ಈ ಪ್ರಾಣಿಗಳು ತತ್ತಿಗಳನ್ನಿಡುವುದಿಲ್ಲ. ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳು ತತ್ತಿಯನ್ನು ತಮ್ಮ ಹೊಟ್ಟೆಯಲ್ಲಿಯೆ ಇಟ್ಟುಕೊಂಡು ತುಂಬ ಬೆಳೆದ ಮರಿಗಳನ್ನೆ ಈಯುತ್ತವೆ. ಆಮೇಲೆ ತಾಯಿ ತನ್ನ ಮರಿಗಳಿಗೆ ಮೊಲೆಯೂಡುತ್ತದೆ. ಇದರಂತೆ ಅದು ತನ್ನ ಮರಿಗಳನ್ನು ಚೆನ್ನಾಗಿ ಆರೈಕೆ ಮಾಡುತ್ತದೆ. ಇವುಗಳಲ್ಲಿಯೂ ಯಾವುದೊಂದು ಬಗೆಯಿಂದ ದೊಡ್ಡ ಹಾನಿಯಾದುದು ಕಂಡುಬರುತ್ತದೆ. ಮೊಲ ಕೆಲವು ತಿಂಗಳಿಗೊಮ್ಮೆ ಮರಿಗಳನ್ನೀಯುತ್ತದೆ. ಇವುಗಳಲ್ಲಿ ಎಷ್ಟೋ ಮರಿಗಳು ಸತ್ತುಹೋಗುತ್ತವೆ. ಆದರೆ ಆನೆಯಂತಹ ದೊಡ್ಡ ಪ್ರಾಣಿ ಒಂದೇ ಮರಿಯನ್ನೀಯುತ್ತದೆ. ಮತ್ತು ಅದನ್ನು ಚೆನ್ನಾಗಿ ಜೋಕೆ ಮಾಡುತ್ತದೆ.

ಪ್ರಾಣಿಗಳು ವಿಕಾಸ ಹೊಂದಿದಂತೆಲ್ಲ ಅವು ತತ್ತಿಗಳನ್ನಿಡದೆ ತಮ್ಮಂತೆ ಇರುವ, ಪರಿಪೂರ್ಣವಾದ, ಆದರೆ ಸಣ್ಣ ಆಕಾರದ ಮರಿ ಗಳನ್ನೆ ಹೆರುತ್ತವೆ. ಮೇಲ್ತರಗತಿಯ ಪ್ರಾಣಿಗಳು ಸಾಮಾನ್ಯವಾಗಿ

ಒಂದು ಬಸಿರಿನಲ್ಲಿ ಒಂದೇ ಮರಿಯನ್ನೀಯುತ್ತವೆ. ತಮ್ಮ ಮರಿಗಳಿಗಾಗಿ ಇವು ಹಂಬಲಿಸುವುದು ನಿನಗೆ ಗೊತ್ತಾಗುತ್ತದೆ. ಮನುಷ್ಯನು ಎಲ್ಲಕ್ಕಿಂತ ಶ್ರೇಷ್ಠನಾದ ಪ್ರಾಣಿ. ಆದುದರಿಂದ ತಂದೆ-ತಾಯಿಗಳು ಮಕ್ಕಳನ್ನು ಪ್ರೀತಿಸುತ್ತಾರೆ; ಚೆನ್ನಾಗಿ ಸಾಕುತ್ತಾರೆ.

ಹೀಗೆ ಕೆಳಗಿನ ತರಗತಿಯ ಪ್ರಾಣಿಗಳು ವಿಕಾಸ ಹೊಂದಿ ಮೊಟ್ಟ-ಮೊದಲಿನ ಮಾನವನಾಗಿರಲೇಬೇಕು. ಬಹುಶಃ ನಾವು ಕಾಣುವ ಈಗಿನ ಮನುಷ್ಯರಂತೆ ಮುಂಚಿನ ಕಾಲದ ಮನುಷ್ಯರು ಇದ್ದಿರಲಾರರು. ಅವರು ಸಾಧಾರಣವಾಗಿ ಕೋತಿಯ ಹಾಗೆ ಬಾಳುತ್ತಿದ್ದ ಅರ್ಧ ಮನುಷ್ಯ, ಅರ್ಧ ಮಂಗನಂತೆ ಇದ್ದಿರಬಹುದು. ಜರ್ಮನಿಯ ಹಿಡೆಲ್ಬರ್ಗ್ ಎಂಬ ಪಟ್ಟಣದಲ್ಲಿ ಒಬ್ಬ ಪಂಡಿತನನ್ನು ನಾವು ಕಾಣಲುಹೋದಾಗ ನೀನು ನಮ್ಮೊಂದಿಗೆ ಬಂದದ್ದು ನೆನಪಿದೆಯೆ? ಅವನು ನಮಗೆ ಅವಶೇಷಗಳಿಂದ ತುಂಬಿಕೊಂಡಿದ್ದ ಸಣ್ಣ ಪ್ರಾಚೀನ ವಸ್ತು ಸಂಗ್ರಹಾಲಯವನ್ನೂ ಜೋಕೆಯಿಂದ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿಟ್ಟ ಒಂದು ಡವಗೆಯನ್ನೂ ತೋರಿಸಿದನು. ಅದು ಪ್ರಾಚೀನ ಕಾಲದ ಒಬ್ಬ ಮನುಷ್ಯನ ಡವುಗೆಯಾಗಿರಬಹುದೆಂದು ತಿಳಿವಳಿಕೆ ಇದೆ. ಈ ಡವಗೆಯ ಮನುಷ್ಯನಿಗೆ ನಾವು "ಹಿಡೆಲ್ಬರ್ಗ್ ಮನುಷ್ಯ" ನೆಂದು ಕರೆಯುತ್ತೇವೆ. ಯಾಕೆಂದರೆ ಈ ಡವುಗೆ ಹಿಡೆಲ್ಬರ್ಗಿನ ಹತ್ತರ ನೆಲದಲ್ಲಿ ಹೂಳಿತ್ತು. ಆ ಕಾಲದಲ್ಲಿ ಹಿಡೆಲ್ಬರ್ಗಾಗಲಿ ಇನ್ನಾವ ಪಟ್ಟಣವಾಗಲಿ ಇದ್ದಿಲ್ಲ.

ಪ್ರಾಚೀನ ಕಾಲದಲ್ಲಿ ಮನುಷ್ಯರು ಒಂದೇ ನೆಲೆಯಲ್ಲಿ ನಿಲ್ಲದೆ ಅಲೆದಾಡುತ್ತಿದ್ದರು. ಆಗ ಚಳಿ ಬಹಳವಿತ್ತು. ಆ ಕಾಲಕ್ಕೆ ಹಿಮ-ಯುಗವೆಂದು ಹೆಸರು. ಯಾಕೆಂದರೆ ಆಗ ಮಂಜು ವೆಗ್ಗಳವಾಗಿತ್ತು. ಈಗ ಉತ್ತರ-ಧ್ರುವ ಪ್ರದೇಶದಲ್ಲಿದ್ದಂತಹ ಮಂಜು-ಗುಡ್ಡಗಳು ಆಗ ಇಂಗ್ಲಂಡು ಮತ್ತು ಜರ್ಮನಿಯ ವರೆಗೆ ಹರಡಿದ್ದುವು. ಆಗ ಮನುಷ್ಯರು ಬದುಕಿರುವುದು ಬಹಳ ಕಷ್ಟವಾಗಿದ್ದಿರಬೇಕು. ಹಿಮ-ಗಿರಿಗಳು ಇಲ್ಲದಲ್ಲಿ ಮಾತ್ರ ಅವರು ಇರಬಲ್ಲವರಾಗಿದ್ದರು. ಆಗಿನ ಕಾಲದಲ್ಲಿ ಭೂ-ಮಧ್ಯ ಸಾಗರವಂತೂ ಇರಲೇ ಇಲ್ಲವೆಂದೂ ಆ ಸ್ಥಳ

ದಲ್ಲಿ ಒಂದೆರಡು ಸರೋವರಗಳು ಮಾತ್ರ ಇದ್ದವೆಂದೂ ವೈಜ್ಞಾನಿಕರು ಹೇಳುತ್ತಾರೆ. ಕೆಂಪು ಸಮುದ್ರವೂ ಆಗ ಇದ್ದಿಲ್ಲ. ಇದೆಲ್ಲವೂ ನೆಲವೇ ಆಗಿತ್ತು. ಭಾರತ ದೇಶದ ಬಹು-ಭಾಗ ಬಹುಶಃ ಒಂದು ನಡು-ಗಡ್ಡೆಯಾಗಿದ್ದಿರಬಹುದು. ನಮ್ಮ ಪ್ರಾಂತದ ಕೆಲ-ಭಾಗ ಮತ್ತು ಪಂಜಾಬು ಕಡಲಾಗಿತ್ತು. ನಡುವೆ ಕಡಲು ಬಂದು ದಕ್ಷಿಣ ಹಿಂದುಸ್ತಾನವೂ ಮಧ್ಯ ಹಿಂದುಸ್ತಾನವೂ ಹಿಮಾಲಯದಿಂದ ಬೇರೆಯಾದುದನ್ನು ಊಹಿಸು. ಆಗ ನೀನು ಮಸೂರಿಗೆ ಹಡಗಿನಿಂದ ಹೋಗಬೇಕಾಗುತಿತ್ತು.

ಮನುಷ್ಯನು ಮೊದಲು ಹುಟ್ಟಿ ಬಂದಾಗ ಅವನ ಸುತ್ತು-ಮುತ್ತು ಅನೇಕ ದೊಡ್ಡ ದೊಡ್ಡ ಪಶುಗಳೇ ಇದ್ದಿರಬೇಕು. ಅವನು ಅವುಗಳಿಗೆ ಅಂಜುತ್ತ ಕಾಲಹರಣ ಮಾಡಿರಬೇಕು. ಈಗ ಮನುಷ್ಯನು ಜಗತ್ತಿನ ಒಡೆಯನಾಗಿರುವನು. ಅವನು ಪಶುಗಳನ್ನು ತನ್ನ ಮನಬಂದಂತೆ ನಡೆಯಿಸಿಕೊಳ್ಳುತ್ತಿರುವನು. ಕುದುರೆ, ಆಕಳು, ಆನೆ, ನಾಯಿ, ಬೆಕ್ಕುಗಳಂತಹ ಕೆಲವು ಪ್ರಾಣಿಗಳನ್ನು ಅವನು ಸಾಕಿ ಸಲಹುತ್ತಾನೆ. ಕೆಲವನ್ನು ತಿನ್ನುತ್ತಾನೆ. ಹುಲಿ ಸಿಂಹಗಳಂತಹ ಕೆಲವು ಪ್ರಾಣಿಗಳನ್ನು ತನ್ನ ಸಂತೋಷಕ್ಕಾಗಿ ಬೇಟೆಯಾಡುತ್ತಾನೆ. ಆದರೆ ಆಗಿನ ಕಾಲದಲ್ಲಿ ಇವನು ಒಡೆಯನಾಗಿದ್ದಿಲ್ಲ. ತಾನೇ ಬೇಟೆಯ ಬಡಪ್ರಾಣಿಯಾಗಿದ್ದು ಕಾಡು ಮೃಗಗಳಿಂದ ತನ್ನನ್ನು ಕಾಪಾಡಿಕೊಳ್ಳಬೇಕಾಗುತಿತ್ತು. ಬರ-ಬರುತ್ತ ಮನುಷ್ಯನು ಹಾಗೂ ಹೀಗೂ ಏಳಿಗೆ ಹೊಂದುತ್ತ ಬಲವಂತನಾಗುತ್ತ ಕಡೆಗೆ ಪಶುಗಳಿಗಿಂತ ಹೆಚ್ಚು ಶಕ್ತಿಶಾಲಿಯಾದನು. ಅವನಿಂದ ಇದೆಲ್ಲ ಹೇಗಾಯಿತು? ಮೈ ಕಸುವಿನಿಂದಲ್ಲ; ಯಾಕೆಂದರೆ ಆನೆ ಮನುಷ್ಯನಿಗಿಂತ ಬಹಳ ಕಸುವುಳ್ಳದ್ದು. ಇದೆಲ್ಲ ಆದುದು ಬುದ್ಧಿಯ ಬಲ ಮತ್ತು ಮೆದುಳಿನ ಶಕ್ತಿಯಿಂದ.

ಪ್ರಾಚೀನ ಕಾಲದಿಂದ ಈ ಹೊತ್ತಿನ ವರೆಗೆ ಮನುಷ್ಯನ ಬುದ್ಧಿಯ ಈ ಬೆಳವಣಿಗೆಯನ್ನು ನಾವು ಗೊತ್ತುಹಚ್ಚಬಲ್ಲೆವು. ಮನುಷ್ಯನು ಉಳಿದ ಪ್ರಾಣಿಗಳಿಂದ ಬೇರೆಯಾಗಿರುವದು ಈ ಬುದ್ಧಿಯ ಬಲದಿಂದ

ಎಂಬಲ್ಲಿ ಸಂದೇಹವಿಲ್ಲ. ಪಶುವಿನಲ್ಲಿಯೂ ಬುದ್ಧಿ ಇಲ್ಲದ ಮನುಷ್ಯನಲ್ಲಿಯೂ ಏನೂ ಭೇದವಿಲ್ಲ.

ಮನುಷ್ಯನು ಬೆಂಕಿಯನ್ನು ಗೊತ್ತುಮಾಡಿಕೊಂಡದ್ದೆ ಅವನ ಮೊದಲನೆ ಹಿರಿದಾದ ಶೋಧನೆಯಾಗಿರಬಹುದು. ನಾವು ಈಗ ಬೆಂಕಿಯ ಕಡ್ಡಿಯಿಂದ ದೀಪವನ್ನು ಹೊತ್ತಿಸುತ್ತೇವೆ. ಈ ದೀಪದ ಕಡ್ಡಿಗಳು ತೀರ ಇತ್ತೀಚೆಯ ಪದಾರ್ಥಗಳು. ಹಿಂದಿನ ಕಾಲದಲ್ಲಿ ಬೆಣಚು-ಗಲ್ಲು (Flint) ಗಳನ್ನು ಕಿಡಿ ಏಳುವ ವರೆಗೆ ಒಂದಕ್ಕೊಂದು ತಿಕ್ಕಿ ಬೆಂಕಿಯನ್ನು ಮಾಡುತಿದ್ದರು. ಈ ಕಿಡಿಯಿಂದ ಒಣಗಿದ ಹುಲ್ಲಿಗೆ ಇಲ್ಲವೆ ಒಣಗಿದ ಇನ್ನಾವುದಕ್ಕಾದರೂ ಬೆಂಕಿ ಹಚ್ಚುತಿದ್ದರು. ಬೆಣಚು-ಗಲ್ಲುಗಳಾಗಲಿ, ಮತ್ತಾವ ಪದಾರ್ಥಗಳಾಗಲಿ, ತನ್ನಿಂದ ತಾನೇ ಹೊಸೆದಾಡಿ ಕಾಡಿನಲ್ಲಿ ಬೆಂಕಿ ಏಳುತ್ತಿತ್ತು. ಇದರಿಂದ ಏನನ್ನಾದರೂ ಕಲಿತುಕೊಳ್ಳುವಷ್ಟು ಬುದ್ಧಿ ಪಶುಗಳಲ್ಲಿರಲಿಲ್ಲ. ಆದರೆ ಮನುಷ್ಯನು ಹೆಚ್ಚು ಬುದ್ಧಿವಂತನು. ಬೆಂಕಿಯ ಉಪಯೋಗವನ್ನು ಇವನು ಕಂಡುಹಿಡಿದನು. ಅದು ಚಳಿಗಾಲದಲ್ಲಿ ಇವನನ್ನು ಬೆಚ್ಚಗೆ ಮಾಡುತಿತ್ತು. ಇವನ ಹಗೆಗಳಾಗಿದ್ದ ದೊಡ್ಡ ಪಶುಗಳನ್ನು ಹೆದರಿಸಿ ಓಡಿಸುತಿತ್ತು. ಹೀಗೆ, ಬೆಂಕಿ ಹತ್ತಿದಾಗ ಯಾವಾಗಲೂ ಗಂಡಸರೂ ಹೆಂಗಸರೂ ಒಣಗಿದ ಎಲೆಗಳನ್ನು ಅದರಲ್ಲಿ ಹಾಕಿ ಅದನ್ನು ಕಾಯ್ದಿಡಲು ಹವಣಿಸುತಿದ್ದರು. ಬೆಂಕಿ ಆರಿ ಹೋಗುವುದನ್ನು ಇವರು ಇಚ್ಛಿಸುತಿದ್ದಿಲ್ಲ. ಬೆಣಚು-ಗಲ್ಲುಗಳನ್ನು ಒಂದಕ್ಕೊಂದು ಹೊಡೆದು ಬೆಂಕಿಯನ್ನು ಹೊತ್ತಿಸಬಲ್ಲೆವೆಂಬುವನ್ನು ಇವರು ಮೆಲ್ಲ-ಮೆಲ್ಲನೆ ಕಂಡುಕೊಂಡರು. ಇದೇ ಇವರ ದೊಡ್ಡ ಶೋಧನೆ. ಇದರಿಂದ ಅನ್ಯ ಪ್ರಾಣಿಗಳ ಮೇಲೆ ಇವರಿಗೆ ಸ್ವಲ್ಪ ಒಡೆತನ ಬಂದಿತು. ಜಗತ್ತನ್ನು ಕೈವಶ ಮಾಡಿಕೊಳ್ಳುವ ಹಾದಿಯಲ್ಲಿ ಮಾನವನು ಆಗ ವೇಗದಿಂದ ಮುಂದಕ್ಕೆ ಸಾಗಿದನು.

೭

ಮೊಟ್ಟ-ಮೊದಲಿನ ಮನುಷ್ಯರು

ಮನುಷ್ಯ ಮತ್ತು ಇನ್ನುಳಿದ ಪ್ರಾಣಿಗಳಲ್ಲಿ ಅಂತರವುಂಟಾಗಲು ಮುಖ್ಯವಾಗಿ ಮನುಷ್ಯನ ಬುದ್ಧಿಯೇ ಕಾರಣವೆಂದು ನಾವು ಹಿಂದಿನ ಓಲೆಯಿಂದ ನೋಡಿಕೊಂಡೆವು. ಮನುಷ್ಯನು ಅದ್ಭುತವಾದ ಪಶುಗಳಿಗಿಂತ ಹೆಚ್ಚು ಬಲಿಷ್ಠನಾದುದೂ ಚುರುಕಾಗಿದ್ದುದೂ ಈ ಬುದ್ಧಿಯೊಂದರಿಂದಲೇ. ಇದೊಂದು ಇಲ್ಲದಿದ್ದರೆ ಅವು ಮನುಷ್ಯನನ್ನು ನಾಶಮಾಡಿ ಬಿಡುತ್ತಿದ್ದುವು. ಮನುಷ್ಯನ ಬುದ್ಧಿ ಬೆಳೆದಂತೆ ಅವನ ಆಳ್ತನವೂ ಬೆಳೆಯ ತೊಡಗಿತು. ತನ್ನ ಹಗೆಗಳನ್ನು ಎದುರಿಸಿ ಕಾದಲು, ಪ್ರಾರಂಭದಲ್ಲಿ ಅವನಲ್ಲಿ ಬೇಕಾದ ಆಯುಧಗಳಿದ್ದಿಲ್ಲ. ಅವನು ಪಶುಗಳ ಕಡೆಗೆ ಕಲ್ಲುಗಳನ್ನು ಎಸೆಯುತ್ತಿದ್ದನು ಮಾತ್ರ. ಆ ಮೇಲೆ ಅವನು ಕಲ್ಲುಗಳಿಂದ ಕೊಡಲಿ, ಭಲ್ಲೆ, ದಬ್ಬಣ, ಮುಂತಾದ ಅನೇಕ ಪದಾರ್ಥಗಳನ್ನು ಮಾಡತೊಡಗಿದನು. ಸೌಥ್ ಕೆನ್ಸಿಂಗ್‌ಟನ್ನಿನ ಮತ್ತು ಜಿನೇವಾ ಪಟ್ಟಣದ ವಸ್ತು ಸಂಗ್ರಹಾಲಯದಲ್ಲಿ ಇಂತಹ ಕಲ್ಲಿನ ಆಯುಧಗಳನ್ನು ನಾವು ನೋಡಿರುವೆವು.

ಹಿಂದಿನ ಓಲೆಯಲ್ಲಿ ನಾನು ಹೇಳಿದ ಹಿಮಯುಗ ಮೆಲ್ಲ-ಮೆಲ್ಲನೆ ಮುಗಿದು ಮಧ್ಯ ಯುರೋಪು ಮತ್ತು ಏಸಿಯದಲ್ಲಿಯ ಹಿಮದ ಬೆಟ್ಟಗಳು ಮಾಯವಾದುವು. ಬೆಚ್ಚಗಾಗುತ್ತ ನಡೆದಂತೆ ಮನುಷ್ಯರು ಹರಡಿದರು.

ಆಗಿನ ಕಾಲದಲ್ಲಿ ಮನೆಗಳಾಗಲಿ ಕಟ್ಟಡಗಳಾಗಲಿ ಇದ್ದಿಲ್ಲ. ಜನರು ಗವಿಗಳಲ್ಲಿರುತ್ತಿದ್ದರು. ಭೂಮಿಯ ಸಾಗುವಳಿ, ಎಂದರೆ ಹೊಲಗಳಲ್ಲಿ ದುಡಿಯುವುದು ಆಗ ಇದ್ದಿಲ್ಲ. ಮನುಷ್ಯರು ಹಣ್ಣು-ಹಂಪಲು ಇಲ್ಲವೆ ತಾವು ಕೊಂದ ಪ್ರಾಣಿಗಳನ್ನು ತಿನ್ನುತ್ತಿದ್ದರು. ಉಣ್ಣಲು ರೊಟ್ಟಿಯಾಗಲಿ ಬೋನವಾಗಲಿ ಅವರಲ್ಲಿರಲಿಲ್ಲ. ಯಾಕೆಂದರೆ ಅವರು ಹೊಲಗಳಲ್ಲಿ ಬೆಳೆಯನ್ನು ಬೆಳೆಯುತಿದ್ದಿಲ್ಲ. ಅಡುಗೆ ಮಾಡಲು ಅವರಿಗೆ

ತಿಳಿದಿರಲಿಲ್ಲ. ಆದರೆ ತಮಗೆ ದೊರೆತ ಮಾಂಸವನ್ನು ಅವರು ದೊಡ್ಡ ಉರಿಯಲ್ಲಿ ಬೇಯಿಸುತಿದ್ದಿರಬಹುದು. ಅಡುಗೆ ಮಾಡಲು ಅವರಲ್ಲಿ ಗಡಿಗೆ ಮಡಿಕೆಗಳೂ ತಪ್ಪೇಲಿ ತವೆಗಳೂ ಇದ್ದಿಲ್ಲ.

ಇಲ್ಲಿ ಹೇಳಬೇಕಾದ ಕುತೂಹಲಕರವಾದ ಸಂಗತಿಯೊಂದಿದೆ. ಈ ಕಾಡು ಜನರಿಗೆ ಚಿತ್ರತೆಗೆಯಲು ಗೊತ್ತಿತ್ತು. ಆದರೆ ಅವರಲ್ಲಿ ಹಾಳೆ, ಲೆಕ್ಕಣಿಕೆ, ಸೀಸಕಡ್ಡಿ, ಇಲ್ಲವೆ ಕುಂಚುಗಳಿದ್ದಿಲ್ಲ. ಅವರಲ್ಲಿ ಕಲ್ಲಿನ ಬರಿಯ ದಬ್ಬಣಗಳು ಮತ್ತು ಚೂಪಾದ ವಸ್ತುಗಳಿದ್ದುವು. ಇಂತಹ ಕಲ್ಲಿನ ವಸ್ತುಗಳಿಂದ ಅವರು ಗೋಡೆಯ ಮೇಲೆ ಕೊರೆಯುತಿದ್ದರು; ಪಶುಗಳ ಚಿತ್ರವನ್ನು ತೆಗೆಯುತಿದ್ದರು. ಅವರು ತೆಗೆದ ಚಿತ್ರಗಳು ಬಹಳ ಸುಂದರವಾಗಿರುವವು. ಆದರೆ ಅವೆಲ್ಲ ಬಹುತರವಾಗಿ ರೇಖೆಗಳಾಗಿರುವವು. ರೇಖೆಗಳನ್ನು ಚಿತ್ರಿಸುವುದು ಹೆಚ್ಚು ಸುಲಭ. ಚಿಕ್ಕ-ಮಕ್ಕಳು ಸಾಮಾನ್ಯವಾಗಿ ಚಿತ್ರ ಬರೆಯುವುದು ಹೀಗೆಯೆ ಎಂಬುದನ್ನು ನೀನು ಬಲ್ಲೆಯಷ್ಟೆ? ಆಗ ಗವಿಗಳಲ್ಲಿ ಕತ್ತಲಾಗಿದ್ದಿರಬಹುದು. ಆದುದರಿಂದ ಅವರು ಯಾವುದೋ ಒಂದು ತರದ ದೀಪವನ್ನು ಹಚ್ಚುತಿದ್ದರು.

ನಾವು ಹೇಳಿರುವ ಈ ಮನುಷ್ಯರಿಗೆ ಪ್ಯಾಲಿಯೊಲಿಥಿಕ್ ಮನುಷ್ಯರು, ಅಥವಾ ಹಳೆಯ ಕಲ್ಲಿನ ಕಾಲದ ಜನರೆಂದು ಹೆಸರಿರುವುದು. ಆ ಕಾಲಕ್ಕೆ ಕಲ್ಲಿನ ಯುಗವೆಂದು ಕರೆಯುವರು. ಯಾಕೆಂದರೆ, ಮನುಷ್ಯರು ಆಗ ತಮ್ಮ ಎಲ್ಲ ಉಪಕರಣಗಳನ್ನು ಕಲ್ಲಿನಿಂದ ಮಾಡುತ್ತಿದ್ದರು. ಧಾತುಗಳ ಬಳಕೆಯನ್ನು ಅವರು ಅರಿತಿರಲಿಲ್ಲ. ಈಗಿನ ಕಾಲದಲ್ಲಿ ಬಹುತರವಾಗಿ ನಮ್ಮ ಎಲ್ಲ ವಸ್ತುಗಳು ಧಾತುಗಳಿಂದ, ವಿಶೇಷವಾಗಿ ಕಬ್ಬಿಣದಿಂದ ಸಿದ್ಧವಾಗುತ್ತವೆ. ಆದರೆ ಆ ಕಾಲದಲ್ಲಿ ಕಬ್ಬಿಣ ಮತ್ತು ಕಂಚಿನ ಗುರುತು ಇರಲಿಲ್ಲ. ಆದುದರಿಂದ, ಬಳಸಲು ಸುಲಭವಲ್ಲದ ಕಲ್ಲನ್ನೆ ಅವರು ಉಪಯೋಗಿಸುತ್ತಿದ್ದರು. ಆದರಿಂದ ಕೆಲಸವನ್ನು ಸಾಗಿಸುವುದು ದುಸ್ತರವಾಗಿತ್ತು.

ಕಲ್ಲಿನ ಹಳೆಯ ಯುಗ ಮುಗಿಯುವ ಮೊದಲೆ ಜಗತ್ತಿನ ವಾತಾವರಣ ಬಹಳ ಮಾರ್ಪಟ್ಟಿತು. ಹೆಚ್ಚು ಬೆಚ್ಚಗೂ ಆಯಿತು. ಮಂಜು-

ಗಡ್ಡೆಗಳು ಉತ್ತರ ಮಹಾಸಾಗರದ ಕಡೆಗೆ ಬಹಳ ದೂರ ಹಿಂದೆ ಸರಿದುವು. ಮಧ್ಯ ಏಸಿಯ ಮತ್ತು ಯುರೋಪುಗಳಲ್ಲಿ ದೊಡ್ಡ ದೊಡ್ಡ ಕಾಡುಗಳು ತಲೆದೋರಿದುವು. ಈ ಕಾಡುಗಳಲ್ಲಿ ಹೊಸ ಜಾತಿಯ ಮನುಷ್ಯರು ಇರುತ್ತಿದ್ದುದು ನಮಗೆ ತಿಳಿದು ಬರುತ್ತದೆ. ಈಗ ನಾವು ಹೇಳಿರುವ ಪ್ಯಾಲಿಯೊಲಿಥಿಕ್ ಮನುಷ್ಯರಿಗಿಂತ ಈ ಜನರು ಅನೇಕ ತರಹಗಳಿಂದ ಚುರುಕು ಬುದ್ಧಿಯುಳ್ಳವರಾಗಿದ್ದರು. ಹೀಗಿದ್ದರೂ ಇವರು ತಮ್ಮ ಉಪಕರಣಗಳನ್ನು ಕಲ್ಲಿನಿಂದಲೇ ಮಾಡಿಕೊಳ್ಳುತಿದ್ದರು. ಆದುದರಿಂದ ಇವರೂ ಪಾಷಾಣ ಯುಗಕ್ಕೆ ಸೇರಿದವರೇ. ಆದರೆ ಈ ಜನರ ಯುಗ ಅನಂತರದ್ದು. ಈ ಕಾಲದ ಜನರನ್ನು ನಿಯೋಲಿಥಿಕ್, ಎಂದರೆ, ಕಲ್ಲಿನ ಹೊಸ ಯುಗದ ಜನರೆಂದು ಕರೆಯುತ್ತಾರೆ. ಆಗ ಮನುಷ್ಯನ ಬೆಳವಣಿಗೆ ಬಹಳವಾಗಿತ್ತೆಂದು ನಾವು ಈ ಜನರನ್ನು ಪರೀಕ್ಷಿಸುವುದರಿಂದ ಕಂಡು ಬರುತ್ತದೆ. ಉಳಿದ ಪಶುಗಳಿಗೆ ಮನುಷ್ಯರನ್ನು ಹೋಲಿಸುವುದರಿಂದ ಮನುಷ್ಯನ ಬುದ್ಧಿ ಅವನನ್ನು ಬಹು ಬೇಗನೆ ಮುಂದುವರಿಸಿದಂತಿರುವುದು. ಕಲ್ಲಿನ ಹೊಸ ಯುಗದ ಈ ಜನರು ಭೂಮಿಯನ್ನು ಸಾಗುಮಾಡುವುದನ್ನು ಕಂಡುಹಿಡಿದರು. ಭೂಮಿಯನ್ನು ಸಾಗುಮಾಡಿ ತಮಗೆ ಬೇಕಾದ ಆಹಾರವನ್ನು ಬೆಳಿಸತೊಡಗಿದರು. ಇದೇ ಅವರ ದೊಡ್ಡ ಕೆಲಸವಾಗಿದ್ದಿತು. ಕಾಡು ಮಿಗಗಳನ್ನು ದಿನವೆಲ್ಲವೂ ಬೇಟೆಯಾಡುವುದಕ್ಕಿಂತ ಬಹಳ ಸುಲಭವಾಗಿ ಈಗ ಅವರು ತಮ್ಮ ಅನ್ನವನ್ನು ಗಳಿಸಿಕೊಳ್ಳುವಂತಾಯಿತು. ದಣಿವಾರಿಸಿಕೊಳ್ಳುವುದಕ್ಕೂ, ವಿಚಾರ ಮಾಡಲಿಕ್ಕೂ ಅವರಿಗೆ ಹೆಚ್ಚು ಅನುವು ದೊರೆಯ ತೊಡಗಿತು. ಬಿಡುವು ಹೆಚ್ಚು ದೊರೆತಂತೆ ಅವರು ಹೊಸ ಹೊಸ ವಸ್ತುಗಳನ್ನು ಮತ್ತು ಹೊಸ ಹೊಸ ಬಗೆಗಳನ್ನು ಕಂಡುಕೊಳ್ಳುವುದರಲ್ಲಿ ಬಹಳ ಮುಂದುವರಿದರು. ಮಣ್ಣಿನ ಗಡಿಗೆ ಮಡಿಕೆಗಳನ್ನು ಮಾಡುವುದನ್ನು ಅವರು ಹುಡುಕಿದರು. ಇದರಿಂದ ಆಹಾರವನ್ನು ಬೇಯಿಸಲು ಹೆಚ್ಚು ಅನುಕೂಲವಾಯಿತು. ಇವರು ಮಾಡಿದ ಕಲ್ಲಿನ ಸಲಕರಣೆಗಳು ಬಹಳ ಚೆಲುವಾಗಿಯೂ ನುಣುಪಾಗಿಯೂ ಇದ್ದುವು. ಪ್ರಾಣಿಗಳನ್ನು, ಎಂದರೆ,

ಆಕಳು, ನಾಯಿ, ಕುರಿ, ಹೋತುಗಳನ್ನು ಪಳಗಿಸುವುದನ್ನು ಇವರು ಕಲಿತರು. ನೇಯುವುದನ್ನೂ ಇವರು ಕಲಿತರು.

ಇವರು ಮನೆಗಳಲ್ಲಿ ಇಲ್ಲವೆ ಗುಡಿಸಲುಗಳಲ್ಲಿ ಇರತೊಡಗಿದರು. ಈ ಗುಡಿಸಲುಗಳು ಕೆರೆಗಳ ನಡುವೆ ಹಾಕಲ್ಪಡುತ್ತಿದ್ದುವು. ಏಕೆಂದರೆ ಅಲ್ಲಿ ಕಾಡು ಮಿಗಗಳಾಗಲಿ ಬೇರೆ ಮನುಷ್ಯರಾಗಲಿ ಸುಲಭವಾಗಿ ಇವರ ಮೇಲೆ ದಾಳಿಡುವಂತಿರಲಿಲ್ಲ. ಈ ಕಾರಣದಿಂದ ಈ ಜನರಿಗೆ ಸರೋವರ ನಿವಾಸಿಗಳೆಂದು ಹೆಸರಾಯಿತು.

ಈ ಜನರನ್ನು ಕುರಿತು ನಾವು ಇಷ್ಟೊಂದನ್ನು ಹೇಗೆ ತಿಳಿದು ಕೊಂಡೆವೆಂದು ನಿನಗೆ ಅಚ್ಚರಿಯಾಗಬಹುದು. ಇವರು ಪುಸ್ತಕ ಗಳನ್ನಂತೂ ಬರೆದಿಟ್ಟಿರಲಿಲ್ಲ. ಆದರೆ ಈ ಜನರ ಚರಿತ್ರೆಯನ್ನು ನಾವು ಓದಿಕೊಳ್ಳುವುದು ಸೃಷ್ಟಿಯ ವಿಶಾಲವಾದ ಪುಸ್ತಕದಲ್ಲಿ. ಇದೇ ನಮ್ಮ ಪುಸ್ತಕವೆಂದು ನಾನು ನಿನಗೆ ಮೊದಲೇ ಹೇಳಿರುವೆನು. ಇದನ್ನು ಓದುವುದು ಅಷ್ಟು ಸುಲಭವಲ್ಲ. ಇದಕ್ಕಾಗಿ ಬಹಳ ತಾಳ್ಮೆ ಬೇಕಾಗುವುದು. ಈ ಪುಸ್ತಕವನ್ನು ಓದುವ ಹವಣಿಕೆಯಲ್ಲಿ ಎಷ್ಟೋ ಜನರು ತಮ್ಮ ಆಯುಷ್ಯವನ್ನೆ ಕಳೆದಿರುವರು. ಹಿಂದಿನ ಕಾಲದ ಅಗೆದು ತೆಗೆದ ಎಷ್ಟೋ ಅವಶೇಷಗಳನ್ನು ಇವರು ಕಲೆಹಾಕಿರುವರು. ದೊಡ್ಡ ದೊಡ್ಡ ವಸ್ತು ಸಂಗ್ರಹಾಲಯಗಳಲ್ಲಿ ಈ ಅವಶೇಷಗಳನ್ನು ಕೂಡಿಟ್ಟಿರುವರು. ಈ ಕಲ್ಲಿನ ಹೊಸ ಯುಗದ ಜನರು ಮಾಡಿದ ನುಣುಪಾದ ಕೊಡಲಿಗಳೂ, ಗಡಿಗೆಗಳೂ, ಕಲ್ಲಿನ ಬಾಣ ಮತ್ತು ದಬ್ಬಣಗಳೂ ನಮಗೆ ನೋಡಲು ದೊರೆಯುತ್ತವೆ. ನೀನು ಇಂತಹ ಎಷ್ಟೋ ವಸ್ತುಗಳನ್ನು ನೋಡಿರುವೆ. ಈಗ ಇವುಗಳನ್ನು ಮರೆತಿರ ಬಹುದು; ಇನ್ನೊಮ್ಮೆ ನೋಡಿದರೆ ಇವುಗಳನ್ನು ಚೆನ್ನಾಗಿ ತಿಳಿದುಕೊಳ್ಳುವೆ.

ಜಿನೇವಾ ವಸ್ತು ಸಂಗ್ರಹಾಲಯದಲ್ಲಿ ಒಳ್ಳೇ ಮಾದರಿಯ ಒಂದು ಕೊಳವಿದ್ದುದು ನನಗೆ ನೆನಪಿದೆ. ಕೊಳದಲ್ಲಿ ಕಟ್ಟಿಗೆಯ ಕಂಬಗಳನ್ನು ನೆಡಹಾಕಿ ಅವುಗಳ ಮೇಲೆ ಕಟ್ಟಿಗೆಯ ಅಟ್ಟವನ್ನು ಹಾಕಲಾಗಿತ್ತು.

ಈ ಕಟ್ಟಿಗೆಯ ಅಟ್ಟದ ಮೇಲೆ ಗುಡಿಸಲುಗಳನ್ನು ಹಾಕಿದ್ದರು. ಒಂದು ಸಣ್ಣ ಸೇತುವೆಯಿಂದ ಇದೆಲ್ಲವನ್ನೂ ಭೂಮಿಗೆ ಕೂಡಿಸಿಬಿಟ್ಟಿದ್ದರು.

ಹೊಸ ಯುಗದ ಈ ಜನರು ಪಶುಗಳ ತೊಗಲಿನಿಂದ ತಮ್ಮ ಮೈಯ್ಯನ್ನು ಮುಚ್ಚಿಕೊಳ್ಳುತಿದ್ದರು. ಕೆಲವೊಮ್ಮೆ ನಾರು-ಬಟ್ಟೆಯನ್ನು ಉಡುತ್ತಿದ್ದರು. ನಾರು ಎಂದರೆ ಒಂದು ತರದ ಗಿಡದ ಉದ್ದವಾದ ಎಳೆಯುಳ್ಳ, ಬಟ್ಟೆ ಮಾಡಲು ಬರುವ ಒಂದು ತೊಗಟೆ. ನಾರು-ಬಟ್ಟೆಯನ್ನು ತೊಗಟೆಯಿಂದ ಮಾಡುತ್ತಾರೆ. ಆದರೆ ಆ ಕಾಲದ ನಾರು-ಬಟ್ಟೆ ಬಹಳ ಒರಟಾಗಿದ್ದಿರಬಹುದು.

ಈ ಜನರು ಏಳಿಗೆ ಹೊಂದುತ್ತ ನಡೆದರು. ತಾಮ್ರ ಮತ್ತು ಕಂಚಿನ ಸಾಮಾನುಗಳನ್ನು ಇವರು ಮಾಡತೊಡಗಿದರು. ತಾಮ್ರ ಮತ್ತು ತವರು ಕೂಡಿ ಕಂಚಾಗುವುದು ನಿನಗೆ ಗೊತ್ತು. ತಾಮ್ರ ತವರುಗಳಿಗಿಂತ ಕಂಚು ಬಿರುಸಾಗಿರುತ್ತದೆ. ಬಂಗಾರವನ್ನೂ ಇವರು ಬಳಸುತ್ತಿದ್ದರು; ಮತ್ತು ಅದರಿಂದ ಒಡವೆಗಳನ್ನು ಮಾಡುವಷ್ಟು ಚತುರರಾಗಿದ್ದರು.

ಈ ಜನರು ಸುಮಾರು ಹತ್ತು ಸಾವಿರ ವರುಷಗಳಷ್ಟು ಹಿಂದೆ ಇದ್ದಿರಬಹುದು. ನಮಗೆ ಸರಿಯಾದ ಕಾಲ ಮತ್ತು ದಿನಗಳು ಗೊತ್ತಾಗುವುದಿಲ್ಲ. ಇದೆಲ್ಲ ಊಹೆ. ಇಲ್ಲಿಯ ವರೆಗೆ ನಾವು ಮಾತನಾಡಿಕೊಂಡದ್ದು ಲಕ್ಷಾವಧಿ ವರುಷಗಳ ಮಾತೆಂದು ನಿನಗೆ ತಿಳಿಯದೆ ಇರಲಾರದು. ಈಗ ನಾವು ಮೆಲ್ಲ-ಮೆಲ್ಲನೆ ನಮ್ಮ ಈಗಿನ ಕಾಲವನ್ನು ಹತ್ತಿರಿಸುತ್ತಿರುವೆವು. ಕಲ್ಲಿನ ಹೊಸ ಯುಗದ ಮನುಷ್ಯನಿಂದ ಈಗಿನ ಕಾಲದ ಮನುಷ್ಯನ ವರೆಗೆ ಒಮ್ಮಿಂದೊಮ್ಮೆ ಬದಲಾವಣೆಯಾಗಿಲ್ಲ, ಅಥವಾ ನಡುವೆ ಸಂದು ಬಿಟ್ಟಿಲ್ಲ. ಆದರೂ ನಾವು ಇದರಿಂದ ತೀರ ಬೇರೆಯಾಗಿರುವೆವು. ನಿಸರ್ಗದ ರೀತಿಗನುಸರಿಸಿ ಈ ಮಾರ್ಪಾಟುಗಳಾದುವು. ವಿವಿಧ ಜನಾಂಗಗಳು ಬೆಳೆದು ಪ್ರತಿಯೊಂದು ವರ್ಗವೂ ತನ್ನ ತನ್ನ ಮಾರ್ಗವನ್ನು ರೂಪಿಸತೊಡಗಿತು. ಭೂಮಿಯ ವಾತಾವರಣ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಹದ್ದಿದ್ದುದರಿಂದ ಅದಕ್ಕೆ ಹೊಂದಿಕೆಯಾಗುವಂತೆ ಜನರು ತಮ್ಮನ್ನು ಸರಿಪಡಿಸಿಕೊಳ್ಳ

ಬೇಕಾಯಿತು. ಆದರೆ ಇದನ್ನು ನಾವು ಮುಂದೆ ನೋಡಿಕೊಳ್ಳೋಣ.

ಇಂದು ನಾನು ನಿನಗೆ ಇನ್ನೊಂದು ಸಂಗತಿಯನ್ನು ಹೇಳಬೇಕೆಂದಿರುವೆನು. ಕಲ್ಲಿನ ಹೊಸ ಯುಗ ಮುಗಿಯುವ ಕಾಲದಲ್ಲಿ ಮನುಷ್ಯನಿಗೆ ದೊಡ್ಡ ಸಂಕಟವೊಂದು ಬಂದೊದಗಿತು. ಈಗಿನ ಭೂ-ಮಧ್ಯ ಸಮುದ್ರ ಆಗ ಸಮುದ್ರವಾಗಿರಲಿಲ್ಲವೆಂದು ನಾನು ನಿನಗೆ ಮೊದಲೇ ಹೇಳಿರುವೆನು. ಅಲ್ಲಿ ಕೆಲವು ಕೊಳಗಳು ಮಾತ್ರ ಇದ್ದುವು. ಈ ಕೊಳಗಳಲ್ಲಿ ಅನೇಕ ಜನರು ನೆಲೆಗೊಂಡಿದ್ದರು. ಯುರೋಪು ಮತ್ತು ಆಫ್ರಿಕಾ ಖಂಡಗಳ ನಡುವೆ ಜಿಬ್ರಾಲ್ಟರಿನ ಹತ್ತಿರ ಇದ್ದ ಭೂಮಿ ಒಮ್ಮಿಂದೊಮ್ಮೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ, ಅಟ್ಲಾಂಟಿಕ್ ಮಹಾ ಸಾಗರದ ನೀರು ಈಗ ಭೂ-ಮಧ್ಯ ಸಮುದ್ರವಾಗಿರುವ ಕೊಳ್ಳವನ್ನು ಹೊಕ್ಕಿತು. ನೀರು ಒಳಹೊಕ್ಕು ತುಂಬುತ್ತಿದ್ದಂತೆ ಅಲ್ಲಿಯ ಕೊಳಗಳ ಮೇಲೆ ಇಲ್ಲವೆ ಇವುಗಳ ಹತ್ತಿರ ಇರುತ್ತಿದ್ದ ಎಷ್ಟೋ ಜನರು ನೀರಿನಲ್ಲಿ ಮುಳುಗಿ ಹೋಗಿರಬಹುದು. ಬೇರೆ ಕಡೆಗೆ ಹೋಗಿ ತಮ್ಮನ್ನು ತಾವು ಉಳಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ. ನೂರಾರು ಮೈಲುಗಳ ವರೆಗೆ ಎಲ್ಲೆಡೆಯಲ್ಲಿಯೂ ನೀರೇ ನೀರಾಯಿತು. ದಾರಿ ತುಂಬಿ ಹೋಗುವ ವರೆಗೂ ಅಟ್ಲಾಂಟಿಕ್ ಮಹಾ ಸಾಗರದ ನೀರು ಒಳನುಗ್ಗಿತು. ಹೀಗೆ ಭೂ-ಮಧ್ಯ ಸಮುದ್ರವಾಯಿತು.

ಜಲ-ಪ್ರಳಯದ ವಿಷಯವನ್ನು ನೀನು ಬಹಳ-ಮಾಡಿ ಕೇಳಿರಬಹುದು, ಅಥವಾ ಓದಿರಬಹುದು. ಬೈಬಲಿ (Bible)ನಲ್ಲಿ ಈ ಸಂಗತಿಯನ್ನು ಹೇಳಲಾಗಿದೆ. ಇದಲ್ಲದೆ ನಮ್ಮ ಹಲ-ಕೆಲವು ಸಂಸ್ಕೃತ ಗ್ರಂಥಗಳಲ್ಲಿಯೂ ಈ ಪ್ರಳಯದ ಉಲ್ಲೇಖವಿದೆ. ಭೂ-ಮಧ್ಯ ಸಮುದ್ರ ನೀರಿನಿಂದ ತುಂಬಿಕೊಳ್ಳುತ್ತಿದ್ದಾಗ ಆದ ಮಹಾ ಜಲ-ಪ್ರಳಯವೇ ಇದಾಗಿರಬಹುದು. ಇಂತಹ ಭಯಂಕರ ಕುತ್ತಿನಿಂದ ತಪ್ಪಿಸಿಕೊಂಡು ಉಳಿದ ಹಲ-ಕೆಲವು ಜನರು ಈ ಸಂಗತಿಯನ್ನೆಲ್ಲ ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ಹೇಳಿರಬೇಕು. ಇವರು ಇದನ್ನು ನೆನಪಿನಲ್ಲಿಟ್ಟುಕೊಂಡು ಮುಂದಿನವರಿಗೆ ಹೇಳುತ್ತ ಬಂದರು. ಹೀಗೆ ಈ ಕತೆ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಯ ವರೆಗೆ ಸಾಗುತ್ತ ಬಂದಿದೆ.

೮

ಬೇರೆ ಬೇರೆ ಜನಾಂಗಗಳು ಹೇಗೆ ಆದುವು?

ವಿಶೇಷವಾಗಿ ಕೊಳಗಳಲ್ಲಿರುತ್ತಿದ್ದ ಕಲ್ಲಿನ ಹೊಸ ಯುಗದ ಮನುಷ್ಯರನ್ನು ಹಿಂದಿನ ಓಲೆಯಲ್ಲಿ ನಾವು ತಿಳಿದುಕೊಂಡೆವು. ಇವರು ಬಗೆ-ಬಗೆಯಿಂದ ಏಳಿಗೆ ಹೊಂದಿದುದನ್ನು ನಾವು ನೋಡಿಕೊಂಡೆವು. ಭೂಮಿಯನ್ನು ಸಾಗುವಮಾಡುವುದನ್ನು ಇವರು ಕಂಡು ಹಿಡಿದರು. ಅಡಿಗೆ ಮಾಡುವುದನ್ನೂ ತಮ್ಮ ಉಪಯೋಗಕ್ಕಾಗಿ ಪ್ರಾಣಿಗಳನ್ನು ಪಳಗಿಸುವುದನ್ನೂ ಅರಿತುಕೊಂಡರು. ಇದೆಲ್ಲ ನಡೆದುದು ಹಲವು ಸಾವಿರ ವರುಷಗಳ ಹಿಂದೆ. ಇವರನ್ನು ಕುರಿತು ನಮಗೆ ಹೆಚ್ಚಿಗೆ ಗೊತ್ತಾಗುವುದಿಲ್ಲ. ಆದರೆ ಈಗ ಜಗತ್ತಿನಲ್ಲಿರುವ ಬಹುತರ ಎಲ್ಲ ಜನಾಂಗಗಳು ಕಲ್ಲಿನ ಹೊಸ ಯುಗದ ಈ ಜನರಿಂದಲೇ ಹುಟ್ಟಿ ಬಂದಿರಬಹುದು. ಬಿಳುಪು, ಹಳದಿ, ಕಂದು, ಮತ್ತು ಕಪ್ಪು ಬಣ್ಣದ ಜನರು ನಮಗೆ ಕಾಣುವುದು ನಿನಗೆ ಗೊತ್ತಿದೆ. ಆದರೆ ನಿಜವಾದ ಸಂಗತಿಯೆಂದರೆ ಮನುಷ್ಯ ಸಂತತಿಗಳನ್ನು ಹೀಗೆ ನಾಲ್ಕು ಭಾಗ ಮಾಡುವುದು ಸುಲಭವಲ್ಲ. ಸಂತತಿಗಳು ಒಂದರಲ್ಲೊಂದು ಬೆರೆತು ಹೋಗಿರುವುದರಿಂದ ಅವರೊಳಗಿನ ಅನೇಕ ಜನರು ಯಾವ ಭಾಗದವರೆಂದು ಹೇಳುವುದು ಕಷ್ಟವಾಗಿದೆ. ವೈಜ್ಞಾನಿಕರು ಜನರ ತಲೆಗಳ ಅಳತೆ ಮಾಡಿ ಮನುಷ್ಯರ ಸಂತತಿಯನ್ನು ಒಮ್ಮೊಮ್ಮೆ ಕಂಡು ಹಿಡಿಯುತ್ತಾರೆ. ಇದನ್ನು ಕಂಡುಕೊಳ್ಳುವ ಬೇರೆ ಕೆಲವು ಬಗೆಗಳೂ ಇವೆ.

ಈ ತರದ ಬೇರೆ ಬೇರೆ ಜನಾಂಗಗಳು ಹೇಗೆ ಹುಟ್ಟಿದುವು? ಇವೆಲ್ಲ ಒಂದೇ ಜನಾಂಗದಿಂದ ಹುಟ್ಟಿದ್ದಾದರೆ ಇವುಗಳಲ್ಲಿ ಒಂದಕ್ಕೂ ಇನ್ನೊಂದಕ್ಕೂ ಇಷ್ಟೊಂದು ಭೇದವಿರಲು ಕಾರಣವೇನು? ನಿಗ್ರೋ ಮನುಷ್ಯನು ಜರ್ಮನಿಯ ಮನುಷ್ಯನಿಗಿಂತ ಬಹಳ ಭಿನ್ನನಾಗಿರುವನೆಂಬುದನ್ನು ನೀನು ಬಲ್ಲೆ. ಒಬ್ಬನು ಕಪ್ಪಾಗಿದ್ದರೆ ಇನ್ನೊಬ್ಬನು ಬೆಳ್ಳಗಿರುವನು. ಜರ್ಮನ್ ಮನುಷ್ಯನಿಗೆ ತಿಳಿಬಣ್ಣದ ಉದ್ದವಾದ

ಕೂದಲು ಇರುವವು. ನಿಗ್ರೋನಿಗೆ ಕಪ್ಪಾದ, ಕಿರಿದಾದ, ಮಡಿಗೂದಲಿರುವವು. ಚೀನಿ ಮನುಷ್ಯನು ಇವರಿಬ್ಬರಿಂದ ಬೇರೆಯಾಗಿರುವನು. ಈ ಹೆಚ್ಚು-ಕಡಿಮೆಗಳು ಹೇಗೆ ಉಂಟಾದುವೆಂದು ಹೇಳುವುದು ಕಷ್ಟ. ಆದರೆ ಇದರ ಕೆಲವು ಕಾರಣಗಳು ನಮಗೆ ತಿಳಿದಿವೆ. ಪಶುಗಳು ಸುತ್ತು-ಮುತ್ತಲಿನ ಪರಿಸ್ಥಿತಿಯೊಂದಿಗೆ ತಮ್ಮನ್ನು ಹೊಂದಿಸಿಕೊಳ್ಳುತ್ತಿದ್ದಂತೆಯೇ ಹೇಗೆ ಮಾರ್ಪಡುತ್ತ ನಡೆದವೆಂಬುದನ್ನು ನಾನು ನಿನಗೆ ಈ ಮೊದಲೇ ಹೇಳಿರುವೆನು. ನಿಗ್ರೊ ಮತ್ತು ಜರ್ಮನಿಯ ಮನುಷ್ಯರು ಬೇರೆ ಬೇರೆ ತರದ ಮನುಷ್ಯ ಜಾತಿಯಿಂದ ಹುಟ್ಟಿ ಬೆಳೆದಿರಬಹುದು. ಆದರೆ ಒಂದಾನೊಂದು ಕಾಲದಲ್ಲಿ ಇವರಿಬ್ಬರ ಮೂಲಪುರುಷನೂ ಒಬ್ಬನೇ ಆಗಿರಬೇಕು. ಆದುದರಿಂದ ಸುತ್ತು-ಮುತ್ತಲಿನ ಪರಿಸ್ಥಿತಿಗಳೊಂದಿಗೆ ತಮ್ಮನ್ನು ಹೊಂದಿಸಿಕೊಳ್ಳುವಾಗ ಈ ಭೇದಗಳು ಉಂಟಾಗಿರಬಹುದು. ಅಥವಾ ಹಲವು ಪ್ರಾಣಿಗಳು ಪರಿಸ್ಥಿತಿಯೊಂದಿಗೆ ಬೇಗನೇ ತಮ್ಮನ್ನು ಸರಿಪಡಿಸಿಕೊಂಡಂತೆ ಕೆಲವು ಜನರೂ ಹೀಗೆ ಹೊಂದಿಕೊಳ್ಳಲು ಶಕ್ತರಾಗಿರಬಹುದು.

ಹೀಗೆ, ಉತ್ತರ ದಿಕ್ಕಿನ ಕಡೆಗೆ ಬಹುದೂರ, ಬಹಳ ಚಳಿ ಮತ್ತು ಹಿಮದಲ್ಲಿರುತ್ತಿರುವ ಜನರು ಚಳಿಯನ್ನು ತಡೆದುಕೊಳ್ಳುವ ಶಕ್ತಿಯನ್ನು ಬೆಳೆಯಿಸಿಕೊಂಡರು. ಎಸ್ಕಿಮೋ ಜನರು ಉತ್ತರ ದಿಕ್ಕಿನ ಹಿಮ ಪ್ರದೇಶದಲ್ಲಿ ಇಂದಿಗೂ ಇರುತ್ತಿರುವರು. ಅವರು ಹೆಚ್ಚಿನ ಚಳಿಯನ್ನು ತಡೆದುಕೊಳ್ಳಬಲ್ಲರು. ನಮ್ಮ ದೇಶದಂತಿರುವ ಉಷ್ಣ ಪ್ರದೇಶಗಳಿಗೆ ಅವರನ್ನು ತಂದರೆ ಅವರು ಸತ್ತುಹೋಗಬಹುದು. ಜಗತ್ತಿನ ಉಳಿದ ಭಾಗಗಳಿಂದ ಇವರು ಬೇರ್ಪಟ್ಟಿರುವದರಿಂದ, ಮತ್ತು ಬಹಳ ಕಷ್ಟದಿಂದ ಬಾಳುವೆಯನ್ನು ಸಾಗಿಸಬೇಕಾಗುವುದರಿಂದ ಜಗತ್ತಿನ ಉಳಿದ ಜನರು ಅನೇಕ ಸಂಗತಿಗಳನ್ನು ಕಲಿತುಕೊಂಡಿರುವಂತೆ ಇವರು ಕಲಿತಿಲ್ಲ. ಆಫ್ರಿಕೆಯಲ್ಲಿ ಇಲ್ಲವೆ ಭೂ-ಮಧ್ಯ ರೇಖೆಯ ಹತ್ತಿರ ಉಷ್ಣದೇಶದಲ್ಲಿರುವ ಜನರಿಗೆ ಕಾವು ಒಗ್ಗಿ ಹೋಗಿದೆ. ಸೂರ್ಯನ ಬಿಸಿಲನ್ನು ತಿಂದು ತಿಂದು ಇವರ ಮೈ-ಬಣ್ಣ ಕಪ್ಪಾಗಿದೆ. ಕಡಲಿನ ದಂಡೆ ಅಥವಾ ಇನ್ನೆಲ್ಲಿಯಾದರೂ ನೀನು ಬಿಸಿಲಿನಲ್ಲಿ ಹೆಚ್ಚು ಕಾಲ

ಕಳೆದರೆ ನಿನ್ನ ಮೈಬಣ್ಣ ಇದ್ದುದಕ್ಕಿಂತ ಕಂದು, ಮಾಸುಗೆಂಪು, ಇಲ್ಲವೇ ಕಪ್ಪಾಗುವುದು ನಿನಗೆ ಗೊತ್ತಿದೆ. ಬರಿಯ ಕೆಲವು ವಾರಗಳ ಬಿಸಿಲಿನಿಂದ ನಿನ್ನ ಮೈಬಣ್ಣ ಹೆಚ್ಚು ಕಪ್ಪಾಗುವುದಾದರೆ ಯಾವಾಗಲೂ ಬಿಸಿಲೊಳಗೆ ಬಾಳುವೆ ಮಾಡುವ ಮನುಷ್ಯನ ಮೈಯು ಎಷ್ಟು ಕಪ್ಪಾಗಿರಬಹುದು! ಮಕ್ಕಳು, ಮೊಮ್ಮಕ್ಕಳು, ಮತ್ತು ಮರಿ-ಮಕ್ಕಳು ನೂರಾರು ವರುಷಗಳ ವರೆಗೆ ಉಷ್ಣ ಪ್ರದೇಶಗಳಲ್ಲಿ ಬಾಳುವುದರಿಂದ ಇವರು ಕಂದಿ ಕಂದಿ ಕೊನೆಗೆ ತೀರ ಕಪ್ಪಾಗುವರು. ಹಿಂದುಸ್ತಾನದ ಒಕ್ಕಲಿಗನು ಮಟ-ಮಟ ಮಧ್ಯಾನ್ಹದ ಬಿಸಿಲಿನಲ್ಲಿ ದುಡಿಯುತ್ತಿರುವುದನ್ನು ನೀನು ನೋಡಿರುವೆ. ಹೊದ್ದುಕೊಳ್ಳಲು ಬಟ್ಟೆಬರೆಗಳಿಲ್ಲದಷ್ಟು ಇವನು ಬಡವನಾಗಿರುವನು. ಬಿಸಿಲಿನಲ್ಲಿ ಇವನ ಮೈಯೆಲ್ಲ ತೆರೆದಿರುತ್ತದೆ. ಇವನ ಆಯುಷ್ಯವೆಲ್ಲವೂ ಹೀಗೆಯೇ ಕಳೆದು ಹೋದ ಮೇಲೆ ಇವನು ಕಪ್ಪುಗಟ್ಟಲೇ ಬೇಕಲ್ಲವೆ?

ಹೀಗೆ, ಜನರ ಮೈ-ಬಣ್ಣ ಅಲ್ಲಿಯ ವಾತಾವರಣದಿಂದ ಬಂದುದೆಂಬುದನ್ನು ನಾವು ಕಂಡುಹಿಡಿದೆವು. ಮನುಷ್ಯನ ಯೋಗ್ಯತೆ, ಒಳ್ಳೆಯತನ ಮತ್ತು ಚೆಲುವಿಕೆಗೂ ಅದಕ್ಕೂ ಏನೂ ಸಂಬಂಧವಿಲ್ಲ. ಬಹಳ ಕಾಲದ ವರೆಗೆ ಉಷ್ಣದೇಶದಲ್ಲಿರುವ ಬಿಳಿ ಮನುಷ್ಯನೂ ಕಪ್ಪಾಗುವನು. ಆದರೆ ಸೂರ್ಯನ ಬಿಸಿಲು ಬಡೆಯದಂತೆ ನೆಳಲೊಳಗೆ ಬೀಸಣಿಕೆಯಿಂದ ಬೀಸಿಕೊಳ್ಳುತ್ತ, ಮನೆಯಲ್ಲಿದ್ದರೆ ಮಾತ್ರ ಕಪ್ಪಾಗುವುದಿಲ್ಲ. ನಾವು ಕಾಶ್ಮೀರದವರೆಂಬುದನ್ನು ನೀನು ಬಲ್ಲೆ. ಇನ್ನೂರು ವರುಷಗಳಿಗೂ ಹಿಂದೆ ನಮ್ಮ ಪೂರ್ವಜರು ಕಾಶ್ಮೀರದಲ್ಲಿರುತ್ತಿದ್ದರು. ಅಲ್ಲಿಯ ಒಕ್ಕಲಿಗರು ಮತ್ತು ಕೂಲಿಕಾರರಿಂದ ಮೊದಲಿಸಿ ಎಲ್ಲರೂ ಚೆಲುವರಾಗಿಯೂ ತಿಳಿಬಣ್ಣದವರಾಗಿಯೂ ಇರುವರು. ಕಾಶ್ಮೀರದ ವಾತಾವರಣ ಶೀತವಾಗಿರುವುದೇ ಇದಕ್ಕೆ ಕಾರಣ. ಕಾಶ್ಮೀರದ ಅದೇ ಜನರು ಹಿಂದುಸ್ತಾನದ ಹೆಚ್ಚು ಉಷ್ಣವಾಗಿರುವ ಇತರ ಭಾಗಗಳಲ್ಲಿ ನೆಲಿಸಿದರೆ ಕೆಲವು ತಲೆಗಳಲ್ಲಿಯೆ ಅವರು ಕಪ್ಪಾಗಿ ಹೋಗುವರು. ನಮ್ಮ ಎಷ್ಟೋ ಕಾಶ್ಮೀರೀ ಗೆಳೆಯರಲ್ಲಿ ಕೆಲವರು ತಿಳಿಬಣ್ಣದವರಾಗಿಯೂ ಕೆಲವರು ಕಪ್ಪಾಗಿಯೂ ಇರುವರು. ಅಲ್ಲಿಯ

ಕುಟುಂಬಗಳು ಹಿಂದುಸ್ತಾನದ ಉಳಿದ ಭಾಗಗಳಲ್ಲಿ ಹೆಚ್ಚು-ಹೆಚ್ಚಾಗಿ ಕಾಲ ಕಳೆದಂತೆ ಕಪ್ಪಾಗುತ್ತ ಹೋಗುವ ಸಂಭವವಿದೆ. ಹೀಗೆ ವಾತಾವರಣವೇ ಮೈ-ಬಣ್ಣ ಮತ್ತು ರೂಪದ ಕಾರಣ. ಆದರೆ ಹಲವು ಜನರು ಉಷ್ಣ ಪ್ರದೇಶದಲ್ಲಿರುತ್ತಿದ್ದರೂ ಬೈಲಿನಲ್ಲಿ ದುಡಿಯುತ್ತಿರಲಿಕ್ಕಿಲ್ಲ. ದೊಡ್ಡ ದೊಡ್ಡ ಮನೆಗಳಲ್ಲಿರುವಷ್ಟು ಶ್ರೀಮಂತರಾಗಿ ತಮ್ಮನ್ನೂ ರೂಪವನ್ನೂ ಕಾಪಾಡಿಕೊಳ್ಳುತ್ತಿರಬಹುದು. ಸಂಪತ್ತುಳ್ಳ ಮನೆತನ ಎಷ್ಟೋ ತಲೆಗಳ ವರೆಗೆ ಇದರಂತೆ ಇದ್ದು ಗಾಳಿ ಮತ್ತು ಬಿಸಿಲಿಗೆ ಹೊರತಾಗಿರಬಹುದು. ಆದರೆ ತಾವು ಸ್ವತಃ ದುಡಿಯದೆ ಇತರರ ದುಡಿತದ ಮೇಲೆ ಬಾಳುವೆ ಮಾಡುವುದೇನೂ ದೊಡ್ಡತನದ ಮಾತಲ್ಲ.

ಹಿಂದುಸ್ತಾನದ ಉತ್ತರ ದಿಕ್ಕಿನಲ್ಲಿರುವ ಕಾಶ್ಮೀರ ಮತ್ತು ಪಂಜಾಬಿನ ಜನರು ಸಾಮಾನ್ಯವಾಗಿ ಚೆಲುವರಾಗಿರುವರು. ಆದರೆ ದಕ್ಷಿಣಕ್ಕೆ ಹೋದಂತೆ ಜನರು ಕಪ್ಪಾಗುತ್ತಾರೆ. ಮದ್ರಾಸು ಮತ್ತು ಲಂಕೆಯ ಜನರು ತೀರ ಕಪ್ಪಾಗಿರುವುದನ್ನು ನೀನು ನೋಡಿರುವೆ. ಇದೆಲ್ಲ ಗಾಳಿ ಬಿಸಿಲುಗಳ ಪರಿಣಾಮವೆಂದು ನಿನಗೆ ತಾನಾಗಿಯೇ ಗೊತ್ತಾಗಿರಬಹುದು. ಯಾಕೆಂದರೆ ನೀನು ದಕ್ಷಿಣಕ್ಕೆ ಹೋದಂತೆ ಭೂ-ಮಧ್ಯ ರೇಖೆಯನ್ನು ಸಮೀಪಿಸುತ್ತಿರುವೆ. ಬಿಸಿಲು ಹೆಚ್ಚಾಗ ತೊಡಗುವುದು. ಹಿಂದುಸ್ತಾನದ ಬೇರೆ ಬೇರೆ ಭಾಗಗಳಲ್ಲಿಯ ಜನರ ಮೈ-ಬಣ್ಣ ಹೆಚ್ಚು-ಕಡಿಮೆಯಾಗಿರಲು ಇದೇ ಮುಖ್ಯ ಕಾರಣವೆಂಬುದು ಯಥಾರ್ಥವಾದ ಮಾತು. ಹಿಂದುಸ್ತಾನಕ್ಕೆ ಬಂದಿರುವ ಮೂಲ ಜನಾಂಗಗಳೊಳಗಿನ ಭೇದದಿಂದ ಈ ತರದ ಹೆಚ್ಚು-ಕಡಿಮೆ ಕೆಲ ಮಟ್ಟಿಗಾದರೂ ಆಗಿರುವುದೆಂದು ನಮಗೆ ಮುಂದೆ ಗೊತ್ತಾಗುವುದು. ಹಿಂದಿನ ಕಾಲದಲ್ಲಿ ಎಷ್ಟೋ ಜನಾಂಗಗಳು ಬಂದು ಹಿಂದುಸ್ತಾನದಲ್ಲಿ ನೆಲಿಸಿರುವುವು. ಆಯಾ ಜನಾಂಗಗಳು ಉಳಿದವರೊಂದಿಗೆ ಬೆರಿಕೆಯಾಗದೆ ಬೇರೆಯಾಗಿ ಉಳಿಯಬೇಕೆಂದು ಬಹಳ ಕಾಲದ ವರೆಗೆ ಯತ್ನಿಸಿದರೂ ಪರಸ್ಪರರು ಬೆರೆತುಕೊಳ್ಳುವುದರಿಂದ ತಮ್ಮನ್ನು ತಪ್ಪಿಸಿಕೊಳ್ಳುವುದು ಈ ಜನಾಂಗಗಳಿಂದ ಸಾಧ್ಯವಾಗಲಿಲ್ಲ. ಯಾವನಾದರೊಬ್ಬ ಹಿಂದೀ ಮನುಷ್ಯನು ಇಂತಹ ಮೂಲ ಜನಾಂಗಕ್ಕೇ ಸೇರಿದವನೆಂದು ಈಗ ಹೇಳುವುದು ಕಷ್ಟವಾಗಿದೆ.

೯

ಜನಾಂಗಗಳು ಮತ್ತು ಭಾಷೆಗಳು

ಮನುಷ್ಯನು ಜಗತ್ತಿನ ಯಾವ ಭಾಗದಲ್ಲಿ ಮೊದಲು ಹುಟ್ಟಿದನೆಂದು ನಾವು ಹೇಳಲಾರೆವು. ಜನ-ವಸತಿಯಾದರೂ ಮೊದಲು ಎಲ್ಲಿತ್ತೆಂದು ನಮಗೆ ಗೊತ್ತಿಲ್ಲ. ಮನುಷ್ಯನು ಹಲವು ಕಡೆಗಳಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾಗಿ ಒಂದೇ ವೇಳೆಯಲ್ಲಿ ಹುಟ್ಟಿರಬಹುದು. ಹಿಮ-ಯುಗದ ದೊಡ್ಡ ದೊಡ್ಡ ಮಂಜು ಗುಡ್ಡಗಳು ಕರಗುತ್ತ ಉತ್ತರದ ಕಡೆಗೆ ಹಿಂದಕ್ಕೆ ಜರಿಯುತ್ತಿದ್ದಾಗ ಈ ಮನುಷ್ಯರು ಹೆಚ್ಚು ಉಷ್ಣ ಪ್ರದೇಶಗಳಲ್ಲಿ ಇರುತ್ತಿದ್ದಿರಬಹುದು. ಮಂಜು ಹೋದ ಕೂಡಲೇ, ಈಗ ಸೈಬೇರಿಯದಲ್ಲಿರುವ ಬೈಲುಗಳಂತೆ ಅಲ್ಲಿ ವಿಸ್ತಾರವಾದ ಹುಲ್ಲುಗಾಡುಗಳಾಗಿದ್ದಿರಬೇಕು. ತಮ್ಮ ದನ-ಕರುಗಳನ್ನು ಮೇಯಿಸಲು ಮನುಷ್ಯರಿಗೆ ಹುಲ್ಲು ಬೇಕಾಗುತಿದ್ದುದರಿಂದ ಅವರು ಅವುಗಳ ಸುತ್ತು-ಮುತ್ತು ತಿರುಗಾಡುತ್ತ ಬಾಳುವೆ ಮಾಡಿರಬಹುದು. ಕಂಡ ಕಂಡ ಹಾಗೆ ತಿರುಗಾಡುತ್ತ ನೆಲೆಸಿಂತು ಬಾಳುವೆ ಮಾಡಿಕೊಂಡಿರದ ಈ ಜನರಿಗೆ ಗೂಳೆಕಾರ (Nomads)ರೆಂದು ಹೆಸರು. ಈ ಗೂಳೆಕಾರರು ಅನೇಕ ದೇಶಗಳಲ್ಲಿ ಈಗಲೂ ಇದ್ದಾರೆ. ಹಿಂದುಸ್ತಾನದಲ್ಲಿಯೂ ಜಿಪ್ಸಿ (Gypsy)ಗಳಂತಹ ಗೂಳೆಕಾರರಿದ್ದಾರೆ.

ಜನರು ದೊಡ್ಡ ದೊಡ್ಡ ಹೊಳೆಗಳ ದಂಡೆಯ ಹತ್ತಿರ ನೆಲೆಗೊಂಡಿದ್ದಿರಬೇಕು. ಯಾಕೆಂದರೆ ಅಲ್ಲಿ ಭೂಮಿ ಕಸುವುಳ್ಳದ್ದಾಗಿಯೂ ಒಕ್ಕಲುತನಕ್ಕೆ ಯೋಗ್ಯವಾಗಿಯೂ ಇರುತ್ತದೆ. ನೀರು ಬಹಳವಿದ್ದುದರಿಂದ ಭೂಮಿಯಲ್ಲಿ ಬೆಳೆಯನ್ನು ಬೆಳೆದುಕೊಳ್ಳುವುದು ಹಗುರಾಗಿತ್ತು. ಹಿಂದುಸ್ತಾನದಲ್ಲಿಯ ಸಿಂಧು ಮತ್ತು ಗಂಗಾ ನದಿಗಳಂತಹ ಹಿರಿ-ಹೊಳೆಗಳ ಹತ್ತಿರ ಜನರು ವಸತಿ ಮಾಡಿಕೊಂಡಿದ್ದರೆಂದು ನಾವು ಊಹಿಸುತ್ತೇವೆ. ಅದರಂತೆಯೆ ಮೆಸೊಪೊಟಮಿಯದಲ್ಲಿ ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ಹತ್ತಿರ, ಇಜಿಪ್ತ ದೇಶದಲ್ಲಿ ನೈಲ್ ನದಿಯ ಹತ್ತಿರ, ಈ ಜನರು ಇದ್ದಿರಬೇಕು. ಚೀನದಲ್ಲಿಯೂ ಹಾಗೆಯೆ.

ನಮಗೆ ಅಲ್ಪ-ಸ್ವಲ್ಪ ಗೊತ್ತಾಗುವ ಹಿಂದುಸ್ತಾನದ ಹಳೆಯ ಜನಾಂಗವೆಂದರೆ ದ್ರಾವಿಡರು. ಆ ಮೇಲೆ ಆರ್ಯರು ಬಂದರು. ನಂತರ ಬಂದವರು ಮೂಡಲಿನ ಮೊಗಲರು. ದಕ್ಷಿಣದಲ್ಲಿರುತ್ತಿರುವ ಎಷ್ಟೋ ಜನರು ಇಂದಿಗೂ ದ್ರಾವಿಡ-ವಂಶದವರು. ಬಡಗಣವರಿಗಿಂತ ದ್ರಾವಿಡರು ಹೆಚ್ಚು ಕಪ್ಪಾಗಿರುವರು. ಏಕೆಂದರೆ ಇವರು ಹಿಂದು ಸ್ತಾನಕ್ಕೆ ತೀರ ಮೊದಲು ಬಂದವರು. ದ್ರವಿಡರು ನಾಗರಿಕತೆಯಲ್ಲಿ ಹೆಚ್ಚು ಮುಂದುವರಿದವರಾಗಿದ್ದರು. ಇವರು ಸ್ವಂತ ಭಾಷೆಯುಳ್ಳವ ರಾಗಿದ್ದು ಉಳಿದ ಜನರೊಡನೆ ಬಹಳವಾದ ವ್ಯವಹಾರ ಉದ್ಯಮ ಗಳನ್ನು ಮಾಡುತ್ತಿದ್ದರು. ಆದರೆ ನಾನು ಈಗ ಹೇಳುತ್ತಿರುವ ವಿಷಯ ಈಕಾಲಕ್ಕೆ ಸಂಬಂಧಪಟ್ಟದ್ದಲ್ಲ. ಇನ್ನೂ ಮುಂದಿನದು.

ಆ ಪ್ರಾಚೀನ ಕಾಲದಲ್ಲಿ ಪಶ್ಚಿಮ ಮತ್ತು ಮಧ್ಯ ಏಸಿಯದಲ್ಲಿ, ಮತ್ತು ಪೂರ್ವ ಯುರೋಪಿನಲ್ಲಿ ಹೊಸ ಜನಾಂಗವೊಂದು ಬೆಳೆಯು ತಿದ್ದಿತು. ಈ ಜನಾಂಗಕ್ಕೆ ಆರ್ಯರೆಂದು ಹೆಸರು. ಸಂಸ್ಕೃತ ಭಾಷೆ ಯಲ್ಲಿ ಆರ್ಯನೆಂದರೆ ಸಂಭಾವಿತ ಅಥವಾ ದೊಡ್ಡ ಮನುಷ್ಯನೆಂದು ಅರ್ಥ. ಸಂಸ್ಕೃತ ಆರ್ಯರ ಭಾಷೆಯಾಗಿದ್ದುದರಿಂದ ತಾವು ದೊಡ್ಡ ಮನುಷ್ಯರೆಂದೂ ಸಂಭಾವಿತರೆಂದೂ ಅವರು ಅರ್ಥ ಮಾಡಿಕೊಳ್ಳು ತಿದ್ದರು! ಈಗಿನವರಂತೆ ಅವರು ತಮಗೆ ತಾವೇ ದೊಡ್ಡವರೆಂದು ಹೆಮ್ಮೆಯಿಂದ ಹೊಗಳಿಕೊಳ್ಳುತಿದ್ದರು. ಆಂಗ್ಲ ಮನುಷ್ಯನು ಭೂಮಿಯ ಮೇಲೆ ತಾನೇ ಮೊಟ್ಟ-ಮೊದಲಿನವನೆಂದು ತಿಳಿದುಕೊಳ್ಳುವುದು ನಿನಗೆ ಗೊತ್ತಿದೆ. ಫ್ರಾನ್ಸ್ ದೇಶದ ಫ್ರೆಂಚರು ತಾವೇ ಎಲ್ಲರಿಗಿಂತ ಶ್ರೇಷ್ಠ ರೆಂದು ತಿಳಿದುಕೊಂಡಿರುವರು. ಜರ್ಮನಿ ಮತ್ತು ಅಮೇರಿಕೆಯ ಜನರೂ ಇನ್ನುಳಿದವರೂ ಹಾಗೆಯೇ ತಿಳಿದುಕೊಳ್ಳುತ್ತಿರುವರು.

ಈ ಆರ್ಯರು ಉತ್ತರ ಏಸಿಯ ಮತ್ತು ಯುರೋಪಿನಲ್ಲಿಯ ವಿಶಾಲವಾದ ಹುಲ್ಲು-ಗಾಡುಗಳಲ್ಲಿ ಗುಳೆ-ಕಟ್ಟಿಕೊಂಡು ತಿರುಗಾಡು ತ್ತಿದ್ದರು. ಆದರೆ ತಮ್ಮ ಜನ-ಸಂಖ್ಯೆ ಹೆಚ್ಚಾಗಿ ವಾತಾವರಣ ಉಷ್ಣ ವಾಗುತ್ತ ಹುಲ್ಲು ಕಡಿಮೆಯಾದಂತೆ, ಅವರೆಲ್ಲರಿಗೂ ಸಾಕಾಗುವಷ್ಟು ಅನ್ನ ದೊರೆಯದಂತಾಯಿತು. ಆದುದರಿಂದ ಆಹಾರಕ್ಕಾಗಿ ಅವರು

ಭೂಮಿಯ ಬೇರೆಡೆಗಳಿಗೆ ನಿರ್ವಾಹವಿಲ್ಲದೆ ಹೋಗಬೇಕಾಯಿತು. ಅವರು ಯುರೋಪಿನಲ್ಲೆಲ್ಲ ಹರಡಿದರು. ಹಾಗೂ ಹಿಂದುಸ್ತಾನ, ಪರ್ಸಿಯ ಮತ್ತು ಮೆಸಪೊಟಮಿಯ ದೇಶಗಳಿಗೆ ಬಂದರು. ಹೀಗೆ ಯುರೋಪು, ಉತ್ತರ ಹಿಂದುಸ್ತಾನ, ಪರ್ಸಿಯ ಮತ್ತು ಮೆಸಪೊಟಮಿಯದ ಬಹುತರ ಎಲ್ಲ ಜನರಲ್ಲಿ ಪರಸ್ಪರರಲ್ಲಿ ಎಷ್ಟೋ ಭೇದಗಳು ಕಂಡು ಬಂದರೂ ಇವರೆಲ್ಲ ನಿಜವಾಗಿ ಮೂಲ ಪುರುಷರಾದ ಆರ್ಯರ ಬಳ್ಳಿಯವರೇ. ಆದರೇನು ? ಇದು ಬಹಳ ಹಿಂದಿನ ಮಾತು. ಅಂದಿನಿಂದ ಇಂದಿನ ವರೆಗೆ ಎಷ್ಟೋ ಸಂಗತಿಗಳು ನಡೆದು ಜನಾಂಗಗಳು ಒಂದರೊಳಗೊಂದು ಬೆರೆತು-ಕೊಂಡಿರುವವು. ಆದುದರಿಂದ ಪ್ರಾಚೀನ ಆರ್ಯರು ಜಗತ್ತಿನೊಳಗಿನ ಈಗಿನ ಜನರ ಮೂಲ ಜನಾಂಗವೊಂದಾಗಿದ್ದರು.

ಇನ್ನೊಂದು ದೊಡ್ಡ ಜನಾಂಗವೆಂದರೆ ಮಂಗೋಲರದು. ಈ ಜನಾಂಗ ಏಸಿಯ ಖಂಡದ ಪೂರ್ವ ಭಾಗದಲ್ಲಿ, ಎಂದರೆ ಚೀನ, ಜಪಾನು, ತಿಬೇಟು, ಸಯಾಮ್ ಮತ್ತು ಬ್ರಹ್ಮದೇಶದಲ್ಲಿ ಹಬ್ಬಿಕೊಂಡಿತು. ಕೆಲವೊಮ್ಮೆ ಇವರಿಗೆ ಹಳದಿ ಬಣ್ಣದ ಜನಾಂಗದವರೆಂದು ಕರೆಯುತ್ತಾರೆ. ಇವರ ಗಲ್ಲದೆಲುಬುಗಳು ಎತ್ತರವಾಗಿಯೂ ಕಣ್ಣುಗಳು ಚಿಕ್ಕವಾಗಿಯೂ ಇರುವವು.

ಆಫ್ರಿಕೆ ಮತ್ತು ಇನ್ನೂ ಕೆಲವು ದೇಶದ ಜನರು ನಿಗ್ರೋ ಜನರು. ಇವರು ಆರ್ಯರೂ ಅಲ್ಲ, ಮಂಗೋಲರೂ ಅಲ್ಲ. ಬಹು ಕಪ್ಪು ಬಣ್ಣದವರು.

ಅರಬಸ್ತಾನ ಪಾಲಿಸ್ತಾನದ ಜನರು—ಅರಬರು ಮತ್ತು ಹಿಬ್ರೂ ಜನರು--ಬೇರೆಯಾದ ಇನ್ನೊಂದು ವಂಶದವರು.

ಸಾವಿರಾರು ವರುಷಗಳ ಅವಧಿಯಲ್ಲಿ ಮಾನವ ವಂಶದ ಈ ಮೂಲ ಜನಾಂಗಗಳು ಒಡೆದು ಸಣ್ಣ-ಪುಟ್ಟ ಜನಾಂಗಗಳಾಗಿ ಒಂದರಲ್ಲೊಂದು ಬೆರೆತು-ಕೊಂಡಿರುವವು. ಆದರೆ ಈ ಸಂಗತಿ ನಮಗೆ ಬೇಕಾಗಿಲ್ಲ. ಮಾನವ ವಂಶದ ಬೇರೆ ಬೇರೆ ಜನಾಂಗಗಳನ್ನು ಗುರುತಿಸುವ

ಮಹತ್ತರವಾದ ಮನೋರಂಜಕವಾದ ಮಾರ್ಗವೆಂದರೆ ಅವರವರ ಭಾಷೆಗಳನ್ನು ಅಭ್ಯಾಸಿಸುವುದು. ಪ್ರತಿಯೊಂದು ಜನಾಂಗಕ್ಕೆ ಮೂಲದಲ್ಲಿ ಸ್ವತಂತ್ರವಾದ ಭಾಷೆಯೊಂದಿತ್ತು. ಕಾಲ ಕಳೆದಂತೆ ಈ ಭಾಷೆಯಿಂದ ಹಲವಾರು ಭಾಷೆಗಳು ಹುಟ್ಟಿದುವು. ಆದರೆ ಈ ಎಲ್ಲ ಭಾಷೆಗಳು ಒಂದೇ ಮೂಲ ಭಾಷೆಯ ಮಕ್ಕಳು ಮೊಮ್ಮಕ್ಕಳಂತಿರುವವು. ಇವುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಒಂದೇ ತರದ ಶಬ್ದಗಳನ್ನು ನಾವು ದಣಿವಿಲ್ಲದೆ ಕಂಡುಕೊಳ್ಳಬಲ್ಲೆವು. ಪರಸ್ಪರರ ಸಂಬಂಧವನ್ನು ಗೊತ್ತುಹಚ್ಚ ಬಲ್ಲೆವು.

ಆರ್ಯರು ಏಸಿಯ ಮತ್ತು ಯುರೋಪು ದೇಶಗಳಲ್ಲಿ ಹರಡಿಕೊಂಡ ಮೇಲೆ ಅವರಲ್ಲಿ, ಪರಸ್ಪರರಲ್ಲಿ ಬಳಕೆ ತಪ್ಪಿಹೋಯಿತು. ಆ ಕಾಲದಲ್ಲಿ ಉಗೆ-ಬಂಡಿ, ತಂತಿ, ಅಂಚೆ, ಬರೆದ ಪುಸ್ತಕಗಳು ಮೊದಲಾದ ಯಾವುದೂ ಇರಲಿಲ್ಲ. ಹೀಗೆ ಆರ್ಯರ ಪ್ರತಿಯೊಂದು ಗುಂಪಿನವರು ಒಂದೇ ಭಾಷೆಯನ್ನು ತಮ್ಮ ತಮ್ಮ ರೀತಿಗನುಸರಿಸಿ ನುಡಿಯ ತೊಡಗಿದರು. ಕೆಲವು ಕಾಲದ ನಂತರ ಈ ನುಡಿ ಮೂಲ ಭಾಷೆಯಿಂದ, ಅಥವಾ ಬೇರೆ ದೇಶಗಳ ಅಕ್ಕ-ತಂಗಿಯರಂತಿದ್ದ ಉಳಿದ ಆರ್ಯ ಭಾಷೆಗಳಿಂದ ಅಗಲಿ ಬೇರೆಯಾಯಿತು. ಆದುದರಿಂದ ಈಗ ಜಗತ್ತಿನಲ್ಲಿ ನಮಗೆ ಅನೇಕ ಭಾಷೆಗಳು ಕಂಡು ಬರುತ್ತವೆ.

ಈ ಭಾಷೆಗಳನ್ನು ಅಭ್ಯಾಸ ಮಾಡಿದರೆ, ಭಾಷೆಗಳು ಅನೇಕವಾಗಿದ್ದರೂ ಮೂಲ-ಭಾಷೆಗಳು ಕೆಲವೇ ಎಂದು ನಮಗೆ ತೋರುವುದು. ಉದಾಹರಣೆಗಾಗಿ, ಆರ್ಯರು ಹೋದಲ್ಲೆಲ್ಲ ಅಲ್ಲಿಯ ಭಾಷೆ ಆರ್ಯ ಕುಟುಂಬಕ್ಕೇ ಸೇರಿತು. ಸಂಸ್ಕೃತ, ಲ್ಯಾಟಿನ್, ಗ್ರೀಕ್, ಇಂಗ್ಲೀಷು, ಫ್ರೆಂಚ್, ಜರ್ಮನ್, ಇಟಾಲಿಯನ್ ಮತ್ತು ಇನ್ನುಳಿದ ಭಾಷೆಗಳು ಆರ್ಯ ಭಾಷೆಯೆಂಬ ಒಂದೇ ಮನೆತನದ ಅಕ್ಕ-ತಂಗಿಯರಂತಿರುವವು. ಹಿಂದೀ, ಉರ್ದು, ಬಂಗಾಲಿ, ಮರಾಟಿ, ಗುಜರಾತಿ, ಮುಂತಾದ ಹಿಂದುಸ್ತಾನದ ನಮ್ಮ ಎಷ್ಟೋ ಭಾಷೆಗಳು ಸಂಸ್ಕೃತ ಭಾಷೆಯ ಮಕ್ಕಳಂತಿದ್ದು, ಆರ್ಯ ಕುಟುಂಬಕ್ಕೆ ಸೇರಿದುವುಗಳು.

ದೊಡ್ಡ ಭಾಷೆಯ ಇನ್ನೊಂದು ಕುಟುಂಬ ಚೀನಿಯದು. ಇದರೊಳಗೆ ಚೀನ, ಬ್ರಹ್ಮ, ತಿಬೇಟು, ಮತ್ತು ಸಿಯಾಮಿನ ಭಾಷೆಗಳು ಸೇರುವವು.

ಅರಬಿ ಮತ್ತು ಹಿಬ್ರುವನ್ನೊಳಗೊಂಡ ಸೆಮೆಟಿಕ್ ಭಾಷೆಯ ಗುಂಪು ಮೂರನೆಯದು.

ತುರ್ಕಿ ಮತ್ತು ಜಪಾನಿನಂತಹ ಕೆಲವು ಭಾಷೆಗಳು ಮೇಲೆ ಹೇಳಿದ ಯಾವ ಗುಂಪಿಗೂ ಸೇರುವುದಿಲ್ಲ. ತಮಿಳು, ಕನ್ನಡ, ತೆಲುಗು, ಮಲೆಯಾಳು ಮುಂತಾದ ದಕ್ಷಿಣ ದೇಶದ ಕೆಲವು ಭಾಷೆಗಳು ಸಹ ಈ ಗುಂಪುಗಳಿಗೆ ಸಂಬಂಧಪಟ್ಟವುಗಳಲ್ಲ. ಇವು ದ್ರಾವಿಡ ಕುಟುಂಬಕ್ಕೆ ಸೇರಿದ ಬಹಳ ಪುರಾತನ ಭಾಷೆಗಳು.

೧೦

ಭಾಷೆಗಳ ಬಳಗಗಳು

ಆರ್ಯರು ಅನೇಕ ದೇಶಗಳಲ್ಲಿ ಹೇಗೆ ಹರಡಿದರು ಮತ್ತು ಹೋದ ಹೋದಲ್ಲೆಲ್ಲ ತಮ್ಮ ಭಾಷೆಯನ್ನು—ಅದು ಯಾವುದೇ ಇರಲಿ—ಹೇಗೆ ಒಯ್ದರೆಂಬುದನ್ನು ನಾವು ತಿಳಿದುಕೊಂಡೆವು. ಆದರೆ ಬೇರೆ ಬೇರೆ ವಾತಾವರಣ, ಪರಿಸ್ಥಿತಿಗಳಿಗನುಸರಿಸಿ ಆರ್ಯರ ತಂಡಗಳಲ್ಲಿ ಅನೇಕ ಭೇದಗಳಾದುವು. ಪ್ರತಿಯೊಂದು ತಂಡ ತನಗೆ ತೋರಿದ ಹೊಸ ನಡತೆ, ಹೊಸ ರೂಢಿಗಳೊಂದಿಗೆ ಮಾರ್ಪಡುತ್ತ ನಡೆಯಿತು. ಒಂದು ತಂಡದವರು ಬೇರೆ ಸ್ಥಳಗಳಲ್ಲಿರುವ ಇತರ ತಂಡದವರನ್ನು ಕಾಣುವಂತಿರಲಿಲ್ಲ. ಯಾಕೆಂದರೆ ಆಗಿನ ಕಾಲದಲ್ಲಿ ದಾರಿ ನಡೆಯುವುದು ಬಹಳ ಬಿಗಿಯಾದ ಕೆಲಸವಾಗಿತ್ತು. ಆದುದರಿಂದ ಒಂದು ಗುಂಪು ಇನ್ನೊಂದು ಗುಂಪಿನಿಂದ ಬೇರೆಯಾದಂತಾಯಿತು. ಒಂದು ದೇಶದ ಜನರು ಹೊಸ ಸಂಗತಿಯೊಂದನ್ನು ಕಲಿತರೆ ಅದನ್ನು ಎರಡನೇ ದೇಶದ ಜನರಿಗೆ ತಿಳಿಸಲಿಕ್ಕಾಗುತ್ತಿರಲಿಲ್ಲ. ಇದರಂತೆಯೆ ಮಾರ್ಪಾಡಾಗುತ್ತ ನಡೆಯಿತು. ಆರ್ಯರ ಒಂದೇ ಆಗಿದ್ದ ಕುಟುಂಬ ಕೆಲವು ತಲೆಗಳ ನಂತರ ಒಡೆದು ಬೇರೆ ಬೇರೆ ತಂಡಗಳಾದುವು. ತಾವೆಲ್ಲರೂ ಒಂದೇ ಕುಟುಂಬದವರೆಂಬುದನ್ನು ಕೂಡ ಅವರು ಮರೆತರು. ಒಂದೇ ಭಾಷೆಯಿಂದ ಅನೇಕ ಭಾಷೆಗಳಾದುವು. ಅವು ಒಂದರಿಂದೊಂದು ಬೇರೆಯಾಗಿದ್ದಂತೆ ತೋರಿತು.

ಈ ಭಾಷೆಗಳು ಬೇರೆ ಬೇರೆಯೆಂದು ಕಂಡುಬಂದರೂ ಒಂದೇ ತೆರನಾದ ಎಷ್ಟೋ ಸಾಮಾನ್ಯ ಶಬ್ದಗಳು ಮತ್ತು ಹೋಲಿಕೆಗಳು ಇವುಗಳಲ್ಲಿವೆ. ಸಾವಿರಾರು ವರುಷಗಳು ಸಂದನಂತರ, ಇಂದಿಗೂ, ಬೇರೆ ಬೇರೆ ಭಾಷೆಗಳಲ್ಲಿ ಈ ತರದ ಸಾಮಾನ್ಯ ಶಬ್ದಗಳು ನಮಗೆ ದೊರೆಯುತ್ತವೆ. ಅದರಿಂದ, ಒಂದಾನೊಂದು ಕಾಲದಲ್ಲಿ ಈ ಭಾಷೆಗಳೆಲ್ಲವೂ ಒಂದೇ ಆಗಿದ್ದಿರಬೇಕೆಂದು ನಾವು ಹೇಳಬಲ್ಲೆವು. ಫ್ರೆಂಚು

ಮತ್ತು ಇಂಗ್ಲೀಷು ಭಾಷೆಗಳಲ್ಲಿ ಈ ತರದ ಸಾಮಾನ್ಯ ಶಬ್ದಗಳು ಹೇರಳವಾಗಿರುವುದನ್ನು ನೀನು ಬಲ್ಲೆಯಷ್ಟೆ? ಮನೆ-ಮಾರುಗಳಲ್ಲಿ ಬಳಕೆಯಲ್ಲಿರುವ ಸಾಮಾನ್ಯ ಶಬ್ದಗಳಾದ 'ಫಾದರ್' ಮತ್ತು 'ಮದರ್' ಶಬ್ದಗಳನ್ನು ಪರೀಕ್ಷಿಸೋಣ. ಸಂಸ್ಕೃತ ಮತ್ತು ಹಿಂದೀ ಭಾಷೆಗಳಲ್ಲಿ ತಂದೆ-ತಾಯಿಗಳಿಗೆ 'ಪಿತಾ' 'ಮಾತಾ' ಎನ್ನುವುದು ನಿನಗೆ ಗೊತ್ತಿದೆ. ಲ್ಯಾಟಿನ್ ಭಾಷೆಯಲ್ಲಿ 'ಪ್ಯಾಟರ್' ಮತ್ತು 'ಮ್ಯಾಟರ್' ಎನ್ನುವರು. ಗ್ರೀಕ್ ಭಾಷೆಯಲ್ಲಿ ಹೇಳುವುದು 'ಪೇಟರ್' ಮತ್ತು 'ಮೇಟರ್' ಎಂದು. ಫಾತರ್ ಮತ್ತು ಮುತ್ತರ್ ಎಂದು ಜರ್ಮನಿ ಯಲ್ಲಿ. ಫ್ರೆಂಚ್ ಭಾಷೆಯಲ್ಲಿ 'ಪೆರೆ' ಮತ್ತು 'ಮೆರೆ'. ಉಳಿದ ಎಷ್ಟೋ ಭಾಷೆಗಳಲ್ಲಿಯೂ ಹೀಗೆಯೆ. ಇವೆಲ್ಲ ಶಬ್ದಗಳಲ್ಲಿ ಬಹಳ ಹೋಲಿಕೆ ಇದ್ದುದು ಕಂಡು ಬರುವದಿಲ್ಲವೆ? ಒಂದೇ ಮನೆತನದ ಅಕ್ಕ-ತಂಗಿ ಯರ ಹೋಲಿಕೆ ಇವುಗಳಲ್ಲಿದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿ ಎಷ್ಟೋ ಶಬ್ದಗಳು ಸೇರಿಕೊಳ್ಳಬಹುದು. ಹೀಗೆಯೆ ಹಿಂದೀ ಭಾಷೆಯಲ್ಲಿ ಇಂಗ್ಲೀಷಿನ ಎಷ್ಟೋ ಶಬ್ದಗಳು ಸೇರಿಕೊಂಡಿವೆ. ಹಿಂದಿಯ ಹಲ-ಕೆಲವು ಶಬ್ದಗಳು ಇಂಗ್ಲೀಷಿನಲ್ಲಿ ಬಳಕೆಗೊಂಡಿವೆ. ಆದರೆ ಫಾದರ್ ಮತ್ತು ಮದರ್ ಶಬ್ದಗಳು ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿ ಸೇರಿರಲಾರವು. ಯಾಕೆಂದರೆ ಅವು ಹೊಸ ಶಬ್ದಗಳಲ್ಲ. ಮನುಷ್ಯರು ತಮ್ಮ-ತಮ್ಮಲ್ಲಿ ಮಾತಾಡಲು ಮೊದಲಿಸಿದಂದಿನಿಂದ ಈ ಶಬ್ದಗಳು ಬಳಕೆಯಲ್ಲಿದ್ದಿರಬಹುದು. ಆದುದರಿಂದ ಈ ಶಬ್ದ ಗಳು ಬೇರೆ ಕಡೆಯಿಂದ ತೆಗೆದುಕೊಂಡ ಶಬ್ದಗಳಲ್ಲವೆಂದು ಹೇಳ ಬಹುದು. ಒಂದೇ ಮೂಲ ಭಾಷೆಯಿಂದ ಅಥವಾ ಒಂದೇ ಕುಟುಂಬಕ್ಕೆ ಸೇರಿದ ಭಾಷೆಯಿಂದ ಇವೆಲ್ಲವು ಹುಟ್ಟಿರಬೇಕು. ಇದರಿಂದ ನಮಗೆ ತಿಳಿದು ಬರುವುದೇನೆಂದರೆ, ಈಗ ಬಹಳ ದೂರ, ಬೇರೆ ಬೇರೆ ದೇಶ ಗಳಲ್ಲಿದ್ದು ಬೇರೆ ಬೇರೆ ಭಾಷೆಗಳನ್ನಾಡುವ ಜನರು ಒಂದಾನೊಂದು ಕಾಲದಲ್ಲಿ ಒಂದೇ ದೊಡ್ಡ ಮನೆತನದವರಾಗಿರಬೇಕು.

ಭಾಷೆಗಳ ಅಭ್ಯಾಸ ಎಂತಹ ಮನೋರಂಜಕವಾದ ವಿಷಯ ವಾಗಿದೆಯೆಂದೂ ಅದರಿಂದ ನಾವು ಎಷ್ಟು ಕಲಿಯಬಹುದೆಂದೂ

ನಿನಗೆ ಗೊತ್ತಾಗಬಹುದು. ಮೂರು ಅಥವಾ ನಾಲ್ಕು ಭಾಷೆಗಳನ್ನು ಬಲ್ಲವರಾದರೆ ಹೆಚ್ಚು ಭಾಷೆಗಳನ್ನು ಕಲಿಯುವುದು ನಮಗೆ ಗಡಚಾಗುವುದಿಲ್ಲ.

ಒಬ್ಬರಿಂದೊಬ್ಬರು ಬಹಳ ದೂರವಾಗಿ ಈಗ ಹಲವು ದೇಶಗಳಲ್ಲಿ ಚದುರಿ ಹೋದ ನಾವು ಬಹಳ ಹಿಂದಿನ ಕಾಲದಲ್ಲಿ ಒಂದೇ ಜನಾಂಗದವರಾಗಿದ್ದಿರಬೇಕೆಂದೂ ನಿನಗೆ ತಿಳಿಯುವುದು. ಅಂದಿನಿಂದ ನಮ್ಮಲ್ಲಿ ಬಹಳ ಮಾರ್ಪಾಟುಗಳಾಗಿವೆ. ನಾವು ನಮ್ಮ ಪೂರ್ವದ ಬಳಗವನ್ನು ಮರೆತು ಬಿಟ್ಟದ್ದೇವೆ. ಪ್ರತಿಯೊಂದು ದೇಶದಲ್ಲಿಯ ಜನರು ತಾವೇ ಉತ್ತಮರಾದವರೂ, ಬುದ್ಧಿಯುಳ್ಳವರೂ, ಇತರರಿಗಿಂತ ಹೆಚ್ಚಿನವರೂ ಎಂದು ತಿಳಿದುಕೊಳ್ಳುತ್ತಿರುವರು. ಇಂಗ್ಲೀಷು ಮನುಷ್ಯನು ತಾನು ಮತ್ತು ತನ್ನ ನಾಡು ಉತ್ತಮವಾದುದೆಂದು ತಿಳಿಯುತ್ತಾನೆ. ಫ್ರಾನ್ಸ್ ದೇಶದವನು ತನ್ನ ದೇಶಕ್ಕಾಗಿ ಮತ್ತು ಅಲ್ಲಿಯ ಪ್ರತಿಯೊಂದು ಪದಾರ್ಥಕ್ಕಾಗಿ ಹೆಮ್ಮೆ ಪಡುತ್ತಿರುತ್ತಾನೆ. ಜರ್ಮನಿ ಮತ್ತು ಇಟಲಿಯವರು ತಮ್ಮ ತಮ್ಮ ದೇಶಗಳನ್ನು ಒಂದೆ-ಸಮನೆ ಹೊಗಳಿಕೊಳ್ಳುತ್ತಿದ್ದಾರೆ. ಜಗತ್ತಿನಲ್ಲಿ ಹಿಂದುಸ್ತಾನವೇ ಎಲ್ಲ ಬಗೆಯಿಂದ ಶ್ರೇಷ್ಠವಾದ ದೇಶವೆಂದು ಹಿಂದೀ ಜನರು ತಿಳಿಯುತ್ತಾರೆ. ಇದೆಲ್ಲ ಬರಿಯ ಮೋಹ! ತಾನು ಮತ್ತು ತನ್ನ ದೇಶವಷ್ಟೇ ಒಳ್ಳೆಯದೆಂದು ತಿಳಿದುಕೊಳ್ಳಲು ಪ್ರತಿಯೊಬ್ಬನು ಹವಣಿಸುತ್ತಾನೆ. ಆದರೆ ನಿಜವಾಗಿ ಯಾವ ಮನುಷ್ಯನೂ ಸುಗುಣ ದುರ್ಗುಣಗಳಿಲ್ಲದವನಲ್ಲ. ಅದರಂತೆಯೆ ಸುಗುಣ ದುರ್ಗುಣಗಳಿಲ್ಲದ ದೇಶವಿಲ್ಲ. ಒಳ್ಳೆಯ ಗುಣ ಎಲ್ಲಿಯೇ ಇರಲಿ, ಅದನ್ನು ತೆಗೆದುಕೊಳ್ಳಬೇಕು; ಕೆಟ್ಟ ಗುಣವಿದ್ದರೆ ಬಿಟ್ಟು ಬಿಡಲು ಯತ್ನಿಸಬೇಕು. ನಾವು ಹಿಂದುಸ್ತಾನಕ್ಕೆ ವಿಶೇಷವಾಗಿ ಸಂಬಂಧಿಸಿದವರು. ದುರ್ದೈವದಿಂದ ಈಗ ಅದು ಕೆಟ್ಟ ಸ್ಥಿತಿಯಲ್ಲಿದೆ. ನಮ್ಮಲ್ಲಿಯ ಬಹು ಜನರು ಬಲು ಬಡವರಾಗಿ ಗೋಳಾಟದಲ್ಲಿರುವರು. ಅವರ ಬಾಳುವೆ ಸುಖವಿಲ್ಲದ ಬಾಳುವೆಯಾಗಿದೆ. ಅವರನ್ನು ಹೇಗೆ ಸುಖಿಗಳನ್ನಾಗಿ ಮಾಡಬೇಕೆಂಬುದನ್ನು ನಾವು ಕಂಡುಕೊಳ್ಳಬೇಕು. ನಮ್ಮಲ್ಲಿಯ ಒಳ್ಳೆಯ ನಡೆವಳಿ ಮತ್ತು ವಾಡಿಕೆಗಳನ್ನು ತಿಳಿದುಕೊಂಡು

ಉಳಿಸಿಕೊಳ್ಳಲು ಯತ್ನಿಸಬೇಕು. ಕೆಟ್ಟವುಗಳನ್ನು ಎಸೆದು ಬಿಡಬೇಕು. ಇತರ ದೇಶಗಳಲ್ಲಿ ಯಾವುದೊಂದು ಸುಗುಣವಿದ್ದುದು ತೋರಿ-ಬಂದರೆ ನಾವು ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಲೇ ಬೇಕು.

ನಾವು ಹಿಂದುಸ್ತಾನದಲ್ಲಿರಬೇಕಾದುದು ಹಿಂದುಸ್ತಾನದವರಾಗಿ; ನಾವು ದುಡಿಯಬೇಕಾದುದು ಹಿಂದುಸ್ತಾನದವರಾಗಿ. ಆದರೆ, 'ಜಗತ್ತಿನ ದೊಡ್ಡ ಕುಟುಂಬಕ್ಕೆ ನಾವೂ ಸಂಬಂಧ ಪಟ್ಟವರು, ಬೇರೆ ಬೇರೆ ದೇಶಗಳ ಜನರಾದರೂ ನಮ್ಮ ಅಣ್ಣ-ತಮ್ಮಂದಿರು, ಎಂಬುದನ್ನು ಮರೆಯಲಾಗದು. ಜಗತ್ತಿನಲ್ಲಿಯ ಎಲ್ಲ ಜನರು ಸಂತುಷ್ಟರಾಗಿ ಸುಖದಿಂದ ಬಾಳಿದ್ದರೆ ಎಷ್ಟು ಚೆನ್ನಾಗುತಿತ್ತು! ಆದುದರಿಂದ ಇಡೀ ಜಗತ್ತನ್ನೇ ಸುಖದ ಬೀಡನ್ನಾಗಿ ಮಾಡಲು ನಾವು ಹವಣಿಸಬೇಕು.

೧೧

ನಾಗರಿಕತೆಯೆಂದರೇನು ?

ನಾನು ನಿನಗೆ ಪ್ರಾಚೀನ ನಾಗರಿಕತೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕೆಂದಿರುವೆನು. ಇದನ್ನು ಹೇಳುವ ಮೊದಲು ನಾಗರಿಕತೆಯೆಂದರೇನೆಂಬುದನ್ನು ತಿಳಿದುಕೊಳ್ಳಲು ಹವಣಿಸಬೇಕಾಗಿದೆ. ಶಬ್ದ-ಕೋಶದಲ್ಲಿ ನಾಗರಿಕತೆಯ ಅರ್ಥವಿರುವುದು ಸಂಸ್ಕಾರ ಹೊಂದಿದ, ಉತ್ತಮವಾದ, ಸುಧಾರಿಸಿದ, ಕಾಡು ನಡತೆಗಳನ್ನು ಬಿಟ್ಟು ಒಳ್ಳೆಯವುಗಳನ್ನು ಅಂಗೀಕರಿಸಿದ ಸ್ಥಿತಿಯೆಂದು. ಇದು ವಿಶೇಷವಾಗಿ ಸಮಾಜ ಅಥವಾ ಜನರ ಗುಂಪಿಗೆ ಅನ್ವಯಿಸುತ್ತದೆ. ಮನುಷ್ಯರು ಪಶುಗಳಿಗಿಂತ ಸ್ವಲ್ಪ ಉತ್ತಮರಾಗಿ, ಆದರೆ ಅನಾಗರಿಕರಾಗಿ, ಇರುವ ಸ್ಥಿತಿಗೇ ಕಾಡು-ಸ್ಥಿತಿಯೆಂದು ಹೆಸರು. ನಾಗರಿಕತೆ ಈ ಕಾಡು-ಸ್ಥಿತಿಗೆ ವಿರುದ್ಧವಾದುದು. ಕಾಡು-ಸ್ಥಿತಿಯಿಂದ ನಾವು ಎಷ್ಟೆಷ್ಟು ದೂರ ಸಾಗಿ ಬರುವೆವೊ ಅಷ್ಟಷ್ಟು ಹೆಚ್ಚಾಗಿ ಸುಸಂಸ್ಕೃತರಾಗುವೆವು.

ಆದರೆ ಒಬ್ಬ ಮನುಷ್ಯ ಇಲ್ಲವೆ ಜನಾಂಗವಿರುವ ಸ್ಥಿತಿ ಕಾಡುತನದ್ದೊ ನಾಗರಿಕತನದ್ದೊ ಎಂದು ಕಂಡುಕೊಳ್ಳುವುದು ಹೇಗೆ? ತಾವು ಸುಧಾರಿಸಿದವರೆಂದೂ ಏಸಿಯದ ಜನರು ಸಂಪೂರ್ಣವಾಗಿ ಕಾಡು-ಸ್ಥಿತಿಯವರೆಂದೂ ಯುರೋಪಿನಲ್ಲಿಯ ಎಷ್ಟೋ ಜನರು ತಿಳಿಯುತ್ತಾರೆ. ಯುರೋಪಿನ ಜನರು ಏಸಿಯ ಮತ್ತು ಆಫ್ರಿಕಾ ಖಂಡಗಳ ಜನರಿಗಿಂತ ಹೆಚ್ಚು ಬಟ್ಟೆ-ಬರೆಗಳನ್ನು ಹಾಕಿಕೊಳ್ಳುತ್ತಾರೆಂದು ಹೀಗೆನ್ನಬಹುದೆ? ಉಡಿಗೆ-ತೊಡಿಗೆಗಳು ಗಾಳಿ ಬಿಸಿಲುಗಳನ್ನು ಹೊಂದಿಕೊಂಡಿರುತ್ತವೆ. ಚಳಿ ನಾಡಿನ ಜನರು ಬಿಸಿಲು ನಾಡಿನ ಜನರಿಗಿಂತ ಹೆಚ್ಚು ಬಟ್ಟೆ-ಬರೆಗಳನ್ನು ಹಾಕಿಕೊಳ್ಳುತ್ತಾರೆ. ಕೈಯಲ್ಲಿ ಕೋವಿಯುಳ್ಳವನು ಆಯುಧವಿಲ್ಲದವನಿಗಿಂತ ಬಲಿಷ್ಠನಾಗಿ ಕಂಡುಬರುವನು. ಆದುದರಿಂದ ಅವನು ನಿರಾಯುಧ ಮನುಷ್ಯನಿಗಿಂತ ಹೆಚ್ಚು ಸುಧಾರಿಸಿದವನೆನ್ನಬಹುದೆ? ಅವನು ಒಳ್ಳೇ ನಾಗ

ರಿಕನಿರಲಿ ಇಲ್ಲದಿರಲಿ, ಒಬ್ಬ ಬಲಹೀನನು ಅವನೆದುರಿಗೆ ನಿಂತು "ನೀನು ಅನಾಗರಿಕ"ನೆಂದು ಹೇಳಲು ಬಾಯಿಯೇಳುವುದಿಲ್ಲ. ಹಾಗೆ ಹೇಳಿದರೆ ಅವನು ಗುಂಡಿನೇಟಿಗೆ ತುತ್ತಾಗುವನು.

ಕೆಲವು ವರುಷಗಳ ಹಿಂದೆ ಮಹಾ-ಯುದ್ಧವಾದುದು ನಿನಗೆ ಗೊತ್ತಿದೆ. ಜಗತ್ತಿನೊಳಗಿನ ಬಹುತರ ಎಲ್ಲ ದೇಶಗಳು ಇದರಲ್ಲಿ ತೊಡಗಿದ್ದುವು. ಎದುರು ಪಕ್ಷದ ಎಷ್ಟು ಜನರನ್ನು ಕೊಲ್ಲುವುದು ಶಕ್ಯವಿತ್ತೊ, ಅಷ್ಟು ಜನರನ್ನು ಕೊಲ್ಲಲು ಪ್ರತಿಯೊಂದು ದೇಶದವರು ಹೆಣಗಾಡುತ್ತಿದ್ದರು. ಇಂಗ್ಲೀಷು ಮನುಷ್ಯನು ಜರ್ಮನಿಯ ಜನರನ್ನು ಕೊಲ್ಲಲು ತನ್ನಿಂದಾದಷ್ಟು ಯತ್ನಿಸುತಿದ್ದನು. ಜರ್ಮನರು ಇಂಗ್ಲೀಷ ರನ್ನು ಕೊಲ್ಲುತಿದ್ದರು. ಈ ಕಾಳಗದಲ್ಲಿ ಹೀಗೆ ಕೋಟ್ಯವಧಿ ಜನರು ಮಡಿದರು. ಎಷ್ಟೋ ಸಾವಿರ ಜನರು ಕೊನೆ ತನಕ ಅಂಗ-ಹೀನರಾದರು. ಕೆಲವರು ಕಣ್ಣು ಕಳೆದುಕೊಂಡು ಕುರುಡರಾದರು. ಕೆಲವರಿಗೆ ಕೈ-ಕಾಲು ಗಳಿಲ್ಲದಂತಾಯಿತು. ಯುದ್ಧದಲ್ಲಿ ಅಂಗಗಳು ಕಡಿ-ವಡೆದು ಗಾಯ ಹೊಂದಿದ ಎಷ್ಟೋ ಜನರನ್ನು ಫ್ರಾನ್ಸು ಇಲ್ಲವೆ ಇನ್ನೆಲ್ಲಿಯಾದರೂ ನೀನು ನೋಡಿರಬಹುದು. ಪ್ಯಾರಿಸ್ ಪಟ್ಟಣದಲ್ಲಿ ನೆಲದೊಳಗೆ ಹೋಗುವ 'ಮೆಟ್ರೊ' ಉಗೆ-ಬಂಡಿಯಲ್ಲಿ ಇಂತಹ ಜನರಿಗಾಗಿಯೆ ಕುಳ್ಳಿರುವ ಸ್ಥಳ ಗಳಿವೆ. ಈ ರೀತಿಯಾಗಿ, ಪರರನ್ನು ಕೊಲ್ಲುವುದು ಬಹಳ ಸುಧಾರಿಸಿ ದವರ ಇಲ್ಲವೆ ಜಾಣರ ಲಕ್ಷಣವೆಂದು ನೀನು ತಿಳಿದಿರುವೆಯಾ? ಓಣಿ ಯಲ್ಲಿ ಒಬ್ಬರು ಕಡಿದಾಡಿದರೆ ಕಾವಲುಗಾರನು ನಡುವೆ ಬಂದು ಅವ ರಿಬ್ಬರನ್ನು ಬಿಡಿಸುವನು. ಅವರೆಂತಹ ಮೂರ್ಖರೆಂದು ಪ್ರತಿಯೊಬ್ಬನು ತಿಳಿಯುವನು. ಆದರೆ ದೊಡ್ಡ ದೊಡ್ಡ ದೇಶದವರು ತಮ್ಮ-ತಮ್ಮಲ್ಲಿ ಕಾದುತ್ತ ಸಾವಿರಾರು, ಏಕೆ, ಲಕ್ಷಾವಧಿ ಜನರನ್ನು ಕೊಲ್ಲುವುದು ಎಂತಹ ತಿಳಿಗೇಡಿತನದ ಮಾತು! ಇಬ್ಬರು ಕಾಡು ಜನರು ಅಡವಿಯಲ್ಲಿ ಕಾದಾಡಿದಂತಲ್ಲವೆ ಇದು? ಕಾಡು ಜನರಿಗೆ ಕ್ರೂರ ಜನರೆಂದು ಹೆಸ ರಿಟ್ಟರೆ, ಇದೇ ರೀತಿಯಲ್ಲಿ ವರ್ತಿಸುವ ದೇಶಗಳು ಎಷ್ಟು ಹೆಚ್ಚು ಕ್ರೂರ ಮತ್ತು ಸಂಸ್ಕೃತಿ ವಿಹೀನವಾಗಿರಲಿಕ್ಕಿಲ್ಲ?

ಆದುದರಿಂದ ಈ ವಿಷಯದಲ್ಲಿ ಹೀಗೆ ಯೋಚಿಸಿದರೆ ಮಹಾ ಯುದ್ಧದಲ್ಲಿ ಕಾದಾಡಿ, ಲಕ್ಷಾವಧಿ ಜನರನ್ನು ಕೊಂದ ಇಂಗ್ಲಂಡು, ಜರ್ಮನಿ, ಫ್ರಾನ್ಸು, ಇಟಲಿ, ಮುಂತಾದ ಅನೇಕ ರಾಷ್ಟ್ರಗಳು ಏನೂ ಸುಧಾರಿಸಿದವಲ್ಲವೆಂದು ನೀನು ಹೇಳಬಹುದು. ಹೀಗಿದ್ದರೂ ಈ ದೇಶ ಗಳಲ್ಲಿ ಒಳ್ಳೆಯ ಎಷ್ಟೋ ಜನರಿರುವರಲ್ಲದೆ ಎಷ್ಟೋ ಉತ್ತಮ ವಸ್ತು ಗಳಿರುವುದು ನಿನಗೆ ತಿಳಿದ ಮಾತು.

ಸಂಸ್ಕೃತಿಯೆಂದರೇನೆಂದು ತಿಳಿದುಕೊಳ್ಳುವುದು ಸುಲಭವಲ್ಲ ವೆಂದು ನಿನ್ನ ಅಭಿಪ್ರಾಯ. ಇದು ಯಥಾರ್ಥವಾದ ಮಾತು. ಇದು ಬಹಳ ತೊಡಕಿನ ಪ್ರಶ್ನೆ. ಸುಂದರವಾದ ಕಟ್ಟಡಗಳು, ಒಳ್ಳೆಯ ಚಿತ್ರ ಗಳು, ಪುಸ್ತಕಗಳು ಹೀಗೆಯೆ ಚೆಲುವಾದ ಪ್ರತಿಯೊಂದು ಪದಾರ್ಥವೂ ನಿಜವಾಗಿ ಸಂಸ್ಕೃತಿಯ ಗುರುತು. ಇವೆಲ್ಲಕ್ಕಿಂತ ಸ್ವಾರ್ಥವಿಲ್ಲದೆ ಎಲ್ಲರ ಹಿತಕ್ಕಾಗಿ ಪರರೊಂದಿಗೆ ದುಡಿಯುವ ಮನುಷ್ಯನೇ ಸಂಸ್ಕೃತಿಯ ಹೆಗ್ಗುರುತು. ಒಂಟಿಗನಾಗಿ ದುಡಿಯುವುದಕ್ಕಿಂತ ಒಂದಾಗಿ ದುಡಿ ಯುವುದು ಎಲ್ಲಕ್ಕಿಂತ ಮಿಗಿಲಾದ ಕೆಲಸ.

೧೨

ಬೆಡಗುಗಳಾಗುವುದು

ಮನುಷ್ಯನು ಭೂಮಿಯ ಮೇಲೆ ಮೊದಲು ತಲೆದೋರಿದಾಗ ಬಹುತರವಾಗಿ ಪಶುವಿನಂತಿದ್ದನೆಂಬುದನ್ನು ನಾನು ನಿನಗೆ ಹಿಂದಿನ ಓಲೆಗಳಲ್ಲಿ ಹೇಳಿರುವೆನು. ಸಾವಿರಾರು ವರುಷಗಳಲ್ಲಿ ಅವನು ಮೆಲ್ಲ-ಮೆಲ್ಲನೆ ಸುಧಾರಿಸುತ್ತ ನಡೆದನು. ಈಗಿನ ಕಾಲದ ಕಾಡು-ಮಿಗಗಳಂತೆ ಅವನು ಮೊದಲು ತನಗಾಗಿ ತಾನೇ ಬೇಟೆಯಾಡುತಿದ್ದಿರಬಹುದು. ಆ ಮೇಲೆ, ಇತರ ಜನರೊಂದಿಗೆ ಗುಂಪಾಗಿ ತಿರುಗಾಡುವುದು ಹೆಚ್ಚು ಜಾಣತನದ, ಜೋಕೆಯ ಕೆಲಸವೆಂದು ಅವನು ಬಗೆದನು. ಬಹಳ ಜನರು ಗುಂಪು-ಗಟ್ಟಿಕೊಂಡಿರುವುದರಿಂದ ಅವರ ಬಲವು ಹೆಚ್ಚಿ ಕಾಡು-ಮಿಗಗಳ ಇಲ್ಲವೆ ಉಳಿದ ಮನುಷ್ಯರ ದಾಳಿಯನ್ನು ತಡೆಯಲು ಅವರು ಶಕ್ತರಾದರು. ಪಶುಗಳು ಕೂಡ ತಮ್ಮ ರಕ್ಷಣೆಗಾಗಿ ಹೀಗೆ ಹಿಂಡು-ಹಿಂಡಾಗಿ ತಿರುಗಾಡುತ್ತಿರುವವು. ಕುರಿ, ಆಡು, ಚಿಗರೆ, ಮತ್ತು ಆನೆಗಳು ಹಿಂಡು-ಗಟ್ಟಿಕೊಂಡು ತಿರುಗಾಡುತ್ತವೆ. ಹಿಂಡು ಮಲಗಿಕೊಂಡಾಗ ಕೆಲವು ಮಾತ್ರ ಎಚ್ಚರದಿಂದಿದ್ದು ಉಳಿದವುಗಳನ್ನು ಕಾಯುತ್ತಿರುತ್ತವೆ. ತೋಳದ ಹಿಂಡುಗಳ ಕತೆಯನ್ನು ನೀನು ಓದಿರಬಹುದು. ರಶಿಯಾ ದೇಶದಲ್ಲಿ ತೋಳಗಳು ಚಳಿಗಾಲದಲ್ಲಿ ಹಿಂಡು-ಗೂಡಿ ತಿರುಗುತ್ತಿರುತ್ತವೆ. ಚಳಿಗಾಲದಲ್ಲಿ ಕೂಳಿಲ್ಲದೆ ಬಹಳ ಹೊತ್ತು ಹಸಿದಿರುವದರಿಂದ ಅವು ಮನುಷ್ಯರ ಮೇಲೆ ದಾಳಿಡುತ್ತವೆ. ಒಂದೇ ತೋಳ ಮನುಷ್ಯನ ಮೇಲೆ ಎಂದಿಗೂ ಏರಿ-ಬರುವದಿಲ್ಲ. ಆದರೆ ತೋಳದ ಹಿಂಡು ಮಾತ್ರ ಮನುಷ್ಯರ ಗುಂಪಿನ ಮೇಲೆ ದಾಳಿಮಾಡುವಷ್ಟು ಬಲ-ವುಳ್ಳದ್ದಾಗಿರುತ್ತದೆ. ಆಗ ಮನುಷ್ಯರು ತಮ್ಮ ಜೀವವನ್ನು ಉಳಿಸಿಕೊ-ಳ್ಳುವದಕ್ಕಾಗಿ ಓಡಿಹೋಗಬೇಕಾಗುವದು. ಎಷ್ಟೋ ಸಲ ಮನುಷ್ಯರಿಗೂ ತೋಳಗಳಿಗೂ ಮಂಜಿನ ಬೈಲಿನಲ್ಲಿ ಮೇಲಾಟವೇ (Race) ಏರ್ಪಟ್ಟಿರುತ್ತದೆ.

ಹೀಗೆ, ಗುಂಪು-ಕಟ್ಟಿಕೊಂಡು ಕೂಡಿರುವದೇ ಪೂರ್ವಕಾಲದ ಮನುಷ್ಯನು ನಾಗರಿಕತೆಯ ಮಾರ್ಗದಲ್ಲಿ ಇಟ್ಟ ಮೊದಲನೆ ಹೆಜ್ಜೆ. ಈ ರೀತಿಯ ಗುಂಪುಗಳಿಗೆ ಬೆಡಗುಗಳೆಂದು ಹೆಸರು. ಈ ಜನರು ಒಟ್ಟು-ಗೂಡಿ ದುಡಿಯ ತೊಡಗಿದರು. ಸಹಕಾರ ಮೊದಲಾಯಿತು. ಪ್ರತಿಯೊಬ್ಬ ಮನುಷ್ಯನು ಮೊದಲು ತನ್ನ ಬೆಡಗಿಗಾಗಿ ಯೋಚಿಸುತ್ತಿದ್ದನು. ತನ್ನಯೋಚನೆ ಆ ಮೇಲೆ. ಬೆಡಗು ಸಂಕಟದಲ್ಲಿದ್ದಾಗ ಪ್ರತಿಯೊಬ್ಬನೂ ಅದಕ್ಕಾಗಿ ಕಾದಾಡಿ ಅದನ್ನು ಕಾಪಾಡಬೇಕಾಗುತಿತ್ತು. ಈ ಬೆಡಗಿನಲ್ಲಿಯ ಯಾವನೊಬ್ಬನು ತನ್ನ ಗುಂಪಿಗಾಗಿ ದುಡಿಯದಿದ್ದರೆ ಅವನನ್ನು ಒದೆದು ಹೊರದೂಡುತ್ತಿದ್ದರು.

ಇನ್ನು, ಜನರು ಒಟ್ಟುಗೂಡಿ ದುಡಿಯುವದಾದರೆ ಅವರು ಸುವ್ಯವಸ್ಥೆಯಿಂದ ಕೆಲಸಮಾಡಬೇಕಾಗುತ್ತದೆ. ಪ್ರತಿಯೊಬ್ಬನೂ ತನ್ನ ಮನಬಂದಂತೆ ನಡೆದರೆ ಬೆಡಗೇ ಉಳಿಯುವದಿಲ್ಲ. ಆದುದರಿಂದ ಒಬ್ಬನು ಮುಂದಾಳಾಗಬೇಕು. ಪಶುಗಳ ಹಿಂಡಿನಲ್ಲಿಯೂ ಮುಂದಾಳುಗಳಿರುತ್ತವೆ. ಮನುಷ್ಯರು ಕೂಡ ತಮ್ಮ ತಂಡದೊಳಗೆ ಹೆಚ್ಚು ಬಲವುಳ್ಳವನನ್ನು ತಮ್ಮ ಮುಂದಾಳೆಂದು ಆರಿಸಿಕೊಂಡರು. ಆಗಿನ ಕಾಲದಲ್ಲಿ ಕಾದಾಡುವುದೇ ಮುಖ್ಯವಾಗಿದ್ದುದರಿಂದ ಎಲ್ಲರಿಗಿಂತ ಹೆಚ್ಚು ಬಲಿಷ್ಟನಾಗಿದ್ದವನು ನಾಯಕನೆಂದು ಆರಿಸಲ್ಪಡುತ್ತಿದ್ದನು.

ಬೆಡಗಿನ ಜನರು ತಮ್ಮ-ತಮ್ಮಲ್ಲಿ ಕಾದಾಡಿದರೆ ಆ ತಂಡ ಕೂಡಲೇ ಮುರಿದು ಹೋಗುವದು. ಆದುದರಿಂದ ಬೆಡಗಿನ ಜನರು ತಮ್ಮ-ತಮ್ಮಲ್ಲಿ ಕಾದಾಡದಂತೆ ಮುಂದಾಳು ನೋಡಿಕೊಳ್ಳುತಿದ್ದನು. ಆದರೆ ಒಂದು ತಂಡ ಇನ್ನೊಂದು ತಂಡದೊಂದಿಗೆ ಕಾದಾಡುತಿತ್ತು. ಒಬ್ಬನೇ ಬೇರೊಬ್ಬನ ಸಂಗಡ ಯುದ್ಧಗೆಯ್ಯುವ ಹಳೆಯ ಪದ್ಧತಿಯಲ್ಲಿ ಇದೊಂದು ಸುಧಾರಣೆಯಾಯಿತು.

ಮೊಟ್ಟ-ಮೊದಲಿನ ತಂಡಗಳು ನಿಜವಾಗಿ ದೊಡ್ಡ ಕುಟುಂಬಗಳಾಗಿದ್ದಿರಬೇಕು. ಕುಟುಂಬದ ಎಲ್ಲ ಜನರು ಪರಸ್ಪರರಲ್ಲಿ ಸಂಬಂಧವುಳ್ಳವರಾಗಿರಬೇಕು. ಆದರೆ ಕುಟುಂಬಗಳು ಬೆಳೆ-ಬೆಳೆದು ಕೊನೆಗೆ ದೊಡ್ಡದೊಂದು ಬೆಡಗಾಯಿತು.

ಬೆಡಗುಗಳಾಗುವ ಮೊದಲು ಆ ಹಿಂದಿನ ಕಾಲದ ಮನುಷ್ಯನಿಗೆ ಬಾಳುವೆ ಕಷ್ಟ-ಮಯವಾಗುತ್ತಿತ್ತು. ಅವನಿಗೆ ಇರಲು ಮನೆ ಇಲ್ಲ. ತೊಗಲುಡಿಗೆಯಲ್ಲದೆ ಬೇರೆ ಬಟ್ಟೆ-ಬರೆಗಳಿಲ್ಲ. ಅವನು ಯಾವಾಗಲೂ ಕಾಳಗವಾಡುವದರಲ್ಲಿ ತೊಡಗಿರುತ್ತಿದ್ದನು. ದಿನದ ಆಹಾರಕ್ಕಾಗಿ ಅವನು ಬೇಟೆಯಾಡಿ ಪಶುಗಳನ್ನು ಕೊಲ್ಲಬೇಕಾಗುತ್ತಿತ್ತು. ಇಲ್ಲವೆ ಹಣ್ಣು ಹಂಪಲಗಳನ್ನು ಕಲೆ ಹಾಕಬೇಕಾಗುತ್ತಿತ್ತು. ಮಂಜು ಮತ್ತು ಆಣೆ-ಕಲ್ಲುಗಳು ಬೀಳುವದು, ಭೂಮಿ ಅದರುವದು ಮುಂತಾದವುಗಳಿಂದ ಅವನಿಗೆ ಸೃಷ್ಟಿಯೂ ಹಗೆಯಂತೆ ಕಾಣುತ್ತಿತ್ತು. ಆಗಿನ ಮಾನವರು ಪ್ರತಿಯೊಂದಕ್ಕೂ ಹೆದರುತ್ತಿರುವ, ಅಂಜಿಗಾಲಿಕ್ಕುತ್ತಿರುವ, ಜಗತ್ತಿನೊಳಗಿನ ಬಡ ದಾಸನಾಗಿದ್ದನು. ಏಕೆಂದರೆ ಅವನಿಗೆ ಏನೂ ತಿಳಿಯುತ್ತಿರಲಿಲ್ಲ. ಆಣೆ-ಕಲ್ಲು ಬೀಳುತ್ತಿದ್ದರೆ ಮೋಡಗಳಲ್ಲಿಯ ಯಾವುದೊ ಒಂದು ದೇವತೆ ತನ್ನನ್ನು ಹೊಡೆಯಲು ಹವಣಿಸುತ್ತಿರುವುದೆಂದು ಅವನು ತಿಳಿದು-ಕೊಳ್ಳುತ್ತಿದ್ದನು. ಆಗ ಅವನು ಭಯಗೊಂಡು ಮಳೆ, ಮಂಜು, ಆಣೆ-ಕಲ್ಲುಗಳನ್ನು ಸುರಿಸುವ ಮೋಡದಲ್ಲಿಯ ಮನುಷ್ಯನನ್ನು ಸಂತೋಷಗೊಳಿಸ ಬೇಕೆನ್ನುತ್ತಿದ್ದನು. ಅವನನ್ನು ಸಂತೋಷಗೊಳಿಸುವ ಬಗೆ ಹೇಗೆ? ಈ ನಮ್ಮ ಮನುಷ್ಯನಿಗೆ ನಿಚ್ಚಳವಾದ ತಿಳಿವಳಿಕೆ ಇದ್ದಿಲ್ಲ-ಮೋಡದಲ್ಲಿಯ ದೇವತೆ ತನ್ನಂತೆ ಇದ್ದು ಅನ್ನವನ್ನು ಬಯಸುತ್ತಿರುವು-ದೆಂದು ಅವನು ತಿಳಿದಿರಬೇಕು. ಇದಕ್ಕಾಗಿಯೆ ಅವನು ಪಶುವನ್ನಾಗಲಿ ಮಾಂಸವನ್ನಾಗಲಿ ಬಲಿಗೊಡುತ್ತಿದ್ದನು! ಈ ದೇವತೆ ತಿನ್ನಬೇಕೆಂದು ಅದನ್ನು ಎಲ್ಲಿಯಾದರೂ ಇಡುತ್ತಿದ್ದನು. ಹೀಗೆ ಮಳೆ ಸುರಿಯುವದನ್ನೂ ಆಣೆ-ಕಲ್ಲು ಬೀಳುವುದನ್ನೂ ನಿಲ್ಲಿಸುವದು ಸಾಧ್ಯವೆಂದು ಅವನ ತಿಳಿವಳಿಕೆಯಾಗಿತ್ತು.

ಮಳೆ, ಮಂಜು, ಆಣೆ-ಕಲ್ಲುಗಳು ಏಕೆ ಬೀಳುತ್ತವೆಂದು ನಮಗೆ ಗೊತ್ತಿರುವದರಿಂದ ಇದು ಎಂತಹ ಮರುಳುತನವೆಂದು ನಮಗೆ ಕಂಡು ಬರುವುದು. ಅದಕ್ಕೂ ಪಶುಗಳನ್ನು ಕೊಲ್ಲುವದಕ್ಕೂ ಏನೂ ಸಂಬಂಧವಿಲ್ಲ. ಆದರೆ ಇಂತಹ ಕೃತಿಗಳನ್ನು ಮಾಡುವುದು ತಿಳಿಗೇಡಿತನವಾದರೂ ಎಷ್ಟೋ ಮೂಢ ಜನರು ಇಂದಿಗೂ ಮಾಡುತ್ತಿರುವರು.

೧೩

ಧರ್ಮದ ಉದಯ ಮತ್ತು ಶ್ರಮ ವಿಭಾಗ

ಹಿಂದಿನ ಕಾಲದ ಮನುಷ್ಯರು ಪ್ರತಿಯೊಂದು ಪದಾರ್ಥದಿಂದ ಹೇಗೆ ಭಯಗೊಳ್ಳುತ್ತಿದ್ದರು, ಪ್ರತಿಯೊಂದು ಕುತ್ತು, ಅಸೂಯಾ-ಪರರಾದ, ಸಿಟ್ಟಿನ ದೇವತೆಗಳಿಂದ ಬರುತ್ತದೆಂದು ಹೇಗೆ ತಿಳಿದುಕೊಳ್ಳುತ್ತಿದ್ದರು, ಎಂದು ನಾನು ಹಿಂದಿನ ಕಾಗದದಲ್ಲಿ ತಿಳಿಸಿರುವೆನು. ಇವರಿಗೆ ಈ ಕಾಲ್ಪನಿಕ ದೇವತೆಗಳು ಅಡವಿ, ಗುಡ್ಡ, ಹೊಳೆ, ಮೋಡ, ಮುಂತಾದ ಎಲ್ಲ ಕಡೆಗಳಲ್ಲಿಯೂ ಕಂಡು ಬರುತ್ತಿದ್ದುವು. ದೇವತೆ ದಯವುಳ್ಳವನೂ ಒಳ್ಳೆಯವನೂ ಆಗಿರದೆ, ಮಾತು-ಮಾತಿಗೆ ಯಾವಾಗಲೂ ಮುನಿಸುಗೊಳ್ಳುವನೆಂದು ಅವರ ತಿಳಿವಳಿಕೆ. ಅವನ ಸಿಟ್ಟಿಗೆ ಇವರು ಬೆದರಿ ಬೀಳುತ್ತಿದ್ದರು. ಆದುದರಿಂದ ಈ ದೇವತೆಗೆ ಏನಾದರೂ ಲಂಚ-ಗೂಳನ್ನು ಕೊಟ್ಟು ಸಮಾಧಾನ ಪಡಿಸಬೇಕೆಂದು ಯತ್ನಿಸುತಿದ್ದರು. ಕೆಲವೊಮ್ಮೆ ಭೂ-ಕಂಪ, ಜಲ-ಪ್ರಳಯ, ಅಥವಾ ಅಂಟುರೋಗಗಳ ಹಾವಳಿಯಿಂದ ಬಹಳ ಜನರು ಮಡಿದರೆ, ದೇವತೆಗಳು ಸಿಟ್ಟಾಗಿರುವರೆಂದು ಬಹಳ ಹೆದರುತ್ತಿದ್ದರು. ಈ ದೇವತೆಗಳನ್ನು ಶಾಂತಗೊಳಿಸಲು ಈ ಜನರು ಗಂಡಸರನ್ನೂ ಹೆಂಗಸರನ್ನೂ, ಕೆಲವೊಮ್ಮೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕೂಡ ಕಡಿದು ಬಲಿ-ಗೊಡಲು ಹಿಂಜರಿಯುತ್ತಿದ್ದಿಲ್ಲ. ಇದು ಭಯಂಕರವೆಂದು ನಮಗೆ ಕಾಣಬಹುದು. ಆದರೆ ಭಯಗೊಂಡವನು ಏನನ್ನು ಮಾಡಲಾರನು ?

ಧರ್ಮದ ಕಲ್ಪನೆಯ ಮೊದಲಿಕೆ ಇದೇ ಆಗಿರಬಹುದು. ಹೀಗೆ ಭಯವೇ ಧರ್ಮಕ್ಕೆ ಕಾರಣವಾಯಿತು. ಭಯದಿಂದ ಮಾಡಿದ ಕೆಲಸಗಳೆಲ್ಲವೂ ಕೆಟ್ಟವೇ. ಧರ್ಮ ನಮಗೆ ಒಳ್ಳೆಯ ಅನೇಕ ಸಂಗತಿಗಳನ್ನು ತಿಳಿಸುತ್ತಿರುವುದು ನಿನಗೆ ಗೊತ್ತಿದೆ. ನೀನು ದೊಡ್ಡವಳಾದ ಮೇಲೆ ಜಗತ್ತಿನ ಧರ್ಮಗಳನ್ನು ಕುರಿತೂ, ಧರ್ಮಗಳ ನೆವದಿಂದ ನಡೆದ ಒಳ್ಳೆಯ ಮತ್ತು ಕೆಟ್ಟ ಕೃತಿಗಳನ್ನು ಕುರಿತೂ, ಓದಿಕೊಳ್ಳಬೇಕು.

ಧರ್ಮದ ಮೂಲ ಕಲ್ಪನೆ ಹೇಗೆ ಪ್ರಾರಂಭವಾಯಿತೆಂಬುದನ್ನು ತಿಳಿದುಕೊಳ್ಳುವುದು ಮನೋಹರವಾದ ವಿಷಯ. ಅದು ಹೇಗೆ ಬೆಳೆಯಿತೆಂಬುದನ್ನು ಮುಂದೆ ನೋಡಿಕೊಳ್ಳೋಣ. ಧರ್ಮದ ಕಲ್ಪನೆ ಎಷ್ಟು ಬೆಳೆದರೂ ಧರ್ಮದ ಹೆಸರಿನಿಂದ ಜನರು ತಮ್ಮ-ತಮ್ಮಲ್ಲಿ ಕಚ್ಚಾಡುವುದನ್ನು, ಒಬ್ಬರ ತಲೆಯನ್ನು ಇನ್ನೊಬ್ಬರು ಒಡೆಯುವುದನ್ನು ನಾವು ಇಂದಿಗೂ ನೋಡುತ್ತೇವೆ. ಎಷ್ಟೋ ಜನರಿಗೆ ಧರ್ಮವೆಂದರೆ ಈಗಲೂ ಹೆದರಿಕೆಯ ಮಾತಾಗಿದೆ. ಇಂತವರು ಯಾವುವೂ ಕಾಲ್ಪನಿಕ ದೇವತೆಗಳಿಗಾಗಿ ಗುಡಿ-ಗುಂಡಾರ, ಮಸೀದೆಗಳಲ್ಲಿ ನೈವೇದ್ಯಗಳನ್ನು ಅರ್ಪಿಸುತ್ತ ಇಲ್ಲವೆ ಪಶುಗಳನ್ನು ಬಲಿ-ಗೊಡುತ್ತ ಕಾಲಕಳೆಯುವರು.

ಹೀಗೆ ಪೂರ್ವ ಕಾಲದ ಮನುಷ್ಯನ ಬದುಕು ಕಷ್ಟ-ಮಯವಾಗಿತ್ತು. ತನ್ನ ಆಹಾರವನ್ನು ಪ್ರತಿ-ದಿನವೂ ಅವನು ದೊರಕಿಸಬೇಕಾಗಿತ್ತು. ಇಲ್ಲದಿದ್ದಲ್ಲಿ ಉಪವಾಸ ಬಳಲಬೇಕಾಗಿತ್ತು. ಆಗಿನ ಕಾಲದಲ್ಲಿ ಸೋಮಾರಿಗೆ ಬದುಕಿ ಬಾಳಲು ಎಡೆ ಇದ್ದಿಲ್ಲ. ಬಹಳ ತಿನಸುಗಳನ್ನು ಕೂಡಿಟ್ಟು ಆ ಮೇಲೆ ಎಷ್ಟೋ ಕಾಲದ ವರೆಗೆ ಏನೂ ಮಾಡದೆ ಸುಮ್ಮನೆ ಕುಳಿತುಕೊಳ್ಳುವುದು ಎಂತಹನಿಗಾದರೂ ಆಗ ಅಶಕ್ಯವಾದ ಮಾತಾಗಿತ್ತು.

ತಂಡದ ರಚನೆಯಾದ ಕೂಡಲೇ ಮನುಷ್ಯನ ಬಾಳುವೆ ಸ್ವಲ್ಪ ಸುಲಭವಾಯಿತು. ಒಂಟಿಗನಾಗಿ ಒಬ್ಬನೇ ಅನ್ನವನ್ನು ದೊರಕಿಸುವುದಕ್ಕಿಂತ ತಂಡದ ಜನರೆಲ್ಲರು ಒಟ್ಟು-ಗೂಡಿ ದುಡಿಯುವುದರಿಂದ ಆಹಾರದ ಸಂಪಾದನೆ ಹೆಚ್ಚಾಯಿತು. ಒಟ್ಟು-ಗೂಡಿ ದುಡಿಯುವುದರಿಂದ ಅಥವಾ ಸಹಕಾರದಿಂದ ಒಬ್ಬನಿಂದಾಗದಂತಹ ಎಷ್ಟೋ ಕೆಲಸಗಳನ್ನು ನೀಗಿಸಲು ಅನುವಾಗುತ್ತದೆ. ಒಬ್ಬಿಬ್ಬರು ಬಹಳ ಹೊರೆಯನ್ನು ಹೊತ್ತುಕೊಂಡು ಹೋಗಲಾರರು. ಆದರೆ ಬಹಳ ಜನರು ಒಬ್ಬರಿಗೊಬ್ಬರು ನೆರವಾಗಿ ಅದನ್ನು ಬಹಳ ಸುಲಭವಾಗಿ ಒಯ್ಯಬಲ್ಲರು. ಈಗಾಗಲೇ ನಾನು ನಿನಗೆ ಹೇಳಿರುವ ಪ್ರಗತಿಯೊಂದು ಆಗಿನ ಕಾಲದಲ್ಲಿ ಉಂಟಾಯಿತು. ಅದು ಒಕ್ಕಲತನ. ಕೆಲ ಇರುವೆಗಳಲ್ಲಿ ಒಕ್ಕಲುತನದ ಪ್ರಾರಂಭಾವಸ್ಥೆ ಇದ್ದುದನ್ನು ನೋಡಿ ಸೋಜಿಗವೆನಿಸಬಹುದು. ಎಂದರೆ,

ಇರುವೆಗಳು ಬೀಜವನ್ನು ಬಿತ್ತುತ್ತವೆ, ನೇಗಿಲು ಹೊಡೆಯುತ್ತವೆ, ಸುಗ್ಗಿಯಲ್ಲಿ ರಾಶಿ ಮಾಡುತ್ತವೆ ಎಂದು ನನ್ನ ಅಭಿಪ್ರಾಯವಲ್ಲ. ಈ ಇರುವೆಗಳು ಸ್ವಲ್ಪ ಮಟ್ಟಿಗೆ ಇಂತಹ ಕೆಲಸವನ್ನೆ ಮಾಡುತ್ತವೆ. ತಾವು ತಿನ್ನುವ ಬೀಜದ ಹುಲ್ಲು ದೊರೆತರೆ, ಅವು ಜಾಗರೂಕತೆಯಿಂದ ಆ ಹುಲ್ಲಿನ ಸುತ್ತು-ಮುತ್ತಲಿನ ಸದೆಯನ್ನು ತೆಗೆಯುತ್ತವೆ. ಇದರಿಂದ ಸಸಿಗೆ ಬದುಕಿರಲು ಹೆಚ್ಚು ಅನುವು ದೊರೆಯುತ್ತದೆ.

ಇರುವೆಗಳಂತೆ ಒಂದಾನೊಂದು ಕಾಲದಲ್ಲಿ ಮನುಷ್ಯನೂ ಮಾಡುತ್ತಿದ್ದಿರಬಹುದು. ಆಗ ಅವನಿಗೆ ಒಕ್ಕಲುತನ ಗೊತ್ತಿರಲಿಲ್ಲ. ಅದನ್ನು ತಿಳಿದುಕೊಂಡು ಬಿತ್ತುವುದನ್ನು ಮೊದಲಿಸಲು ಅವನಿಗೆ ಎಷ್ಟೋ ಕಾಲ ಬೇಕಾಗಿದ್ದಿರಬಹುದು.

ಒಕ್ಕಲುತನ ಮೊದಲಾದಂದಿನಿಂದ ಆಹಾರವನ್ನು ದೊರಕಿಸುವುದು ಸುಲಭವಾಯಿತು. ಆಹಾರಕ್ಕಾಗಿ ದಿನವೆಲ್ಲ ಬೇಟೆಯಾಡುವುದು ತಪ್ಪಿ ಹೋಯಿತು. ಮನುಷ್ಯರು ಬಾಳುವೆಗಾಗಿ ಪಡುತ್ತಿದ್ದ ಕಷ್ಟ ಕಡಿಮೆಯಾಯಿತು. ಈಗ ಮನೋರಂಜಕವಾದ ಇನ್ನೊಂದು ಬದಲಾವಣೆಯಾಯಿತು. ಒಕ್ಕಲುತನಕ್ಕಿಂತ ಮೊದಲು ಪ್ರತಿಯೊಬ್ಬನು ಬೇಟೆಗಾರನಾಗಿದ್ದನು. ಗಂಡುಸರು ಮಾಡುತ್ತಿದ್ದ ಕೆಲಸ ಅದೊಂದೆ. ಹೆಂಗುಸರು ಬಹುತರವಾಗಿ ಮಕ್ಕಳನ್ನು ಸಲಹುತ್ತಿದ್ದರು; ಹಣ್ಣು-ಹಂಪಲುಗಳನ್ನು ತರುತ್ತಿದ್ದರು. ಒಕ್ಕಲುತನ ಮೊದಲಾದಂದಿನಿಂದ ಬೇರೆ ಬೇರೆ ತರದ ಕೆಲಸಗಳುಂಟಾದುವು. ಹೊಲಗಳಲ್ಲಿ ದುಡಿಯುವುದು, ಬೇಟೆಯಾಡುವುದು, ದನಗಳನ್ನು ಕಾಯುವುದು, ಇವೇ ಆ ಕೆಲಸಗಳು. ಹೆಂಗುಸರು ಬಹುತರವಾಗಿ ದನಗಳನ್ನು ಕಾಯುವ ಮತ್ತು ಹಾಲು-ಹಿಂಡುವ ಕೆಲಸಗಳನ್ನು ಮಾಡುತ್ತಿದ್ದಿರಬಹುದು. ಕೆಲವರು ಒಂದು ತರದ ಕೆಲಸಗಳನ್ನು ಮಾಡಿದರೆ ಇನ್ನೂ ಕೆಲವರು ಇನ್ನೊಂದು ಹೋರೆಯನ್ನು ಮಾಡುತ್ತಿದ್ದರು.

ಈಗ ಜಗತ್ತಿನಲ್ಲಿ ಒಬ್ಬೊಬ್ಬನು ಒಂದೊಂದು ಹೋರೆಯನ್ನು ಮಾಡುವುದು ನಿನಗೆ ಕಂಡು-ಬರುವುದು. ಒಬ್ಬನು ವೈದ್ಯನಾಗಿರುವನು.

ಇನ್ನೊಬ್ಬನು ದಾರಿಗಳನ್ನು ಇಲ್ಲವೆ ಸೇತುವೆಗಳನ್ನು ಕಟ್ಟುವ ಯಂತ್ರ-ಶಾಸ್ತ್ರಜ್ಞನಾಗಿರುವನು. ಇದರಂತೆಯೇ ಬಡಿಗ, ಕಮ್ಮಾರ, ಕಲ್ಲು-ಕುಟಿಗ, ಗೋಡೆಕಾರ, ಸಮ್ಮಗಾರ, ಸಿಂಪಿಗ ಮುಂತಾದವರಿರುವರು. ಪ್ರತಿಯೊಂದು ಕೈಗಾರಿಕೆಯವನು ತನ್ನ ಉದ್ಯೋಗದಲ್ಲಿಯೆ ತೊಡಗಿರುವನು. ಇವನಿಗೆ ಉಳಿದ ಕೈಗಾರಿಕೆಗಳ ಬಗೆಗೆ ಏನೂ ಗೊತ್ತಿರುವುದಿಲ್ಲ. ಇದಕ್ಕೆ ಶ್ರಮ-ವಿಭಾಗವೆನ್ನುವರು. ಒಬ್ಬನು ಹಲವಾರು ಕೈಗಾರಿಕೆಗಳನ್ನು ಮಾಡುವುದಕ್ಕಿಂತ ಒಂದೇ ಉದ್ಯೋಗವನ್ನು ಚೆನ್ನಾಗಿ ಮಾಡಲೆತ್ನಿಸಿದರೆ ನಿಪುಣನಾಗುವನು. ಈಗಿನ ಕಾಲದಲ್ಲಿ ಜಗತ್ತಿನಲ್ಲಿ ಶ್ರಮ-ವಿಭಾಗವೇ ಕಂಡು-ಬರುವುದು.

ಒಕ್ಕಲುತನದ ಮೊದಲಿಕೆಯಾದಂದಿನಿಂದ ಪ್ರಾಚೀನ ಮನುಷ್ಯರ ತಂಡಗಳಲ್ಲಿ ಈ ಶ್ರಮ-ವಿಭಾಗ ಮೆಲ್ಲ-ಮೆಲ್ಲನೆ ತಲೆದೋರಿದ್ದು ನಮಗೆ ತಿಳಿಯುತ್ತದೆ.

೧೪

ಒಕ್ಕಲುತನದಿಂದ ಉಂಟಾದ ಮಾರ್ಪಾಟುಗಳು

ಶ್ರಮ-ವಿಭಾಗವನ್ನು ಕುರಿತು ಕೆಲವು ಮಾತುಗಳನ್ನು ಹಿಂದಿನ ಪತ್ರದಲ್ಲಿ ನಾನು ನಿನಗೆ ಹೇಳಿರುವೆನು. ಪ್ರಾರಂಭದಲ್ಲಿ, ಮನುಷ್ಯರು ಬರಿಯ ಬೇಟೆಯಿಂದ ಜೀವಿಸುತಿದ್ದಾಗ ಶ್ರಮ-ವಿಭಾಗವಿದ್ದಿಲ್ಲ. ಪ್ರತಿಯೊಬ್ಬನು ಬೇಟೆಯಾಡುತ್ತಿದ್ದನು. ಅವನಿಗೆ ಸಾಕಾಗುವಷ್ಟು ಆಹಾರ ಬಹಳ ಶ್ರಮದಿಂದ ದೊರೆಯುತಿತ್ತು. ಮೊಟ್ಟ-ಮೊದಲು ದುಡಿತದ ಹಂಚಿಕೆ ಹೆಂಗುಸು ಮತ್ತು ಗಂಡುಸಿನಲ್ಲಿ ಆಗಿರಬೇಕು. ಎಂದರೆ ಗಂಡಸರು ಬೇಟೆಯಾಡುತ್ತಿದ್ದರು. ಹೆಂಗಸರು ಮನೆಯಲ್ಲಿದ್ದು ದನಗಳನ್ನೂ ಮಕ್ಕಳನ್ನೂ ಸಲಹುತ್ತಿದ್ದರು.

ಜನರು ಒಕ್ಕಲುತನವನ್ನು ಕಲಿತ ನಂತರ ಎಷ್ಟೋ ಹೊಸ ಬೆಳವಣಿಗೆಗಳಾದುವು. ಮೊಟ್ಟ-ಮೊದಲು ದುಡಿತದಲ್ಲಿ ಹಂಚಿಕೆಯಾಯಿತು. ಕೆಲವರು ಬೇಟೆಯಾಡುತ್ತಿದ್ದರು; ಕೆಲವರು ಹೊಲಗಳನ್ನು ಕಾಯುತ್ತ ನೇಗಿಲು ಹೊಡೆಯುತ್ತಿದ್ದರು. ಮುಂದೆ ಕಾಲ ಕಳೆದಂತೆ, ಜನರು ಹೊಸ ಹೊಸ ಕೈಗಾರಿಕೆಗಳನ್ನು ಕಲಿತು ಅವುಗಳಲ್ಲಿ ನಿಪುಣರಾದರು.

ಭೂಮಿಯನ್ನು ಉಳುವುದರಿಂದ ಉಂಟಾದ ಇನ್ನೊಂದು ಮಹತ್ವದ, ವಿಲಕ್ಷಣ ಪರಿಣಾಮವೆಂದರೆ ಜನರು ಊರುಗಳಲ್ಲಿ ನೆಲೆ-ನಿಲ್ಲ ತೊಡಗಿದರು. ಒಕ್ಕಲುತನಕ್ಕಿಂತ ಮೊದಲು ಜನರು ಬೇಟೆಯಾಡುತ್ತ ಕಂಡ ಕಡೆ ತಿರುಗಾಡುತ್ತಿದ್ದರು. ಒಂದೇ ಸ್ಥಳದಲ್ಲಿರುವ ಆವಶ್ಯಕತೆ ಅವರಿಗೆ ಇರಲಿಲ್ಲ. ಹೋದಲ್ಲೆಲ್ಲ ಬೇಟೆಯಾಡಲು ಅವರಿಗೆ ಸಾಧ್ಯವಿತ್ತು. ತಮ್ಮಲ್ಲಿದ್ದ ಆಕಳು, ಕುರಿ, ಮತ್ತು ಇತರ ಪ್ರಾಣಿಗಳ ಸಲುವಾಗಿ ಮೇಲಿಂದ ಮೇಲೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಬೇಕಾಗುತಿತ್ತು. ಈ ದನಗಳು ಮೇಯುವುದಕ್ಕಾಗಿ ಹುಲ್ಲು-ನೆಲ ಬೇಕಾಗುತಿತ್ತು. ದನಗಳು ಕೆಲವು ಕಾಲದ ವರೆಗೆ ಒಂದು ಸ್ಥಳದಲ್ಲಿ ಮೇಯ್ದು ನಂತರ, ಆ ಭೂಮಿಯಲ್ಲಿ ಇವುಗಳಿಗೆ ಸಾಕಾಗುವಷ್ಟು

ಹುಲ್ಲು ಬೆಳೆಯುತ್ತಿದ್ದಿಲ್ಲ. ಆದುದರಿಂದ ಇಡೀ ತಂಡಕ್ಕೆ ತಂಡವೇ ಬೇರೊಂದೆಡೆಗೆ ಹೋಗಬೇಕಾಗುತಿತ್ತು.

ಒಕ್ಕಲುತನ ಮೊದಲಾದಂದಿನಿಂದ ಜನರು ಸಾಗುವಳಿಯಾದ ಭೂಮಿಯ ಹತ್ತಿರ ಇರಬೇಕಾಯಿತು. ಅದನ್ನು ಬಿಟ್ಟು ಅವರು ಹೋಗುವಂತಿರಲಿಲ್ಲ. ಆದುದರಿಂದ ಅವರು ಸುಗ್ಗಿಯಿಂದ ಸುಗ್ಗಿಯ ವರೆಗೆ ಅಲ್ಲಿಯೆ ದುಡಿಯತೊಡಗಿದರು. ಹೀಗೆ ಊರುಗಳೂ ಪಟ್ಟಣಗಳೂ ಬೆಳೆದವು.

ಒಕ್ಕಲುತನದಿಂದುಂಟಾದ ಮತ್ತೊಂದು ದೊಡ್ಡ ಮಾರ್ಪಾ-ಟೆಂದರೆ, ಆದರಿಂದ ಜೀವನ ಸುಲಭವಾಯಿತು. ಒಂದು ಹೊತ್ತಿಗೆ ಬೇಕಾದುದಕ್ಕಿಂತ ಹೆಚ್ಚು ಆಹಾರ ಭೂಮಿಯಿಂದ ದೊರೆಯ ತೊಡ ಗಿತು. ಅದನ್ನು ಜೋಕೆಯಿಂದ ಇಡತೊಡಗಿದರು.

ಈಗ ನಾವು ವಿಲಕ್ಷಣವಾದ ಬೆಳಿಗೆಯನ್ನು ಕಾಣುತ್ತೇವೆ. ಮನುಷ್ಯನು ಬರಿಯ ಬೇಟೆಗಾರನಾಗಿದ್ದಾಗ ಅವನಿಂದ ಏನೂ ಉಳಿಯಿಡಲಾಗುತ್ತಿದ್ದಿಲ್ಲ. ಉಳಿಯಿಟ್ಟರೂ ಅದು ತೀರ ಕಡಿಮೆ ಪ್ರಮಾಣದಿಂದ. ಅವರು ಹೊಟ್ಟೆ-ಬಟ್ಟೆಗೆ ಸಾಕಾಗುವಷ್ಟನ್ನು ಮಾತ್ರ ಗಳಿಸಿ ಬಾಳಬೇಕಾಗುತಿತ್ತು. ಹಣವನ್ನು ಇಲ್ಲವೆ ಬೇರೆ ಪದಾರ್ಥವನ್ನು ಉಳಿಯಿಡಲು ಅವನಿಗೆ ಯಾವ ಬ್ಯಾಂಕೂ ಇರಲಿಲ್ಲ. ದಿನ-ದಿನದ ಅನ್ನವನ್ನು ಅವನು ಬೇಟೆಯಿಂದಲೇ ಸಂಪಾದಿಸಬೇಕಾಗುತಿತ್ತು. ಒಕ್ಕಲುತನದ ಆರಂಭದಿಂದ ಒಂದು ದಿನಕ್ಕೆ ಬೇಕಾದುದಕ್ಕಿಂತ ಹೆಚ್ಚಾದ ಕಾಳು-ಕಡಿ ಅವನಿಗೆ ಭೂಮಿಯಿಂದ ದೊರೆಯ ತೊಡಗಿತು. ಈ ಮಿಕ್ಕ ಸಂಗ್ರಹವನ್ನು ಅವನು ಕಾಯ್ದಿಡುತ್ತಿದ್ದನು. ಸಂಗ್ರಹ ಮಾಡುವುದು ಇಲ್ಲಿಂದಲೇ ಮೊದಲಾಯಿತು. ಬೇಕಾದುದಕ್ಕಿಂತ ಸ್ವಲ್ಪ ಹೆಚ್ಚಾಗಿ ದುಡಿಯುತಿದ್ದುದರಿಂದ ಜನರಿಗೆ ಈ ಉಳಿತಾಯವಾಗ ತೊಡಗಿತು.

ಈಗಿನ ಕಾಲದಲ್ಲಿ ಬ್ಯಾಂಕುಗಳಿವೆ. ಜನರು ಬ್ಯಾಂಕುಗಳಲ್ಲಿ ಹಣವನ್ನು ಇಡಹಿಡುವರು. ಮತ್ತು ಚೆಕ್ಕುಗಳ ಮೂಲಕ ಅದನ್ನು

ಪಡೆಯುವರು. ಇದೆಲ್ಲ ನಿನಗೆ ತಿಳಿದ ಮಾತು. ಈ ಹಣ ಎಲ್ಲಿಂದ ಬರುವುದು ನಿನಗೆ ಗೊತ್ತಿದೆಯೆ? ಇದನ್ನೆಲ್ಲ ಪರ್ಯಾಲೋಚಿಸಿದರೆ ಈ ಎಲ್ಲ ದುಡ್ಡು ಹೆಚ್ಚಿನ ಉಳಿತಾಯವೆಂದು ಕಂಡು-ಬರುವದು. ಎಂದರೆ, ಜನರು ಇದನ್ನೆಲ್ಲ ಒಮ್ಮೆಲೇ ವೆಚ್ಚ-ಮಾಡ ಬಯಸುವುದಿಲ್ಲ. ಆದುದರಿಂದ ಇದನ್ನು ಬ್ಯಾಂಕುಗಳಲ್ಲಿಡುತ್ತಾರೆ. ಯಾರು ಬಹಳ ಹಣವನ್ನು ಉಳಿಯಿಡುವರೋ ಅವರೇ ಇಂದಿನ ಶ್ರೀಮಂತರು. ಏನೂ ಇಲ್ಲದವರೇ ಬಡವರು. ಹೆಚ್ಚಿನ ಉಳಿತಾಯ ಎಲ್ಲಿಂದ ಆಗುವುದು ಎಂದು ನಿನಗೆ ಮುಂದೆ ಗೊತ್ತಾಗುವುದು. ಒಬ್ಬನು ಇನ್ನೊಬ್ಬನಿಗಿಂತ ಹೆಚ್ಚು ದುಡಿಯುವುದರಿಂದ ಹೀಗೆ ಉಳಿಯುತ್ತದೆಂದು ಹೇಳಲಾಗದು. ಈಗಿನ ಕಾಲದಲ್ಲಿ ಏನೂ ದುಡಿಯದ ಮನುಷ್ಯನಿಗೆ ಹೆಚ್ಚು ಉಳಿತಾಯ ವಾಗುತ್ತಿದೆ. ಕಷ್ಟಪಡುವವನಿಗೆ ಮಾತ್ರ ಅದರ ಪಾಲು ಸಿಕ್ಕುವುದಿಲ್ಲ. ಇದು ತೀರ ತಿಳಿಗೇಡಿತನದ ಹೊಂದಿಕೆಯೆಂದು ಗೊತ್ತಾಗುವುದು. ಈ ದಡ್ಡತನದ ಹೊಂದಿಕೆಯಿಂದಲೇ ಜಗತ್ತಿನೊಳಗೆ ಈಗ ಎಷ್ಟೋ ಬಡವರಿರುವರೆಂದು ಜನರು ತಿಳಿಯುತ್ತಾರೆ. ಈಗ ಈ ಮಾತನ್ನು ತಿಳಿದುಕೊಳ್ಳುವುದು ನಿನಗೆ ಹೆಚ್ಚು ಗಡಚಾಗಿ ತೋರಬಹುದು. ಹಾಗಿದ್ದರೆ ನೀನು ಅದರ ಗೋಜಿಗೆ ಹೋಗಬೇಡ. ಅದನ್ನು ನೀನು ಬೇಗನೆ ತಿಳಿದುಕೊಳ್ಳ ಬಲ್ಲವಳಾಗಬಹುದು.

ಒಂದು ಹೊತ್ತಿಗೆ ಬೇಕಾದುದಕ್ಕಿಂತ ಹೆಚ್ಚಾದ ಕಾಳು-ಕಡಿ ಒಕ್ಕಲುತನದಿಂದ ಬೆಳೆಯ ತೊಡಗಿತು. ಇದನ್ನಷ್ಟೆ ನೀನು ಈಗ ನೆನಪಿನಲ್ಲಿಡು. ಹೆಚ್ಚಿನದೆಲ್ಲ ಉಳಿಯಿಡಲಾಯಿತು. ಆಗಿದ ಕಾಲದಲ್ಲಿ ಬ್ಯಾಂಕುಗಳಾಗಲಿ ನಾಣ್ಯಗಳಾಗಲಿ ಇರಲಿಲ್ಲ. ಆಕಳು, ಕುರಿ, ಒಂಟೆ, ಅಥವಾ ಕಾಳು-ಕಡಿಗಳು ಹೇರಳವಾಗಿದ್ದವರೇ ಸಿರಿವಂತ ರೆಂದೆನ್ನಿಸಿಕೊಳ್ಳುತಿದ್ದರು.

೧೫

ನಾಯಕ ಅಥವಾ ಗೌಡನು ಹೇಗೆ ಮೊದಲಾದನು

ನನ್ನ ಪತ್ರಗಳು ತುಸು ತೊಡಕಿನವಾಗುತ್ತಿರುವವೆಂದು ನನಗೆನಿಸುತ್ತಿದೆ! ಆದರೆ ನಾವು ನಾಲ್ಕೂ ಕಡೆಗೆ ನೋಡುತ್ತಿರುವ ಬಾಳುವೆಯೆ ತೊಡಕಿನದಾಗಿದೆ. ಹಿಂದಿನ ಕಾಲದಲ್ಲಿ ಅದು ಬಲು ಹಗುರಾಗಿತ್ತು. ಆದರೆ ನಾವು ಈಗ ತೊಡಕುಗಳು ಮೊದಲಾದ ಕಾಲವನ್ನು ಕುರಿತು ಚರ್ಚಿಸುತ್ತಿರುವೆವು. ಸಾವಕಾಶವಾಗಿ ಶೋಧಿಸುತ್ತ ನಡೆದರೆ, ಮತ್ತು ಜನ-ಜೀವನ ಮಾರ್ಪಡುತ್ತ ಬಂದುದನ್ನು ತಿಳಿದುಕೊಳ್ಳಲು ಯತ್ನಿಸಿದರೆ, ಇಂದಿನ ಎಷ್ಟೋ ಸಂಗತಿಗಳನ್ನು ತಿಳಿದುಕೊಳ್ಳಲು ನಮಗೆ ಸುಲಭವಾಗುವದು. ನಾವು ಹಾಗೆ ಮಾಡದಿದ್ದರೆ ಮಾತ್ರ ಸುತ್ತು-ಮುತ್ತು ನಡೆದಿರುವುದೆಲ್ಲವನ್ನು ನಾವು ತಿಳಿದುಕೊಳ್ಳಲಾರೆವು. ಮಹಾರಣ್ಯದಲ್ಲಿ ದಿಕ್ಕು-ಗೆಟ್ಟು ಹೋದ ಹುಡುಗರಂತೆ ನಮ್ಮ ಅವಸ್ಥೆ ಆಗುವುದು. ಈ ಕಾರಣದಿಂದಲೇ ನಾನು ನಿನ್ನನ್ನು ಅಡವಿಯ ಹಿಂದಿನ ತುದಿಗೆ ಕರೆದೊಯ್ಯಬೇಕೆನ್ನುತ್ತೇನೆ. ಅದರಿಂದ ನಾವು ಅಡವಿಯ ಒಳಗಿನ ದಾರಿಯನ್ನು ಕಂಡು-ಕೊಳ್ಳಬಹುದು.

ಮುಸೂರಿಯಲ್ಲಿದ್ದಾಗ ಅರಸರೆಂದರೇನು, ಅವರು ಹೇಗೆ ಹುಟ್ಟಿದರು, ಏನು ಮಾಡುತ್ತಿರುತ್ತಾರೆ ಎಂದು ನೀನು ನನ್ನನ್ನು ಕೇಳಿದ್ದು ನಿನಗೆ ನೆನಪಿರಬಹುದು. ನಾವು ಈಗ ಅರಸರು ಮೊದಲಾದಂದಿನ ಬಹಳ ಹಿಂದಿನ ಕಾಲದಲ್ಲಿ ಒಳ-ಹೊಕ್ಕು ತುಸು ನೋಡಿಕೊಳ್ಳಬೇಕಾಗಿದೆ. ಮೊಟ್ಟ-ಮೊದಲು ಅವರಿಗೆ ಅರಸರೆನ್ನುತ್ತಿರಲಿಲ್ಲ. ಅವರನ್ನು ಕುರಿತು ನಾವು ಏನನ್ನಾದರೂ ತಿಳಿದುಕೊಳ್ಳಲೆತ್ನಿಸಿದರೆ ಅವರ ಬುಡವೇ ನಮಗೆ ಗೊತ್ತಾಗುವುದು.

ತಂಡಗಳು ಅಥವಾ ಜೆಡಗುಗಳು ಹೇಗಾದವೆಂಬುದನ್ನು ನಾನು ನಿನಗೆ ಮೊದಲೆ ಹೇಳಿದ್ದೇನೆ. ಒಕ್ಕಲುತನ ಹುಟ್ಟಿದಾಗ—ಕೆಲ-ಮಟ್ಟಿಗೆ

ದುಡಿತದ ಹಂಚಿಕೆಯಾದಾಗ—ತಂಡದವನೊಬ್ಬನು ಉಳಿದವರಿಗೆ ಕೆಲಸವನ್ನು ಹಂಚಿಕೊಡ ಬೇಕಾಯಿತು. ಇದಕ್ಕಿಂತ ಮೊದಲು, ಒಂದು ತಂಡ ಮತ್ತೊಂದು ತಂಡದ ಸಂಗಡ ಕಾದುವಾಗ, ತಂಡಗಳಿಗೆ ಒಬ್ಬ ಮುಂದಾಳು ಬೇಕಾಗುತಿದ್ದನು. ಸಾಮಾನ್ಯವಾಗಿ ಗುಂಪಿನಲ್ಲಿ ಹಿರಿಯ ನಾದವನೇ ಇಂತಹ ಮುಂದಾಳಾಗುತ್ತಿದ್ದನು. ಇವನನ್ನು ಮೊಕ-ನಾಯಕ ಅಥವಾ ಗೌಡನೆಂದು ನಾವು ಕರೆಯೋಣ. ಇವನು ಹಿರಿಯ ನಾದುದರಿಂದ ಎಲ್ಲರಿಗಿಂತ ಅನುಭವವುಳ್ಳವನೂ ಬುದ್ಧಿವಂತನೂ ಎಂದು ತಿಳಿವಳಿಕೆ ಇತ್ತು. ಈ ಮೊಕ-ನಾಯಕನಲ್ಲಿ ಮತ್ತು ಗುಂಪಿನ ಉಳಿದ ಜನರಲ್ಲಿ ವಿಶೇಷವಾಗಿ ಹೆಚ್ಚು-ಕಡಿಮೆ ಇದ್ದಿಲ್ಲ. ಇವನು ಎಲ್ಲರ ಜೊತೆಯಲ್ಲಿ ದುಡಿಯುತ್ತಿದ್ದನು. ಗಳಿಸಿದ ಆಹಾರವೆಲ್ಲ ಗುಂಪಿನ ಎಲ್ಲ ಜನರಲ್ಲಿ ಹಂಚಿಕೆಯಾಗುತಿತ್ತು. ಪ್ರತಿಯೊಂದು ವಸ್ತುವಿನ ಒಡೆತನ ಗುಂಪಿನದೇ ಆಗಿತ್ತು. ಆಗ ಈಗಿನಂತೆ ಯಾರಿಗೂ ತನ್ನ ಸ್ವಂತದ ಮನೆ, ಹಣ, ಮತ್ತು ಇತರ ಸಾಮಾನುಗಳಿದ್ದಿಲ್ಲ. ಯಾವನೊಬ್ಬನು ಗಳಿಸಿದ ಯಾವುದೇ ವಸ್ತುವಿರಲಿ, ಅದು ಗುಂಪಿಗೆ ಒಳಪಟ್ಟದ್ದೆಂಬ ಭಾವನೆಯಿಂದ ಎಲ್ಲರಲ್ಲಿ ಹಂಚಿಕೆಯಾಗುತ್ತಿತ್ತು. ಈ ಹಂಚುವ ಕೆಲಸ ವನ್ನು ಮೊಕ-ನಾಯಕನೇ ಮಾಡುತ್ತಿದ್ದನು.

ಆದರೆ ಎಲ್ಲವೂ ಮಾರ್ಪಡುತ್ತ ನಡೆಯಿತು. ವಿಶೇಷವಾಗಿ, ಒಕ್ಕಲುತನದಿಂದ ಹೊಸ ಹೊಸ ಹೋರೆಗಳು ಹುಟ್ಟಿದವು. ಹಿರಿಯ ಗೌಡನು ದಾವತಿಗಳನ್ನು ಹಂಚಿ ಹಾಕುವುದರಲ್ಲಿಯೂ ತಂಡದ ಎಲ್ಲ ಕುಳಗಳಿಂದ ಕೆಲಸ ಸರಿಯಾಗಿ ನಡೆದಿದೆಯೊ ಇಲ್ಲವೊ ಎಂಬುದನ್ನು ನೋಡುವುದರಲ್ಲಿಯೂ ತನ್ನ ಎಲ್ಲ ವೇಳೆಯನ್ನು ಕಳೆಯುತಿದ್ದನು. ಬರ-ಬರುತ್ತ ಗೌಡನು ಕುಳಗಳಂತೆ ದುಡಿಯುವುದನ್ನು ಬಿಟ್ಟು-ಬಿಟ್ಟನು. ಹೀಗೆ ಅವನು ಉಳಿದ ಜನರಿಗಿಂತ ತೀರ ಬೇರೆಯುವನಾದನು. ಈಗ ಬೇರೊಂದು ತರದಿಂದ ದುಡಿತದ ಹಂಚಿಕೆಯಾದದ್ದು ನಮಗೆ ಕಂಡು ಬರುತ್ತದೆ. ಗೌಡನು ಕೆಲಸಗಳನ್ನು ಹಂಚುವುದು, ಇತರರಿಂದ ಕೆಲಸ ಮಾಡಿಸುವುದು, ಉಳಿದವರು ಹೊಲಗಳಲ್ಲಿ ದುಡಿಯುವುದು, ಬೇಟೆ ಯಾಡುವುದು, ಕಾಳಗವನ್ನಾಡುವುದು, ತಮ್ಮ ಹಿರಿಯನ ಅಪ್ಪಣೆ

ಯನ್ನು ಪಾಲಿಸುವುದು, ಇದರಂತೆ ನಡೆಯಿತು. ಎರಡು ತಂಡಗಳಲ್ಲಿ ಕಾಳಗದ ಹೂಡಿಕೆಯಾದಾಗ ಗೌಡನಿಗೆ ಮತ್ತಷ್ಟು ಅಧಿಕಾರ ಬರುತ್ತಿತ್ತು. ಯಾಕೆಂದರೆ ಕಾದಾಟದ ಕಾಲದಲ್ಲಿ ನಾಯಕನಿಲ್ಲದೆ ಕಾಳಗ ಚೆನ್ನಾಗಿ ನಡೆಯುವಂತಿಲ್ಲ. ಈ ರೀತಿಯಲ್ಲಿ ಗೌಡನ ಆಳಿಕೆ ಬಹಳ ಬಲಿಯಿತು.

ಕೆಲಸ ನೋಡಿಕೊಳ್ಳುವುದು ಹೆಚ್ಚಿದಂತೆ ಅದೆಲ್ಲವನ್ನೂ ಗೌಡನು ಒಬ್ಬನೇ ಮಾಡಲಾರದಂತಾದನು. ತನಗೆ ನೆರವಾಗಬೇಕೆಂದು ಅವನು ಕೆಲವು ಜನರನ್ನು ಆಯ್ದುಕೊಂಡನು. ಅದರಿಂದ ಕೆಲಸ ನೋಡಿಕೊಳ್ಳುವವರು ಹೆಚ್ಚಿದರು. ಆದರೆ ಮೊಕ-ನಾಯಕ ಅಥವಾ ಹಿರೇ ಗೌಡನು ಮಾತ್ರ ಶ್ರೇಷ್ಠನಾಗಿದ್ದನು. ಆಗ ತಂಡದಲ್ಲಿ, ಕೆಲಸ ಹಂಚಿ ಹಾಕುವವರು ಮತ್ತು ದುಡಿಯುವವರು, ಹೀಗೆ ಇಬ್ಬಣಗಳಾದುವು. ಅಲ್ಲಿಂದ ಜನರಲ್ಲಿ ಸರಿ-ಸಮಾನತೆ ಉಳಿಯಲಿಲ್ಲ. ಸಾಮಾನ್ಯರಾದ ಈ ಕೆಲಸಗಾರರನ್ನು ಆಳುವ ಅಧಿಕಾರ ಈ ಕೆಲವು ಜನ ಆಡಳಿತೆಗಾರರಿಗೆ ಸಿಕ್ಕಿತು.

ಈ ನಾಯಕನು ಮುಂದೆ ಹೇಗೆ ಬೆಳೆದನೆಂಬುದನ್ನು ಮುಂದಿನ ಓಲೆಯಲ್ಲಿ ನೋಡಿಕೊಳ್ಳೋಣ.

೧೬

ನಾಯಕ — ಅವನು ಹೇಗೆ ಬೆಳೆದನು

ನಾನು ಹೇಳುವ ಹಳೆಯ ತಂಡಗಳು ಮತ್ತು ಅವುಗಳ ಹಿರಿಯ ಗೌಡರ ಕತೆಗಳು ನಿನಗೆ ತಲೆ-ಚಿಟ್ಟು ಹಿಡಿಯಲಿಕ್ಕಿಲ್ಲೆಂದು ನಾನು ತಿಳಿಯಬಹುದೆ?

ಆಗಿನ ಕಾಲದಲ್ಲಿ ಪ್ರತಿಯೊಂದು ವಸ್ತು ಇಡಿಯ ಬೆಡಗಿನದೇ ಆಗಿತ್ತು. ಅದರ ಮೇಲೆ ಒಬ್ಬೊಬ್ಬರ ಅಧಿಕಾರ ಇರುತ್ತಿರಲಿಲ್ಲವೆಂದು ನಾನು ನಿನಗೆ ಹಿಂದಿನ ಓಲೆಯಲ್ಲಿ ತಿಳಿಸಿರುವೆನು. ಹಿರಿಯ ಗೌಡನಿಗೂ ತನ್ನದೇ ಆದ ಯಾವುದೂ ಇರಲಿಲ್ಲ. ತಂಡದ ಉಳಿದ ಜನರಿಗೆ ಪಾಲು ದೊರೆಯುವಷ್ಟೇ ಅವನಿಗೂ, ಆ ತಂಡದವನೆಂದು ಪಾಲು ದೊರೆಯುತಿತ್ತು. ಆದರೆ ಅವನು ಎಲ್ಲರನ್ನೂ ಕೆಲಸಕ್ಕೆ ತೊಡಗಿಸುವವನು; ತಂಡದ ಗಳಿಕೆ, ಸಾಮಾನು, ಎಲ್ಲವನ್ನೂ ನೋಡಿಕೊಳ್ಳುವವನು. ಅವನ ಅಧಿಕಾರ-ಬಲ ಬೆಳೆದಂತೆ ಆ ಗಳಿಕೆಯೆಲ್ಲ ತನ್ನದೇ ಎಂದೂ ತಂಡದ್ದಲ್ಲವೆಂದೂ ತಿಳಿಯ ತೊಡಗಿದನು. ಆ ತಂಡದ ನಾಯಕನಾದುದರಿಂದ ತಾನೇ ಅದರ ಒಡೆಯನೆಂದೂ ತಿಳಿಯ ತೊಡಗಿದನು! ಒಡೆತನದ ಕಲ್ಪನೆಯು ಹುಟ್ಟು ಹೇಗಾಯಿತೆಂದು ಇದರಿಂದ ನಮಗೆ ತಿಳಿಯುವುದು. ಈ ಪದಾರ್ಥ ನನ್ನದು ತನ್ನದೆಂದು ಈಗ ನಾವು ಯಾವಾಗಲೂ ಮಾತನಾಡುತ್ತೇವೆ. ಆದರೆ ನಾನು ನಿನಗೆ ಹೇಳಿದಂತೆ ಮೊಟ್ಟ-ಮೊದಲಿನ ತಂಡಗಳ ಗಂಡಸರು ಹೆಂಗಸರು ಹೀಗೆ ತಿಳಿದುಕೊಳ್ಳುತ್ತಿರಲಿಲ್ಲ. ಆಗ ಪ್ರತಿಯೊಂದು ಒಡವೆ ತಂಡದ್ದೇ ಆಗಿತ್ತು.

ಆದರೆ ಮುಂದೆ ಬರ-ಬರುತ್ತ ಹಿಂದಿನ ಕಾಲದ ನಾಯಕನು ತಂಡವೆಂದರೆ ತಾನೇ ಎಂದೂ ತಂಡದ ಬಹುತರ ಎಲ್ಲ ಒಡವೆಗಳು ತನ್ನವೇ ಎಂದೂ ತಿಳಿದುಕೊಳ್ಳತೊಡಗಿದನು.

ನಾಯಕನು ಸತ್ತ ನಂತರ ತಂಡದವರೆಲ್ಲರೂ ಕೂಡಿ ಇನ್ನೊಬ್ಬ ನನ್ನು ನಾಯಕನೆಂದು ಆರಿಸುತ್ತಿದ್ದರು. ಆದರೆ ಬೇರೆ ಜನರಿಗಿಂತ ನಾಯಕನ ಮನೆಯವರಿಗೆ ಹಿರಿಯತನ ಮಾಡುವುದು ಚೆನ್ನಾಗಿ ಗೊತ್ತಿರುತಿತ್ತು. ಯಾವಾಗಲೂ ಹಿರಿಯನ ಜೊತೆಗಿದ್ದು ಅವರು ಅವನ ಕೆಲಸದಲ್ಲಿ ನೆರವಾಗುತ್ತಿದ್ದರು. ಹೀಗೆ ಅವರಿಗೆ ಹಿರಿಯತನ ಮಾಡುವುದು ಗೊತ್ತಾಗುತಿತ್ತು. ಆದುದರಿಂದ ಮುದುಕನಾದ ನಾಯಕನು ಸತ್ತನೆಂದರೆ, ಅವನ ಮನೆಗೆ ಸೇರಿದ ಇನ್ನೊಬ್ಬನನ್ನು ತಂಡದವರು ಆಯ್ಕೆ ಮಾಡಬೇಕಾಗುತಿತ್ತು. ಮುಂದೆ ಹಿರಿಯನ ಮನೆತನ ಉಳಿದ ಜನರಿಂದ ಬೇರೆಯಾಗುತ್ತ ನಡೆದು ಗುಂಪಿನ ಜನರು ಆ ಮನೆಯವರನ್ನೇ ನಾಯಕರೆಂದು ತಿಳಿಯುತ್ತ ಬಂದರು. ಈಗ ನಾಯಕನ ಅಧಿಕಾರ ಹೆಚ್ಚಾಯಿತು. ತನ್ನ ತರುವಾಯ ತನ್ನ ಮನೆಯವರಿಗೇ ಹಿರಿತನ ದೊರೆಯಬೇಕೆಂದು ಅವನು ತಾನಾಗಿಯೆ ಇಚ್ಛಿಸುತಿದ್ದನು; ಮತ್ತು ಇದಕ್ಕಾಗಿ ಬಲು ಪ್ರಯತ್ನ ಮಾಡುತ್ತಿದ್ದನು. ಆದುದರಿಂದ ಅವನು ತನ್ನ ಮಗನನ್ನು ಇಲ್ಲವೆ ಬೇರೊಬ್ಬ ಸಮೀಪ ಸಂಬಂಧಿಯನ್ನು ತನ್ನ ಕೆಲಸದಲ್ಲಿ ಪಳಗಲು ಕಲಿಸುತಿದ್ದನು. ತಾನು ಆರಿಸಿ ಕೆಲಸ ಕಲಿಸಿ ಯಾರನ್ನು ಗೊತ್ತುಮಾಡಿರುತಿದ್ದನೊ ಅವನನ್ನೇ ಮುಂದೆ ನಾಯಕನನ್ನಾಗಿ ಮಾಡಿರೆಂದು ಗುಂಪಿನ ಜನರಿಗೆ ಹೇಳುತ್ತಿದ್ದನು. ಹೀಗೆ ಹೇಳಿಡುವುದು ಗುಂಪಿನ ಜನರಿಗೆ ಮೊದ-ಮೊದಲು ಸರಿಬಿದ್ದಿರಲಿಕ್ಕಿಲ್ಲ. ಬರ-ಬರುತ್ತ ಇದು ಅವರಿಗೆ ರೂಢಿಯಾಗಿ ನಾಯಕನು ಹೇಳಿದ್ದನ್ನೇ ಯಾವಾಗಲೂ ಮಾಡತೊಡಗಿದರು. ಎಲ್ಲರು ಒಟ್ಟು-ಗೂಡಿ ಹೊಸ ನಾಯಕನನ್ನು ಗೊತ್ತುಮಾಡುವುದು ತಪ್ಪಿಹೋಯಿತು. ತನ್ನ ಸ್ಥಳಕ್ಕೆ ಯಾರು ಬರಬೇಕೆಂದು ಮುದಿ ಮನುಷ್ಯನು ಮೊದಲೇ ಗೊತ್ತುಮಾಡುತ್ತಿದ್ದನು. ಇಂತಹನೆ ಈ ಸ್ಥಳಕ್ಕೆ ಬರುತ್ತಿದ್ದನು.

ಹೀಗೆ ಹಿರಿಯತನ ವಂಶ-ಪರಂಪರೆಯಿಂದ ಬಂದುದು ನಮಗೆ ಗೊತ್ತಾಗುತ್ತದೆ. ಅಂದರೆ ಅದು ಒಂದೇ ಮನೆತನದಲ್ಲುಳಿಯಿತು. ತಂದೆಯಿಂದ ಮಗನಿಗೆ ಇಲ್ಲವೆ ಇನ್ನೊಬ್ಬ ಸಂಬಂಧಿಗೆ ಅದು ಸೇರು

ತಿತ್ತು. ಗುಂಪಿನ ಎಲ್ಲ ಒಡವೆಗಳು ತನ್ನವೆ ಆಗಿರುವವೆಂದು ಹಿರಿಯ ಗೌಡನಿಗೆ ಈಗ ಮಂದಟ್ಟಾಯಿತು. ಅವನು ಸತ್ತ ಮೇಲೆಯೂ ಎಲ್ಲ ಒಡವೆಗಳು ಅವನ ಮನೆತನದಲ್ಲಿಯೆ ಉಳಿಯುತ್ತ ನಡೆದವು. ಯಾವುದಾದರೊಂದು ಒಡವೆ ನನ್ನದು ತನ್ನದೆಂಬ ಕಲ್ಪನೆ ಹೇಗೆ ಮೊದಲಾಯಿತೆಂಬುದು ಈಗ ನಮಗೆ ಗೊತ್ತಾಯಿತು. ಮೊದಲು ಈ ತರದ ತಿಳಿವಳಿಕೆ ಇರಲಿಲ್ಲ. ಗುಂಪಿನ ಎಲ್ಲ ಜನರು ಒಟ್ಟು-ಗೂಡಿ ಬೆಡಗಿಗಾಗಿ ದುಡಿಯುತಿದ್ದರು; ತಮ್ಮ ಸ್ವಂತಕ್ಕಾಗಿ ಅಲ್ಲ. ಅವರು ಏನನ್ನಾದರೂ ಹೇರಳವಾಗಿ ಗಳಿಸಿದರೆ ಗುಂಪಿನ ಪ್ರತಿಯೊಬ್ಬನು ತನ್ನ ಪಾಲನ್ನು ಪಡೆಯುತಿದ್ದನು. ತಂಡದಲ್ಲಿ ಬಡವರು ಬಲ್ಲಿದರು ಎಂಬ ಭೇದವಿರಲಿಲ್ಲ. ಗಳಿಕೆಯಲ್ಲಿ ಎಲ್ಲರೂ ಪಾಲುಗಾರರಾಗಿದ್ದರು.

ಹಿರಿಯ ನಾಯಕನು ತಂಡದ ಒಡವೆಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತ, ಅವು ತನ್ನವೆಂದು ತಿಳಿಯ ತೊಡಗಿದ ಕೂಡಲೇ ಜನರು ಸಿರಿವಂತರೂ ಬಡವರೂ ಆಗ ತೊಡಗಿದ್ದು ನಮಗೆ ಗೊತ್ತಾಗುತ್ತದೆ.

ಇದನ್ನು ಕುರಿತು ಮುಂದಿನ ಪತ್ರದಲ್ಲಿ ನಿನಗೆ ಇನ್ನೂ ಬಹಳ ಹೇಳತಕ್ಕದ್ದಿದೆ.

೧೭

ಹಿರಿಯ ನಾಯಕನು ಅರಸನಾದನು

ಈ ಮುದಿ ಹಿರಿಯ ನಾಯಕನು ನಮ್ಮ ಬಹಳ ಕಾಲವನ್ನು ಕಳೆದನು. ಇವನ ಕತೆಯನ್ನು ನಾವು ಬೇಗನೆ ಮುಗಿಸೋಣ. ಇಲ್ಲದಿದ್ದರೆ ಇವನೇ ಹೆಸರನ್ನು ಮಾರ್ಪಡಿಸಿಕೊಂಡು ಬರುವನು. ಅರಸರು ಹೇಗಾದರು, ಮತ್ತು ಅವರೇನಿದ್ದರೆಂಬುದನ್ನು ನಾನು ನಿನಗೆ ಹೇಳುವೆನೆಂದು ಮಾತು ಕೊಟ್ಟಿದ್ದೆನು. ಅರಸರ ಬೇರನ್ನು ತಿಳಿದು ಕೊಳ್ಳಬೇಕೆಂದಿದ್ದರೆ, ನಾವು ಸೆಟ್ಟಿಗೆ ಹಿಂದೆ ಹಿರೇ ನಾಯಕರೆಡೆಗೆ ಹೋಗಬೇಕಾಗುತ್ತದೆ. ಇವರೇ ಮುಂದೆ ಅರಸರು, ರಾಜರು ಮತ್ತು ಮಹಾರಾಜರಾದರೆಂದು ನೀನು ತಿಳಿದುಕೊಂಡಿರಬಹುದು.

ಈ ಹಿರಿಯ ನಾಯಕನ ಅಧಿಕಾರ ವಂಶ-ಪರಂಪರೆಯದಾಗ ತೊಡಗಿತು. ಎಂದರೆ ಮಗನು ತಂದೆಯ ಸ್ಥಳಕ್ಕೆ ಬರತೊಡಗಿದನು. ಆಗ ಅರಸು ಮತ್ತು ಈ ಹಿರಿಯ ಗೌಡನಲ್ಲಿ ಭೇದವಿಲ್ಲದಂತಾಯಿತು. ಇವನೇ ಬೆಳೆಯುತ್ತ ಅರಸನಾದನು. ನಾಡಿನೊಳಗಿನದೆಲ್ಲ ತನ್ನದೇ ಎನ್ನುವ ವಿಲಕ್ಷಣ ಕಲ್ಪನೆ ಅರಸನ ತಲೆಯಲ್ಲಿ ಮೂಡಿತು. ತಾನೇ ನಾಡು ಎಂದು ಇವನು ತಿಳಿದುಕೊಂಡನು. ಹೆಸರಾದ ಒಬ್ಬ ಫ್ರೆಂಚ್ ಅರಸು ಹೀಗೆ ಎಂದಿದ್ದಾನೆ: 'ರಾಜ್ಯವೆಂದರೆ ನಾನೇ ಅಥವಾ ನಾನೇ ರಾಜ್ಯ.' ನಾಡೊಳಗಿನ ಕೆಲಸ, ಆಹಾರ ಮತ್ತು ಇನ್ನುಳಿದ ಒಡವೆ ಗಳನ್ನು ಜನರಲ್ಲಿ ಹಂಚುವುದಕ್ಕಾಗಿ ಜನರಿಂದ ತಾವು ಆಯ್ಕೆಯಾದವ ರೆಂಬುದನ್ನು ಅರಸರು ಮರೆತೇ ಬಿಟ್ಟರು. ತಂಡದೊಳಗಿನ ಎಲ್ಲ ಜನರಿ ಗಿಂತ ತಾವು ಮಿಗಿಲಾದ ಬುದ್ಧಿವಂತರೂ ಅನುಭವವುಳ್ಳವರೂ ಆಗಿದ್ದು ದರಿಂದ ತಮ್ಮನ್ನು ಆರಿಸಲಾಗಿದೆಯೆಂಬುದನ್ನೂ ಇವರು ತಿಳಿಯಲಾರ ದಂತಾದರು. ತಾವು ಎಲ್ಲರ ಒಡೆಯರು, ನಾಡಿನ ಜನರು ತಮ್ಮ ಆಳುಗಳು ಎಂದು ಇವರು ತಿಳಿದುಕೊಂಡರು. ನಿಜವಾಗಿ ನೋಡಿದರೆ ಈ ಅರಸರೇ ನಾಡಿನ ಆಳುಗಳಾಗಿದ್ದರು!

ತಮ್ಮನ್ನು ಆಯ್ಕೆ ಮಾಡುವುದು ಜನರಿಗೆ ಸಂಬಂಧಪಟ್ಟದಲ್ಲವೆಂದು ಅರಸರು ಹೆಮ್ಮೆಯಿಂದ ತಿಳಿದುಕೊಂಡರು. ಈ ಮಾತು ಮುಂದೆ ಇತಿಹಾಸವನ್ನೋದಿದರೆ ಗೊತ್ತಾಗುವುದು. ಅರಸರನ್ನು ದೇವರೇ ಮಾಡಿದನೆಂದು ಇವರು ತಿಳಿಯ ತೊಡಗಿದರು. ಇವರು ಇದಕ್ಕೆ "ಅರಸರ ಅಧಿಕಾರ ದೇವರಿಂದ ಬಂದುದು" ಎಂದು ನುಡಿದರು. ಹೀಗೆ ಇವರು ಬಹಳ ಕಾಲದ ವರೆಗೆ ದಾರಿ ತಪ್ಪಿ ನಡೆದರು. ಜನರು ಹೊಟ್ಟೆ-ಸುಡುತ್ತಿರುವಾಗ ಇವರು ವಿಷಯ ಲೋಲುಪರಾಗಿ ಕಾಲ ಕಳೆಯುತ್ತಿದ್ದರು. ಆದರೆ ಕಟ್ಟ-ಕಡೆಗೆ ಸಾಮಾನ್ಯ ಜನರು ಇದನ್ನು ತಡೆಯಲಾರದಂತಾಗಿ ಕೆಲವು ದೇಶಗಳಲ್ಲಿ ತಮ್ಮ ಅರಸರನ್ನು ತಳ್ಳಿ ಬಿಟ್ಟರು. ಇಂಗ್ಲಂಡಿನ ಜನರು ತಮ್ಮ ಅರಸನಾದ ಮೊದಲನೆ ಚಾರ್ಲಸನ ವಿರುದ್ಧ ಬಂಡನ್ನೆಬ್ಬಿಸಿ ಅವನನ್ನು ಸೋಲಿಸಿ ತಲೆಯನ್ನು ಕೂಡ ಹೊಡಿಸಿದುದು ಹೇಗೆ, ಮತ್ತು ಫ್ರಾನ್ಸಿನ ಜನರು ದೊಡ್ಡ ಕ್ರಾಂತಿ-ಗೆಯ್ದು ಇನ್ನು ಮುಂದೆ ಅರಸರೇ ಬೇಡವೆಂದು ಪಣತೊಟ್ಟುದು ಹೇಗೆ, ಎಂಬುದನ್ನು ನೀನು ಆ ಮೇಲೆ ಓದಿಕೊಳ್ಳಬಹುದು. ಪ್ಯಾರಿಸ್ ಪಟ್ಟಣದಲ್ಲಿ ನಾವು 'ಕಾನ್ಸಿರ್‌ಜೆರಿ' ಎಂಬ ಸೆರೆ-ಮನೆಯನ್ನು ನೋಡಲು ಹೋದುದು ನಿನಗೆ ನೆನಪಿರಬಹುದು. ಆಗ ನೀನು ನಮ್ಮೊಂದಿಗೇ ಇದ್ದೆಯಲ್ಲವೆ? ಈ ಸೆರೆ-ಮನೆಯಲ್ಲಿ ಅರಸು ಮನೆತನದವರನ್ನು, ಅರಸನ ಹೆಂಡತಿಯಾದ ಆಂತೈನೇಯನ್ನು, ಮತ್ತು ಇನ್ನಿತರರನ್ನು ಸೆರೆಯಲ್ಲಿಟ್ಟಿದ್ದರು. ಇತ್ತೀಚೆಗೆ, ಕೆಲವು ವರುಷಗಳ ಹಿಂದೆ ರಶಿಯ ದೇಶದವರು ಕ್ರಾಂತಿ ಗೈದು 'ಝಾರ್' ಎಂಬ ತಮ್ಮ ಅರಸನನ್ನು ಹೊಡೆದೋಡಿಸಿದರು. ಇದನ್ನೂ ನೀನು ಮುಂದೆ ಓದಿಕೊಳ್ಳಬಹುದು.

ಹೀಗೆ ಅರಸರದೂ ಒಂದು ಕಾಲವಿತ್ತು. ಆದರೆ ಈಗ ಎಷ್ಟೋ ದೇಶಗಳಲ್ಲಿ ಅರಸರೇ ಇಲ್ಲ. ಫ್ರಾನ್ಸ್, ಜರ್ಮನಿ, ರಶಿಯ, ಸ್ವಿಝರ್‌ಲಂಡ್, ಅಮೇರಿಕೆ, ಚೀನ ಮತ್ತು ಬೇರೆ ದೇಶಗಳಲ್ಲಿ ಅರಸರೇ ಇಲ್ಲ. ಇವೆಲ್ಲ ಈಗ ಪ್ರಜಾಧಿಪತ್ಯಗಳಾಗಿವೆ. ಇದರ ಅರ್ಥವೇನೆಂದರೆ–ಸಾಮಾನ್ಯ ಜನರು ತಮ್ಮ ಮುಂದಾಳು ಮತ್ತು ಆಡಳತೆಗಾರರನ್ನು

ಕಾಲ-ಕಾಲಕ್ಕೆ ಆಯ್ದುಕೊಳ್ಳುವರು. ಈ ಮುಂದಾಳುಗಳು ಮತ್ತು ಆಡಳಿತೆಗಾರರು ವಂಶ-ಪರಂಪರೆಯವರಾಗಿರುವುದಿಲ್ಲ.

ಇಂಗ್ಲಂಡಿನಲ್ಲಿ ಈಗಲೂ ಅರಸನಿರುವುದು ನಿನಗೆ ಗೊತ್ತು. ಆದರೆ ಅವನಿಗೆ ಆಳುವ ಅಧಿಕಾರವಿಲ್ಲ. ಅವನು ಏನನ್ನೂ ಮಾಡಲಾರನು. ಎಲ್ಲ ಅಧಿಕಾರ ಪಾರ್ಲಿಮೆಂಟಿನ ಕೈಯಲ್ಲಿರುವುದು. ಪಾರ್ಲಿಮೆಂಟಿನಲ್ಲಿ ಜನರಿಂದ ಆರಿಸಲಾದ ಮುಂದಾಳುಗಳು ಸೇರುವರು. ಲಂಡನ್ ನಗರದಲ್ಲಿ ಪಾರ್ಲಿಮೆಂಟನ್ನು ನೋಡಿದ್ದು ನಿನಗೆ ನೆನಪಿರಬಹುದು.

ಹಿಂದುಸ್ತಾನದಲ್ಲಿ ಅನೇಕ ರಾಜರು ಮಹಾರಾಜರು ಮತ್ತು ನವಾಬರು ಇನ್ನೂ ಇರುವರು. ಇವರು ಬಹಳ ಸೊಗಸಾದ ಉಡಿಗೆಗಳನ್ನುಟ್ಟುಕೊಂಡು ಬೆಲೆಯುಳ್ಳ ಮೋಟಾರುಗಳಲ್ಲಿ ತಿರುಗಾಡುತ್ತ, ತಮಗಾಗಿ ರೊಕ್ಕದ ಸೂರೆ-ಮಾಡಿ ಕೊಳ್ಳುತ್ತಿರುವುದನ್ನು ನೀನು ನೋಡುತ್ತಿರುವೆ. ಈ ಹಣವೆಲ್ಲ ಅವರಿಗೆ ಎಲ್ಲಿಂದ ದೊರೆಯುವುದು ? ಅವರು ಇದನ್ನು ಜನರಿಂದ ತೆರಿಗೆಯೆಂದು ಪಡೆಯುತ್ತಾರೆ. ತೆರಿಗೆಯ ಹಣವನ್ನು ಕೊಡುವುದು ದೇಶದೊಳಗಿನ ಎಲ್ಲ ಜನರಿಗೆ ಹಿತವಾಗಬೇಕೆಂದು. ಸಾಲೆ, ಔಷಧಾಲಯ, ಪುಸ್ತಕಾಲಯ, ವಸ್ತುಸಂಗ್ರಹಾಲಯಗಳನ್ನು ತೆರೆಯಲು, ಒಳ್ಳೆಯ ದಾರಿಗಳನ್ನು ಹಾಕಿಸಲು, ಮತ್ತು ಜನರಿಗೆ ಹಿತವಾಗುವ ಇನ್ನೂ ಅನೇಕ ಕೆಲಸಗಳನ್ನು ಮಾಡಲು ಈ ಹಣದ ಬಳಕೆಯಾಗಬೇಕು. ಆದರೆ ಹಿಂದಿನ ಕಾಲದ ಫ್ರೆಂಚ್ ರಾಜನು 'ರಾಜ್ಯವೆಂದರೆ ನಾನೇ' ಎಂದು ತಿಳಿದುಕೊಂಡಂತೆ ನಮ್ಮ ರಾಜರು ಮತ್ತು ಮಹಾರಾಜರು ಇನ್ನೂ ತಿಳಿಯುತ್ತಿರುವರು. ತಮ್ಮ ಸುಖದ ಸಲುವಾಗಿ ಜನರಿಂದ ಬಂದ ಹಣವನ್ನು ವೆಚ್ಚಿಸುತ್ತಿರುವರು. ಅವರು ವಿಷಯ ಲೋಲುಪತೆಯಿಂದ ಕಾಲ-ಕಳೆಯುತ್ತಿರುವಾಗ, ಕಷ್ಟಪಟ್ಟು ದುಡಿದು ಅವರಿಗೆ ಹಣ ಸಲ್ಲಿಸುವ ಜನರು ಮಾತ್ರ ಕೂಳಿಲ್ಲದೆ ಬರಗೆಡುತ್ತಿರುವರು. ಇಂತಹರ ಮಕ್ಕಳಿಗಾಗಿ ಸಾಲೆಗಳು ಕೂಡ ಇಲ್ಲ!

೧೮

ಪ್ರಾಚೀನ ಸಂಸ್ಕೃತಿಗಳು

ನಾಯಕರು ಮತ್ತು ಅರಸರನ್ನು ಕುರಿತು ಹೇಳಿರುವುದು ಸದ್ಯಕ್ಕೆ ಸಾಕು. ಈಗ ನಾವು ತುಸು ಹಿಂದಿರುಗಿ ಪ್ರಾಚೀನ ಸಂಸ್ಕೃತಿಗಳು ಮತ್ತು ಆಗಿನ ಕಾಲದಲ್ಲಿ ಬಾಳಿ ಹೋದ ಜನರ ಬಗೆಗೆ ವಿಚಾರ ಮಾಡುವಾ.

ಈ ಹಳೆಯ ಜನರ ವಿಷಯದಲ್ಲಿ ನಮಗೆ ಹೆಚ್ಚಿಗೇನೂ ತಿಳಿಯು ವುದಿಲ್ಲ. ಆದರೆ ಕಲ್ಲಿನ ಹಳೆ ಮತ್ತು ಹೊಸ ಯುಗದ ಜನರಿಗಿಂತ ಹೆಚ್ಚಿನ ಸಂಗತಿಗಳು ಇವರ ವಿಷಯದಲ್ಲಿ ನಮಗೆ ಗೊತ್ತಾಗುತ್ತವೆ. ಸಾವಿರಾರು ವರುಷಗಳಿಗಿಂತ ಮೊದಲು ಕಟ್ಟಿದ, ಈಗ ಬೀಳ್ಪಡೆಯಾದ ದೊಡ್ಡ ದೊಡ್ಡ ಕಟ್ಟಡಗಳು ಇಂದಿಗೂ ನಮಗೆ ದೊರೆಯುತ್ತವೆ. ಈ ಕಟ್ಟಡಗಳನ್ನೂ ಅರಮನೆಗಳನ್ನೂ ದೇಗುಲಗಳನ್ನೂ ನಾವು ನೋಡಿ ದರೆ, ಹಿಂದಿನ ಕಾಲದ ಜನರು ಹೇಗಿದ್ದರು ಮತ್ತು ಏನೇನು ಮಾಡು ತ್ತಿದ್ದರೆಂಬ ಕಲ್ಪನೆ ನಮಗಾಗುತ್ತದೆ. ಈ ಹಳೆಯ ಕಟ್ಟಡಗಳಲ್ಲಿ ಕೆತ್ತಿದ ಗೊಂಬೆಗಳು ಮತ್ತು ಕೊರೆದ ಚಿತ್ರಗಳು ನಮಗೆ ವಿಶೇಷವಾಗಿ ನೆರ ವಾಗುತ್ತವೆ. ಈ ಹಳೆಯ ಗೊಂಬೆಗಳಿಂದ ಆಗಿನ ಕಾಲದ ಜನರ ಉಡಿಗೆ-ತೊಡಿಗೆಗಳು ಹೇಗಿದ್ದವೆಂಬುದನ್ನೂ ಇನ್ನೂ ಅನೇಕ ಸಂಗತಿಗಳನ್ನೂ ನಾವು ಕಂಡುಕೊಳ್ಳ ಬಲ್ಲೆವು.

ಮನುಷ್ಯರು ಮೊದಲು ನೆಲೆಗೊಂಡುದು ಮತ್ತು ಸಂಸ್ಕೃತಿಯನ್ನು ಬೆಳಿಸಿಕೊಂಡುದು ಎಲ್ಲಿ ಎಂಬುದನ್ನು ಹೇಳುವುದು ಸಾಧ್ಯವಿಲ್ಲ. ಅಟ್ಲಾಂಟಿಕ್ ಮಹಾಸಾಗರದಲ್ಲಿ, ಅಟ್ಲಾಂಟಿಸ್ ಎಂಬ ಹೆಸರಿನ ಒಂದು ದೊಡ್ಡ ದೇಶವಿತ್ತೆಂದು ಕೆಲವರು ಹೇಳುತ್ತಾರೆ. ಆ ದೇಶದಲ್ಲಿ ಜನರು ಇರುತ್ತಿದ್ದರೆಂದೂ ಅವರು ಒಳ್ಳೆ ಸುಸಂಸ್ಕೃತರಾಗಿದ್ದರೆಂದೂ ನಂಬಿಗೆ ಇದೆ. ಆದರೆ ಹೇಗೋ ಇಡೀ ದೇಶವೇ ಸಮುದ್ರದಲ್ಲಿ ಮುಳುಗಿ ಅದರ ಗುರುತು ಕೂಡ ಈಗ ಇಲ್ಲದಂತಾಗಿದೆ. ಈ ಮಾತನ್ನು ಸಿದ್ಧಗೊಳಿ

ಸುವ ಸಲಕರಣೆಗಳಿಲ್ಲ. ಬರೇ ಕತೆಗಳು ಉಳಿದಿವೆ. ಆದುದರಿಂದ ಇದನ್ನು ನಾವು ವಿಚಾರ ಮಾಡದೆ ಬಿಟ್ಟುಬಿಡೋಣ.

ಇದಲ್ಲದೆ ಪ್ರಾಚೀನ ಕಾಲದಲ್ಲಿ ಅಮೇರಿಕೆಯಲ್ಲಿಯೂ ಮಹತ್ತರವಾದ ನಾಗರಿಕತೆಗಳಿದ್ದುವೆಂದು ಇನ್ನೂ ಕೆಲವರು ಹೇಳುತ್ತಿರುವರು. ಅಮೇರಿಕೆಯನ್ನು ಕೋಲಂಬಸನು ಕಂಡುಹಿಡಿದನೆಂಬ ತಿಳಿವಳಿಕೆ ಇರುವುದು ನಿನಗೆ ಗೊತ್ತಿದೆಯಷ್ಟೆ? ಆದರೆ ಕೋಲಂಬಸನು ಹೋಗುವ ಮೊದಲು ಅಮೇರಿಕಾದೇಶ ಇದ್ದಿಲ್ಲವೆಂದು ಇದರರ್ಥವಲ್ಲ. ಕೋಲಂಬಸ್ ಅದನ್ನು ಕಂಡುಹಿಡಿಯುವ ತನಕ ಯುರೋಪಿನ ಜನರಿಗೆ ಅದು ಗೊತ್ತಿರಲಿಲ್ಲ. ಕೋಲಂಬಸ್ಸನು ಅಲ್ಲಿಗೆ ಹೋಗುವ ಎಷ್ಟೊ ಪೂರ್ವದಲ್ಲಿ ಅಲ್ಲಿ ಜನರಿರುತ್ತಿದ್ದರು, ಮತ್ತು ಅವರದೇ ಆದ ಒಂದು ತರದ ಸಂಸ್ಕೃತಿ ಇತ್ತು. ಉತ್ತರ ಅಮೇರಿಕೆಯ ಮೆಕ್ಸಿಕೋ ದೇಶದ ಯುಕತಾನಿನಲ್ಲಿ ಮತ್ತು ದಕ್ಷಿಣ ಅಮೇರಿಕೆಯ ಪೆರು ದೇಶದಲ್ಲಿ ಹಾಳು-ಬಿದ್ದ ಹಳೆಯ ಕಟ್ಟಡಗಳು ದೊರೆಯುತ್ತವೆ. ಆದುದರಿಂದ ಪೆರು ಮತ್ತು ಯುಕತಾನಿನಲ್ಲಿ ಪ್ರಾಚೀನ ಕಾಲದಲ್ಲಿ ನಾಗರಿಕ ಜನರಿರುತ್ತಿದ್ದರೆಂದು ನಾವು ನಿಶ್ಚಯವಾಗಿ ಹೇಳಬಲ್ಲೆವು. ಆದರೆ ಅವರ ವಿಷಯದಲ್ಲಿ ಹೆಚ್ಚಿಗೇನೂ ಗೊತ್ತಾಗಿಲ್ಲ. ಆದುದರಿಂದ ಈಗ ಅವರನ್ನು ಕುರಿತು ಹೆಚ್ಚಿನ ಸಂಗತಿಗಳನ್ನು ನಾನು ಹೇಳಲಾರೆನು. ಅವು ನಮಗೆ ಇನ್ನು ಮುಂದೆ ತಿಳಿಯಬಹುದು.

ಯುರೋಪ್ ಮತ್ತು ಏಸಿಯಕ್ಕೆ ಒಟ್ಟಾಗಿ ಯುರೇಸಿಯಾ ಎಂದು ಕರೆಯುತ್ತಾರೆ. ಯುರೇಸಿಯದೊಳಗಿನ ಮೆಸಪೊಟಮಿಯ, ಇಜಿಪ್ತ್, ಕ್ರೀಟ್, ಹಿಂದುಸ್ತಾನ, ಮತ್ತು ಚೀನ ದೇಶಗಳಲ್ಲಿ ಬಹಳ-ಮಾಡಿ ಹಳೆಯ ಸಂಸ್ಕೃತಿಗಳಿದ್ದುವು. ಇಜಿಪ್ತ ದೇಶ ಆಫ್ರಿಕೆಗೆ ಸೇರಿದುದೆಂದು ಈಗ ತಿಳಿವಳಿಕೆ ಇದೆ. ಆದರೆ ಅದು ಯುರೇಸಿಯಕ್ಕೆ ತೀರ ಹತ್ತಿರದಲ್ಲಿರುವುದರಿಂದ ಅದನ್ನು ಕುರಿತೂ ನಾವು ಯೋಚಿಸಬಹುದು.

ಕಂಡ ಕಡೆಗೆ ತಿರುಗಾಡುತ್ತಿರುವ ಹಳೆಯ ತಂಡದವರು ಬೀಡು ಬಿಟ್ಟು ನಿಂತುಕೊಳ್ಳ ಬಯಸಿದಾಗ ಎಂತಹ ಸ್ಥಳಗಳನ್ನು ಹೆಕ್ಕಿಕೊಳ್ಳ

ಬೇಕಾಗುತಿತ್ತು ಬಲ್ಲೆಯಾ? ಸುಲಭವಾಗಿ ಆಹಾರ ದೊರೆಯುವ ಸ್ಥಳ ವನ್ನೆ ಅವರು ಆರಿಸುತಿದ್ದರು. ಒಕ್ಕಲುತನದಿಂದ ಅಂತಹ ಹೊಲಗಳಲ್ಲಿ ತಮಗೆ ಬೇಕಾದುದನ್ನು ಸ್ವಲ್ಪ ಮಟ್ಟಿಗೆ ಬೆಳೆದುಕೊಳ್ಳುತಿದ್ದರು. ಒಕ್ಕಲು ತನಕ್ಕೆ ನೀರು ಬಹಳ ಬೇಕು. ನೀರಿಲ್ಲದಿದ್ದರೆ ಹೊಲಗಳು ಒಣಗಿ ಬಿಡು ತ್ತವೆ. ಅವುಗಳಲ್ಲಿ ಏನೂ ಬೆಳೆಯುವುದಿಲ್ಲ. ಮಳೆಗಾಲದಲ್ಲಿ ಬೇಕಾ ಗುವಷ್ಟು ಮಳೆ ಬರಲಿಲ್ಲವೆಂದರೆ ಧಾನ್ಯ ಬೆಳೆಯುವುದಿಲ್ಲ. ಅದರಿಂದ ಬರ ಬೀಳುತ್ತದೆ. ತಿನ್ನಲು ಏನೂ ಇಲ್ಲದೆ ಬಡವರು ಉಪವಾಸ ಬೀಳು ತ್ತಾರೆ. ಆದುದರಿಂದ ನೀರು ಬೇಕೇ-ಬೇಕು. ಹಿಂದಿನ ಕಾಲದ ವಸತಿ ಕಾರರು ನೆಲೆಗೊಂಡು ನಿಲ್ಲಲು ಬಹಳ ನೀರಿದ್ದ ಸ್ಥಳಗಳನ್ನೆ ಆರಿಸಿ ಕೊಂಡರು. ಇದು ನಿಜವೆಂದು ನಮಗೆ ಕಂಡು ಬರುತ್ತದೆ.

ಇವರು ಮೆಸಪೊಟಮಿಯ ದೇಶದಲ್ಲಿ ಯುಫ್ರೆಟಿಸ್ ಮತ್ತು ಟೈಗ್ರಿಸ್ ಎಂಬ ಮಹಾ ನದಿಗಳ ನಡುವೆ ಬೀಡು-ಬಿಟ್ಟರು. ಮಿಸ್ರ ದೇಶ (ಇಜಿಪ್ತ)ದಲ್ಲಿ ಇವರಿಗೆ ನೀಲ್ ಎಂಬ ದೊಡ್ಡ ಹೊಳೆ ದೊರೆ ಯಿತು. ಭಾರತ ವರ್ಷದಲ್ಲಿ ಹಳೆಯ ಪಟ್ಟಣಗಳಿದ್ದುದು ಬಹುತರವಾಗಿ ದೊಡ್ಡ ದೊಡ್ಡ ಹೊಳೆಗಳಾದ ಸಿಂಧು, ಗಂಗೆ, ಯಮುನೆಗಳ ಬದಿ ಯಲ್ಲಿ. ಈ ದೊಡ್ಡ ಹೊಳೆಗಳು ಇವರಿಗೆ ಆಹಾರವನ್ನೂ ವಿಪುಲವಾದ ಸಂಪತ್ತನ್ನೂ ಒದಗಿಸುತಿದ್ದುವು. ಇವರಿಗೆ ನೀರಿನ ಅವಶ್ಯಕತೆಯೂ ಬಹಳವಿತ್ತು. ಆದುದರಿಂದ ಇವರು ಇವುಗಳನ್ನು ಪವಿತ್ರ ನದಿಗಳೆಂದು ತಿಳಿಯುತಿದ್ದರು. ಮಿಸ್ರ ದೇಶದಲ್ಲಿ ನೀಲ್ ಹೊಳೆಗೆ 'ತಂದೆ' ಎಂದು ಹೆಸರಿಟ್ಟು ಪೂಜಿಸತೊಡಗಿದರು. ಹಿಂದುಸ್ತಾನದಲ್ಲಿ ಗಂಗಾ ನದಿಗೆ ಹಿಂದಿನ ಕಾಲದಲ್ಲಿ ಪೂಜೆ ಸಲ್ಲುತಿದ್ದುದಲ್ಲದೆ ಅದು ಇಂದಿಗೂ ಪವಿತ್ರ ವಾಗಿದೆ. ಪವಿತ್ರವೆಂದು ಇದಕ್ಕೆ ಗಂಗಾಮಾಯಿ ಎಂದರೆ ಗಂಗಮ್ಮ ಎಂದು ಕರೆಯುತ್ತಾರೆ. ಯಾತ್ರಿಕರು ಗಂಗಾಮಾಯಿ ಕಿ ಜೈ, ಎಂದರೆ ಚಾಂಗುಭಲಾ ಎಂದು ಪರಾಕು ಹಾಕುತ್ತಾರೆ. ಇವು ಇವರಿಗೆ ಬಹಳ ಮಹತ್ವದ ನದಿಗಳಾದುದರಿಂದ ಪೂಜೆಗೆಯ್ಯುತ್ತಾರೆಂದು ತಾನಾಗಿಯೆ ಗೊತ್ತಾಗುತ್ತದೆ. ಈ ನದಿಗಳಿಂದ ಇವರಿಗೆ ಬರಿಯ ನೀರು ದೊರೆಯು ತಿದ್ದುದಲ್ಲದೆ ಒಂದು ಮತ್ತು ಉಸುಕು ಬಿಟ್ಟು ಭೂಮಿ ಇನ್ನೂ

ಕಸುವುಳ್ಳದ್ದಾಗುತಿತ್ತು. ನದಿಯ ನೀರಿನಿಂದ ಮತ್ತು ಒಂಡಿನ ಭೂಮಿಯಿಂದ ಕಾಳು-ಕಡಿ ಚೆನ್ನಾಗಿ ಬೆಳೆದು ಅನ್ನ ದೊರೆಯುತಿತ್ತು. ಆದುದರಿಂದ ನದಿಗಳಿಗೆ ತಂದೆ, ತಾಯಿ, ಅಮ್ಮ ಎಂದು ಕರೆಯುವುದರಲ್ಲಿ ತಪ್ಪೇನು? ಆದರೆ ತಾವು ಮಾಡುವ ಕೆಲಸದ ಉದ್ದೇಶವನ್ನು ಮರೆತು ಬಿಡುವುದು ಜನರ ಸ್ವಭಾವವಾಗಿದೆ. ತಿಳಿವಳಿಕೆ ಇಲ್ಲದೆ ಹೆರರ ಅನುಕರಣೆ ಮಾಡುತ್ತ ನಡೆಯುತ್ತಾರೆ. ನೀಲ್ ಮತ್ತು ಗಂಗಾ ನದಿಗಳು ಅನ್ನ ನೀರನ್ನು ಕೊಡುತ್ತಿರುವುದೇ ಅವು ಪವಿತ್ರವೆಂದು ತಿಳಿಯಲು ಕಾರಣವೆಂದು ನಾವು ನೆನಪಿನಲ್ಲಿಡಬೇಕು.

೧೯

ಹಳೆಯ ಜಗತ್ತಿನೊಳಗಿನ ದೊಡ್ಡ ದೊಡ್ಡ ಪಟ್ಟಣಗಳು

ಜನರು ಮೊದಲು ದೊಡ್ಡ ದೊಡ್ಡ ನದಿಗಳ ಹತ್ತಿರವೂ ಅನ್ನ ನೀರು ಹೇರಳವಾಗಿ ದೊರೆಯುವ ದರಿಗಳಲ್ಲಿಯೂ ಬೀಡು ಬಿಟ್ಟುಕೊಂಡಿದ್ದನ್ನು ನಾವು ನೋಡಿಕೊಂಡೆವು. ಹೊಳೆಗಳ ದಂಡೆಯಲ್ಲಿ ದೊಡ್ಡ ದೊಡ್ಡ ಪಟ್ಟಣಗಳಿದ್ದುವು. ಹೆಸರಾದ ಹಳೆಯ ಕೆಲವು ಪಟ್ಟಣಗಳ ಹೆಸರನ್ನು ನೀನು ಕೇಳಿರಬಹುದು. ಮೆಸಪೊಟೆಮಿಯದಲ್ಲಿ ಬ್ಯಾಬಿಲೋನ್, ನಿನೇವಾ ಮತ್ತು ಅಸ್ಸುರ್ ಎಂಬ ಪಟ್ಟಣಗಳಿದ್ದುವು. ಆದರೆ ಇವೆಲ್ಲವೂ ಬಹಳ ಕಾಲದ ಹಿಂದೆಯೆ ಇಲ್ಲದಂತಾದುವು. ಉಸುಕು ಅಥವಾ ಭೂಮಿಯನ್ನು ಅಗುಳಿದರೆ ಈ ಪಟ್ಟಣಗಳ ಹಳೆಯ ಗುರುತುಗಳು ಈಗಲೂ ದೊರೆಯುತ್ತವೆ. ಸಾವಿರಾರು ವರುಷಗಳಿಂದ ಅವು ಸಂಪೂರ್ಣವಾಗಿ ಉಸುಕು ಮತ್ತು ಮಣ್ಣಿನಿಂದ ಭೂಮಿಯಲ್ಲಿ ಹೂಳಿ ಹೋಗಿವೆ. ಇವು ಇಂತಹ ಸ್ಥಳಗಳಲ್ಲಿದ್ದುವೆಂಬುದು ಕೂಡ ತಿಳಿಯುವುದಿಲ್ಲ. ಇವುಗಳನ್ನು ಶೋಧಿಸಬೇಕೆನ್ನುವವರು ಬಹಳ ಆಳವಾಗಿ ಭೂಮಿಯನ್ನು ಅಗೆಯಬೇಕಾಗುತ್ತದೆ. ಕೆಲವು ಸಲ ಒಂದರ ಮೇಲೊಂದು ಪಟ್ಟಣವಿದ್ದುದು ಗೊತ್ತಾಗುತ್ತದೆ. ಆದರೆ ಒಂದೇ ವೇಳೆಯಲ್ಲಿ ಅವು ಹೀಗೆ ಬೆಳೆದಿರಲಾರವು. ಒಂದು ಪಟ್ಟಣ ಬಹುಶಃ ನೂರಾರು ವರುಷಗಳ ವರೆಗೆ ಬಾಳಿರಬಹುದು. ಅದರಲ್ಲಿ ಆಗಿನ ಜನರು, ಅವರ ಮಕ್ಕಳು, ಮೊಮ್ಮಕ್ಕಳು, ಹುಟ್ಟುತ್ತ ಸಾಯುತ್ತ ಇದ್ದಿರಬಹುದು. ಬರ-ಬರುತ್ತ ಪಟ್ಟಣ ಹಾಳಾಗಿ ಹೋಗಿ ಜನರ ಸಂಖ್ಯೆ ಕಡಿಮೆಯಾಗಿರಬಹುದು. ಹೀಗೆ ಕಟ್ಟ-ಕಡೆಗೆ ಜನ-ವಸತಿಯಿಲ್ಲದೆ ಇಡಿಯ ಊರೆ ಹಾಳು ಕೊಂಪೆಯಾಗುತಿತ್ತು. ಉಸುಕು ಮತ್ತು ಧೂಳಿನಿಂದ ಇಡಿಯ ಊರೆ ಮುಚ್ಚಿಹೋಗುತಿತ್ತು. ಅದನ್ನು ತೆಗೆದು ಹಾಕುವವರು ಯಾರೂ ಇರಲಿಲ್ಲ. ಹೀಗೆ ಎಷ್ಟೋ ವರುಷಗಳ ತನಕ ಉಸುಕು ಮತ್ತು ಮಣ್ಣಿನಲ್ಲಿ ಊರು

ಹೂಳಿ ಹೋಗಿ ಅಲ್ಲಿ ಪಟ್ಟಣವಿತ್ತೆಂಬುದನ್ನೂ ಜನರು ಮರೆತು ಬಿಡುತ್ತಿದ್ದರು. ನೂರಾರು ವರುಷಗಳು ಕಳೆದ ಮೇಲೆ ಹೊಸ ಜನರು ಅಲ್ಲಿಗೆ ಬಂದು ತಿರುಗಿ ನೆಲೆ-ನಿಂತು ಊರನ್ನು ಕಟ್ಟಿಕೊಳ್ಳುತಿದ್ದರು. ಈ ಹೊಸ ಪಟ್ಟಣ ತನ್ನ ಸರತಿ ಬಂದಾಗ ಹಾಳಾಗಿ ಬೀಳು ಕೊಂಪೆಯಾಗುತಿತ್ತು. ಕಾಲ-ಕಳೆದಂತೆ ಅದಾದರೂ ಮಣ್ಣು ಮತ್ತು ಉಸುಕಿನಲ್ಲಿ ಮುಚ್ಚಿ ಹೋಗಿ ಇಲ್ಲದಂತಾಗುತಿತ್ತು. ಹಾಳು ಪಟ್ಟಣಗಳು ಒಂದರ ಮೇಲೊದು ಬೆಳೆಯುವುದು ಹೀಗೆ. ಹೀಗಾಗುವುದು ಬಹುತರ ಉಸುಕಿನ ಪ್ರದೇಶದಲ್ಲಿ. ಯಾಕೆಂದರೆ ಉಸುಕು ಬಹು ಬೇಗನೆ ಎಲ್ಲವನ್ನು ಮುಚ್ಚಿಕೊಳ್ಳುತ್ತದೆ.

ಒಂದು ಊರಿನ ಮೇಲೆ ಮತ್ತೊಂದು ಊರು ಬೆಳೆಯುವುದು; ಗಂಡುಸರ, ಹೆಂಗುಸರ, ಮತ್ತು ಮಕ್ಕಳ ಗುಂಪಿಗೆ ಇಂಬುಗೊಡುವುದು; ಆ ಮೇಲೆ ಮೆಲ್ಲ-ಮೆಲ್ಲನೆ ಹಾಳಾಗುವುದು. ಇದೆಲ್ಲ ವಿಲಕ್ಷಣ ಸಂಗತಿಯಲ್ಲವೆ? ಹಳೆಯ ಊರುಗಳಿದ್ದೆಡೆಯಲ್ಲಿ ಹೊಸ ಊರುಗಳು ಹುಟ್ಟುವವು; ಹೊಸ ಜನರು ಬಂದು ನೆಲೆಸುವರು; ಆ ಮೇಲೆ ಅವೂ ಹಾಳಾಗಿ ಅವುಗಳ ಗುರುತೂ ಇಲ್ಲದಂತಾಗುವುದು. ಇಂತಹ ಊರುಗಳ ಸಂಬಂಧದಲ್ಲಿ ನಾನು ಕೆಲವೇ ಮಾತುಗಳಲ್ಲಿ ಬರೆಯುತ್ತಿರುವೆನು. ಆದರೆ ಈ ಊರುಗಳು ಹುಟ್ಟಿ ಬೆಳೆದು ಇಲ್ಲದಂತಾಗಿ ಮತ್ತೆ ಅವುಗಳ ಸ್ಥಳದಲ್ಲಿ ಬೇರೆ ಊರುಗಳಾಗುವುದಕ್ಕೆ ಎಷ್ಟು ಸಾವಿರ ವರುಷಗಳು ಬೇಕಾಗುವುದೆಂಬುದನ್ನು ಯೋಚಿಸಿ ನೋಡು. ಎಪ್ಪತ್ತು ಇಲ್ಲವೆ ಎಂಬತ್ತು ವರುಷಗಳ ಒಬ್ಬ ಮುದುಕ ಮನುಷ್ಯನನ್ನು ನಾವು ಮುದುಕನೆನ್ನುತ್ತೇವೆ. ಈ ಸಾವಿರಾರು ವರುಷಗಳನ್ನು ಯೋಚಿಸುವಾಗ ಎಪ್ಪತ್ತು ಎಂಬತ್ತು ವರುಷಗಳು ಈಡೇ? ಈ ಊರುಗಳಲ್ಲಿ ಎಷ್ಟೋ ಸಣ್ಣ ಸಣ್ಣ ಹುಡುಗರು ಮೇಲಿಂದ-ಮೇಲೆ ಬೆಳೆದು ದೊಡ್ಡವರಾಗಿ ಸತ್ತು ಹೋಗಿರಬಹುದು! ಆದರೆ ಈಗ ನಮಗೆ ಉಳಿದಿರುವುದು ಬ್ಯಾಲಿಲೋನ್ ಮತ್ತು ನಿನೇವಾ ಪಟ್ಟಣಗಳ ಹೆಸರುಗಳು ಮಾತ್ರ.

ಮತ್ತೊಂದು ಹಳೆಯ ಪಟ್ಟಣ, ದಮಸ್ಕಸ್ ಎಂಬುದು ಸಿರಿಯದಲ್ಲಿತ್ತು. ಆದರೆ ದಮಸ್ಕಸ್ ಹಾಳಾಗಿ-ಹೋಗಲಿಲ್ಲ. ಅದು

ಹಾಗೆಯೇ ಉಳಿದು ಇನ್ನೂ ದೊಡ್ಡ ಪಟ್ಟಣವಾಗಿದೆ. ಈಗ ಜಗತ್ತಿನಲ್ಲಿ ದಮಸ್ಕಸ್ ಪಟ್ಟಣ ಎಲ್ಲಕ್ಕಿಂತ ಹಳೆಯದೆಂದು ಕೆಲವರು ಹೇಳುತ್ತಾರೆ.

ಹಿಂದುಸ್ತಾನದಲ್ಲಿ ನಮ್ಮ ಹಳೆಯ ಪಟ್ಟಣಗಳಿರುವುದೂ ನದಿಗಳ ದಂಡೆಯ ಮೇಲೆಯೇ. ಇಂದ್ರ-ಪ್ರಸ್ತ ಬಹಳ ಹಳೆಯ ಪಟ್ಟಣಗಳಲ್ಲೊಂದಾಗಿತ್ತು. ಅದು ಇದ್ದುದು ದಿಲ್ಲಿಯ ಹತ್ತಿರ ಎಲ್ಲಿಯೊ ಒಂದು-ಕಡೆ. ಆದರೆ ಇಂದ್ರ-ಪ್ರಸ್ತ ಈಗ ಉಳಿದಿಲ್ಲ. ವಾರಣಾಸಿ ಅಥವಾ ಕಾಶೀ ಪಟ್ಟಣವಾದರೂ ಬಹಳ ಹಳೆಯದು. ಬಹುಶಃ ಜಗತ್ತಿನಲ್ಲಿ ಉಳಿದಿರುವ ತೀರ ಹಳೆಯ ಪಟ್ಟಣಗಳಲ್ಲಿ ಅದೂ ಒಂದು. ಅಲಹಾಬಾದು, ಕಾನಪುರ, ಪಾಟ್ನಾ, ಮತ್ತು ನಿನಗೆ ಗೊತ್ತಿದ್ದಿರಬಹುದಾದ ಇನ್ನೂ ಕೆಲವು ಪಟ್ಟಣಗಳಿರುವುದೂ ಹೊಳೆಗಳ ದಂಡೆಯ ಮೇಲೆ. ಆದರೆ ಇವು ಅಷ್ಟು ಹಳೆಯವಲ್ಲ. ಪ್ರಯಾಗ ಅಥವಾ ಅಲಹಾಬಾದು ಮತ್ತು ಪಾಟ್ನಾ ಅಥವಾ ಪಾಟಲೀಪುತ್ರ ಪಟ್ಟಣಗಳು ಸ್ವಲ್ಪ ಹಳೆಯವಾಗಿರುವವು.

ಇದರಂತೆ ಚೀನದಲ್ಲಿಯೂ ಪುರಾತನ ಪಟ್ಟಣಗಳಿವೆ.

೨೦

ಮಿಸ್ರ ದೇಶ ಮತ್ತು ಕ್ರೀಟ್

ಅತಿ ಹಿಂದಿನ ಕಾಲದ ಈ ಪಟ್ಟಣಗಳಲ್ಲಿ ಯಾವ ತರಹದ ಜನರಿದ್ದರು? ಅವರು ಕಟ್ಟಿದ ಕಟ್ಟಡ ಮತ್ತು ಮಂದಿರಗಳಿಂದ ಅವರನ್ನು ಕುರಿತು ನಾವು ಅಲ್ಪ-ಸ್ವಲ್ಪವನ್ನು ತಿಳಿಯಬಹುದು. ಇದಲ್ಲದೆ ಅವರು ಬರೆದಿರುವ ಕಲ್ಲಿನ ಬರಹಗಳಿಂದಲೂ ಹಲ-ಕೆಲವು ಸಂಗತಿಗಳು ಗೊತ್ತಾಗುತ್ತವೆ. ಆಗಿನ ಕಾಲದ ಹೆಚ್ಚು ಸಂಗತಿಗಳನ್ನು ಹೇಳುವ ತೀರ ಹಳೆಯ ಕೆಲವು ಹೊತ್ತಗೆಗಳೂ ನಮಗೆ ದೊರೆಯುತ್ತವೆ.

ಮಿಸ್ರ ದೇಶದ ಲಕ್ಸರ್ ಮತ್ತು ಇತರ ಕಡೆಗಳಲ್ಲಿ ಪಿರೆಮಿಡ್ಡುಗಳು—ಒಂದು ತರದ ಗುಮ್ಮಟಗಳು—, ಸ್ಫಿಂಕ್ಸ್‌ಗಳು—ಸಿಂಹನಾರಿಗಳು—, ಮತ್ತು ದೊಡ್ಡ-ದೊಡ್ಡ ದೇಗುಲಗಳ ಹಾಳುಗಳು ನಮಗೆ ಕಾಣುತ್ತವೆ. ನಾವು ಸುಯೇಜು ಕಾಲುವೆಯೊಳಗಿಂದ ಹೋಗುವಾಗ ಅವು ನಮಗೆ ತೀರ ಹತ್ತಿರದಲ್ಲಿದ್ದರೂ ನೀನು ಅವುಗಳನ್ನು ನೋಡಲಿಲ್ಲ. ಆದರೆ ಅವುಗಳ ಚಿತ್ರಗಳನ್ನು ನೀನು ನೋಡಿರುವೆ. ಈ ಚಿತ್ರಗಳ ಅಂಚೆ-ಕಾರ್ಡುಗಳು ನಿನ್ನಲ್ಲಿರಬಹುದು. ಸ್ಫಿಂಕ್ಸ್ ಎಂದರೆ ಹೆಂಗಸಿನ ಮೋರೆಯ ಸಿಂಹ. ಅದು ಬಹಳ ದೊಡ್ಡದಾಗಿದೆ. ಅದನ್ನು ಮಾಡಿದುದು ಯಾಕೆ, ಮತ್ತು ಅದು ಏನು ಸೂಚಿಸುತ್ತದೆಂಬುದು ಯಾರಿಗೂ ತಿಳಿದಿಲ್ಲ. ಹೆಂಗುಸಿನ ಮೋರೆಯ ಮೇಲೆ ನಗುವಿನ ಕಳೆ ಇರುವುದು. ಇದು ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತಿದೆ. 'ಅವನು ಸ್ಫಿಂಕ್ಸಿನಂತಿರುವನು' ಎಂದರೆ ಅವನ ವಿಷಯದಲ್ಲಿ ಏನೂ ತಿಳಿಯದೆಂದರ್ಥ.

ಪಿರೆಮಿಡ್ಡುಗಳೂ ಬಲು ದೊಡ್ಡ ಕಟ್ಟಡಗಳು. ಇವು ವಸ್ತುತಃ ಮಿಸ್ರ ದೇಶದೊಳಗಿನ ಹಿಂದಿನ ಅರಸರ ಗುಮ್ಮಟಗಳು. ಈ ಅರಸರ ಹೆಸರು ಫರೊ ಎಂದು. ಲಂಡನ್ ಪಟ್ಟಣದ ವಸ್ತು-ಸಂಗ್ರಹಾಲಯದಲ್ಲಿ ಮಿಸ್ರ ದೇಶದ 'ಮಮ್ಮಿ'ಗಳನ್ನು ನೋಡಿದ್ದುದು ನಿನಗೆ ನೆನಪಿರುವುದೆ? ಪಶುವಿನ ಇಲ್ಲವೆ ಮನುಷ್ಯನ ಹೆಣ ಕೊಳೆಯಬಾರದೆಂದು ಅದಕ್ಕೆ

ಎಣ್ಣೆ, ಮಸಾಲೆಯನ್ನು ಹಚ್ಚಿಡುತಿದ್ದರು. ಇದೇ ಮಮ್ಮಿ. ಫರೋ ಅರಸರು ಸತ್ತ ಮೇಲೆ ಅವರ ಶರೀರಗಳನ್ನು 'ಮಮ್ಮಿ' ಮಾಡಿ ಈ ದೊಡ್ಡ ಗುಮ್ಮಟಗಳಲ್ಲಿಡುತಿದ್ದರು. ಈ ಮಮ್ಮಿಗಳ ಹತ್ತಿರ ಬೆಳ್ಳಿ ಮತ್ತು ಬಂಗಾರದ ಒಡವೆಗಳು, ಅರಸರು ಕುಳ್ಳಿರುವ ಸಾಮಾನುಗಳು, ಆಹಾರ ಮುಂತಾದುವುಗಳನ್ನು ಇಡುತ್ತಿದ್ದರು. ಅವರು ಸತ್ತ ಮೇಲೆ ಅವು ಅವರಿಗೆ ಬೇಕಾಗಬಹುದೆಂದು ಜನರ ತಿಳಿವಳಿಕೆ. ಎರಡು. ಮೂರು ವರುಷಗಳ ಹಿಂದೆ ಕೆಲವು ಜನರು ಇಂತಹ ಒಂದು ಗುಮ್ಮಟ ದಿಂದ ಒಬ್ಬ ಫರೋವಿನ ದೇಹವನ್ನು ಹುಡುಕಿ ತೆಗೆದರು. ಈ ಅರಸನ ಹೆಸರು ತುತಾಂಖಮೆನ್ ಎಂದು. ಇವನ ಹೆಣದ ಬಳಿಯಲ್ಲಿ ಚೆಲು-ವಾದ, ಬೆಲೆಯುಳ್ಳ ಎಷ್ಟೋ ಒಡವೆಗಳಿದ್ದುವು.

ಆಗಿನ ಕಾಲದಲ್ಲಿ ಮಿಸ್ರ ದೇಶದಲ್ಲಿ ಕೂಡ ಸಾಗುವಳಿಗೂ ನೀರಾವರಿಗೂ ಕೆರೆ-ಕಾಲುವೆಗಳನ್ನು ಕಟ್ಟಿಸಿದ್ದರು. ಅಲ್ಲಿ ಮೆರುಡು ಎಂಬುದೊಂದು ಹೆಸರಾದ ಕೆರೆ ಇತ್ತು. ಇದರಿಂದ, ಪೂರ್ವ ಕಾಲದ ಮಿಸ್ರ ದೇಶದ ಜನರು ಎಷ್ಟು ಬುದ್ಧಿವಂತರು ಮತ್ತು ಚತುರರಾಗಿದ್ದರೆಂದು ಗೊತ್ತಾಗುತ್ತದೆ. ಇಂತಹ ಕೆರೆ, ಕಾಲುವೆ, ಗುಮ್ಮಟಗಳನ್ನು ಕಟ್ಟ ಬೇಕಾದರೆ ಒಳ್ಳೇ ಶಿಲ್ಪ-ಶಾಸ್ತ್ರ ಬಲ್ಲವರು ಅವರಲ್ಲಿದ್ದಿರಬಹುದು.

ಕ್ರೀಟ್ ಅಥವಾ ಕೆಂಡಿಯಾ ಎಂಬುವ ಸಣ್ಣ ನಡುಗಡ್ಡೆ ಭೂ-ಮಧ್ಯ ಸಮುದ್ರದಲ್ಲಿದೆ. ಪೋರ್ಟ್-ಸಯ್ಯದಿನಿಂದ ವಿನಿಸಿಗೆ ನಾವು ಹೋದುದು ಅದರ ಹತ್ತಿರದಿಂದಲೇ. ಪ್ರಾಚೀನ ಕಾಲದಲ್ಲಿ ಈ ನಡು-ಗಡ್ಡೆಯಲ್ಲಿ ಉತ್ತಮವಾದ ಒಂದು ಸಂಸ್ಕೃತಿ ಇತ್ತು. ಕ್ರೀಟ್ ದೇಶದ ನೋಸಸ್ಸಿನಲ್ಲಿ ಬಲು ದೊಡ್ಡದೊಂದು ಅರಮನೆ ಇದೆ. ಈ ಅರಮನೆಯ ಬೀಳು ಕುರುಹುಗಳು ಇನ್ನೂ ಉಳಿದಿವೆ. ಅರಮನೆಯೊಳಗೆ ನೀರ್ಮನೆ ಮತ್ತು ನೀರಿನ ಕೊಳವೆಗಳಿವೆ. ತಿಳಿವಳಿಕೆ ಇಲ್ಲದ ಜನರು, ಇವು ಈಗಿನ ಕಾಲದ ಕೃತಿಗಳೆಂದು ನಂಬುತ್ತಾರೆ. ಸುಂದರವಾದ ಗಡಿಗೆ, ಮಡಿಕೆ, ಕಲ್ಲಿನಲ್ಲಿ ಕೊರೆದ ಗೊಂಬೆ, ಚಿತ್ರಗಳು, ಧಾತು ಮತ್ತು ಆನೆಕೋರೆಯ ಕುಸುರಿನ ಕೆಲಸಗಳು ಅಲ್ಲಿ ಇವೆ.

ಈ ಕ್ರೀಟ್ ನಡು-ಗಡ್ಡೆಯಲ್ಲಿ ಜನರು ಸುಖವಾಗಿದ್ದು ಬಹಳ ಮುಂದು ವರಿದಿದ್ದರು.

ನೀನು ಮಿಡೆಸ್ ಎಂಬ ಅರಸನ ಕತೆಯನ್ನು ಓದಿರಬಹುದು. ಅವನು ಮುಟ್ಟಿದ್ದೆಲ್ಲ ಚಿನ್ನವಾಗುತ್ತಿತ್ತು. ಅದರಿಂದ ಅವನು ಬಹಳ ತೊಂದರೆಗೊಳಗಾದನು. ಮುಟ್ಟಿದ್ದೆಲ್ಲ ಮಿಸುನಿಯಾಗುತ್ತಿದ್ದುದರಿಂದ ಅವನು ಉಣ್ಣಲಾರದವನಾದನು. ಬಂಗಾರವನ್ನು ಉಣ್ಣಲಾದೀತೆ? ಅವನ ಆಸೆ-ಬುರುಕತನಕ್ಕೆ ತಕ್ಕ ಶಿಕ್ಷೆಯಾಯಿತು. ಆದರೆ ಇದೊಂದು ಕಟ್ಟು-ಕತೆ. ಈ ಕತೆ ಇರುವುದು, ಬಂಗಾರ ಜನರು ತಿಳಿದಿರುವಷ್ಟು ಉಪಯೋಗದ್ದೂ ಅಲ್ಲ, ಒಳ್ಳೆಯದೂ ಅಲ್ಲವೆಂದು ತೋರಿಸಲಿಕ್ಕೆ ಮಾತ್ರ.

ಕ್ರೀಟ್ ದೇಶದ ಕತೆ ಇನ್ನೊಂದಿದೆ. ಅದನ್ನು ನೀನು ಕೇಳಿರಬಹುದು. ಅದು ಮಿನೋಟಾರ್ ಎಂಬ ರಾಕ್ಷಸನ ಕತೆ. ಈ ಮಿನೋಟಾರ್ ರಾಕ್ಷಸನೆಂದರೆ ಅರ್ಧ ಮನುಷ್ಯ ಅರ್ಧ ಎತ್ತು ಕೂಡಿದ ಒಂದು ಪ್ರಾಣಿ. ಇದಕ್ಕೆ ನರ-ವೃಷಭವೆನ್ನಬಹುದು. ನಮ್ಮಲ್ಲಿ ನರಸಿಂಹನಿಲ್ಲವೆ? ಹಾಗೆ. ಹರೆಯದ ಗಂಡುಸು ಹೆಂಗುಸನ್ನು ಅದಕ್ಕೆ ತಿನ್ನಲು ಕೊಡುತ್ತಿದ್ದರಂತೆ! ತಿಳಿಯದ ವಸ್ತುವಿನ ಹೆದರಿಕೆಯಿಂದ ಧರ್ಮದ ಕಲ್ಪನೆ ಹುಟ್ಟಿತೆಂದು ನಾನು ನಿನಗೆ ಮೊದಲೇ ಹೇಳಿದ್ದೇನೆ. ಈ ಅಂಜಿಕೆಯಿಂದಲೆ ನಮ್ಮ ಸುತ್ತು-ಮುತ್ತು ನಡೆದಿರುವ ಸಂಗತಿಗಳನ್ನು ಮತ್ತು ಪ್ರಕೃತಿಯನ್ನು ಜನರು ಅರಿಯದೆ ತಿಳಿಗೇಡಿತನದ ಎಷ್ಟೋ ಕೆಲಸಗಳನ್ನು ಮಾಡುತ್ತಿರುವರು. ಇದರಂತೆ, ಹುಡುಗ-ಹುಡುಗೆಯರನ್ನು ಆ ಕಾಲ್ಪನಿಕ ರಾಕ್ಷಸನಿಗೆ ಬಲಿ ಕೊಡುತಿದ್ದಿರಬಹುದು. ಇಂತಹ ರಾಕ್ಷಸನು ಎಂದಾದರೂ ಇದ್ದಿರಬೇಕೆಂದು ನಾನಂತೂ ನಂಬುವುದಿಲ್ಲ.

ಆ ಹಿಂದಿನ ಕಾಲದಲ್ಲಿ ಜಗತ್ತಿನಲ್ಲೆಲ್ಲ ನರ-ಬಲಿ ಕೊಡುವ ರೂಢಿ ಇತ್ತು. ಎಂದರೆ ಜನರು ತಾವು ಪೂಜಿಸುತ್ತಿದ್ದ ಕಾಲ್ಪನಿಕ ದೇವತೆಗಳಿಗೆ ಗಂಡುಸು-ಹೆಂಗುಸರನ್ನು ಬಲಿಕೊಡುತ್ತಿದ್ದರು. ಮಿಸ್ರ ದೇಶದಲ್ಲಿ

ಹುಡಿಗೆಯರನ್ನು ನೀಲ್ ನದಿಯಲ್ಲಿ ಎಸೆಯುತ್ತಿದ್ದರು, ನೀಲಪ್ಪನಿಗೆ ಸಂತೋಷವಾಗುವುದೆಂದು!

ಈಗ ಜಗತ್ತಿನಲ್ಲಿ ಯಾವುದೊ ಒಂದು ಮೂಲೆಯಲ್ಲಿ, ಬಹಳ ದೂರ, ನರಬಲಿ ಕೊಡುತ್ತಿರುವರು. ಸುದೈವದಿಂದ ಇದು ಇನ್ನೆಲ್ಲಿಯೂ ನಡೆದಿಲ್ಲ. ಆದರೆ ಈಗಿನ ಕಾಲದಲ್ಲಿಯೂ ಕೆಲವರು ದೇವರ ಸಂತೋಷಕ್ಕಾಗಿ ಪಶುಗಳನ್ನು ಕಡಿದು ಬಲಿ ಕೊಡುತ್ತಾರೆ. ಪೂಜೆಯ ಇದೊಂದು ವಿಲಕ್ಷಣ ಪದ್ಧತಿ!

೨೧

ಚೀನ ಮತ್ತು ಹಿಂದುಸ್ತಾನ

ಮೆಸಪೊಟಮಿಯ, ಮಿಸ್ರ ದೇಶ, ಮತ್ತು ಭೂ-ಮಧ್ಯ ಸಮುದ್ರದಲ್ಲಿಯ ಚಿಕ್ಕ ನಡು-ಗಡ್ಡೆಯಾದ ಕ್ರೀಟನಲ್ಲಿ ಪ್ರಾಚೀನ ಸಂಸ್ಕೃತಿಗಳು ಹುಟ್ಟಿ ಬೆಳೆದುವೆಂಬುದನ್ನು ನಾವು ತಿಳಿದುಕೊಂಡೆವು. ಚೀನ ಮತ್ತು ಭರತ ಖಂಡದಲ್ಲಿಯಾದರೂ ಅದೇ ಕಾಲದಲ್ಲಿ ಸ್ವತಂತ್ರವಾಗಿ ಹಿರಿಯ ಸಂಸ್ಕೃತಿಗಳು ತಲೆ-ದೋರಿ ಬೆಳೆದುವು.

ಬೇರೆ ಕಡೆಗೆ ಜನರು ದೊಡ್ಡ ನದಿಗಳ ನಡುವಿನ ಕೊಳ್ಳಗಳಲ್ಲಿ ಬೀಡು ಬಿಟ್ಟಿರುವಂತೆ ಚೀನದಲ್ಲಿಯೂ ನೆಲಿಸಿದರು. ಮಂಗೋಲಿಯನ್ನರೆಂದು ಹೆಸರಿರುವುದು ಈ ಜನರಿಗೇ. ಇವರು ಕಂಚಿನ ಸುಂದರವಾದ ಪಾತ್ರೆಗಳನ್ನು ಮಾಡುತ್ತಿದ್ದರು. ಅನಂತರ ಕಬ್ಬಿಣದ ಪಾತ್ರೆಗಳನ್ನು ಮಾಡತೊಡಗಿದರು. ಕಾಲುವೆಗಳೂ ಸುಂದರವಾದ ಕಟ್ಟಡಗಳೂ ಕಟ್ಟಲಾದುವು. ಬರೆಯುವ ಹೊಸ ಪದ್ಧತಿಯೊಂದು ತಲೆದೋರಿತು. ನಾವು ಬರೆಯುವ ಹಿಂದಿ, ಇಂಗ್ಲೀಷು, ಉರ್ದು ಲಿಪಿಗಿಂತ ಅದು ತೀರ ಬೇರೆಯಾದುದು. ಅದೊಂದು ತರದ ಚಿತ್ರ ಲಿಪಿ. ಪ್ರತಿಯೊಂದು ಶಬ್ದ, ಒಮ್ಮೊಮ್ಮೆ ಪ್ರತಿಯೊಂದು ಸಣ್ಣ ವಾಕ್ಯ ಒಂದು ಚಿತ್ರವೇ ಆಗಿರುತಿತ್ತು. ಪ್ರಾಚೀನ ಮಿಸ್ರ ದೇಶ, ಕ್ರೀಟು, ಮತ್ತು ಬೆಬಿಲೋನಿನಲ್ಲಿಯೂ ಚಿತ್ರ-ಲಿಪಿ ಬಳಕೆಯಲ್ಲಿತ್ತು. ಇದಕ್ಕೆ ಈಗ ಹಿರಿಗ್ಲಿಫಿಕ್ ಲಿಪಿ ಎಂದು ಹೆಸರು. ಪ್ರಾಚೀನ ವಸ್ತು ಸಂಗ್ರಹಾಲಯುಗಳಲ್ಲಿಯೂ ಕೆಲವು ಪುಸ್ತಕಗಳಲ್ಲಿಯೂ ಈ ಲಿಪಿಯನ್ನು ನೀನು ನೋಡಿರಬಹುದು. ಮಿಸ್ರ ದೇಶ ಮತ್ತು ಪಶ್ಚಿಮ ದೇಶಗಳಲ್ಲಿ ಈ ಲಿಪಿ ಹಳೆಯ ಕಟ್ಟಡಗಳಲ್ಲಿ ಮಾತ್ರ ಕಾಣ ಸಿಗುತ್ತದೆ. ಅಲ್ಲಿ ಈ ಲಿಪಿಯನ್ನು ಬಹಳ ಕಾಲದ ವರೆಗೆ ಯಾರೂ ಬಳಸಲಿಲ್ಲ. ಆದರೆ ಚೀನದೊಳಗಿನ ಬರಹ ಈಗಲೂ ಒಂದು ಬಗೆಯ ಚಿತ್ರ-ಲಿಪಿಯಾಗಿದೆ. ಅದನ್ನು ಬರೆಯುವುದು ಮೇಲಿನಿಂದ ಕೆಳಗೆ. ನೀವು ಅಂಕೆ-ಮಗ್ಗಿಗಳನ್ನು ಬರೆವ ಹಾಗೆ. ಕನ್ನಡ ಮತ್ತು ಇಂಗ್ಲೀಷಿನಂತೆ ಎಡದಿಂದ ಬಲಕ್ಕೆ ಇಲ್ಲವೆ ಉರ್ದುವಿನಂತೆ ಬಲದಿಂದ ಎಡಕ್ಕೆ ಬರೆಯುವುದಲ್ಲ.

ಹಿಂದುಸ್ತಾನದಲ್ಲಿ ಹಾಳಾಗಿ ಉಳಿದ ಹಳೆಯ ಎಷ್ಟೋ ಕಟ್ಟಡಗಳು ನೆಲದಲ್ಲಿ ಅಥವಾ ಉಸುಕಿನಲ್ಲಿ ಇಂದಿಗೂ ಹೂಳಿರಬಹುದು. ಅವುಗಳನ್ನು ಅಗೆದು ಹೊರಗೆಡಹುವ ವರೆಗೆ ಅವು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಆದರೆ ಇತ್ತೀಚೆಗೆ ಇಂತಹ ಕೆಲವು ಹಳೆಯ ಬೀಳುಗಳನ್ನು ಉತ್ತರ ದೇಶದಲ್ಲಿ ಹುಡುಕಿ ತೆಗೆದಿದ್ದಾರೆ. ಬಹು ಪ್ರಾಚೀನ ಕಾಲದಲ್ಲಿ, ಆರ್ಯರು ಹಿಂದುಸ್ತಾನಕ್ಕೆ ಬರುವ ಮೊದಲೆ ಇಲ್ಲಿರುತಿದ್ದುದು ದ್ರಾವಿಡ ಜನರು. ಅವರ ಸಂಸ್ಕೃತಿ ಬಲು ಚೆನ್ನಾದುದು. ಬೇರೆ ಬೇರೆ ದೇಶಗಳೊಡನೆ ಅವರು ವ್ಯಾಪಾರ ಮಾಡುತಿದ್ದರು. ಮೆಸೊಪೊಟೆಮಿಯ ಮತ್ತು ಮಿಸ್ರ ದೇಶಕ್ಕೆ ಸಾಮಾನುಗಳನ್ನು ಕಳಿಸುತಿದ್ದರು. ಸಮುದ್ರದ ಆಚೆಗೆ ಅಕ್ಕಿ, ಮೆಣಸು ಮುಂತಾದ ಮಸಾಲೆಯ ಸಾಮಾನುಗಳನ್ನು ಮತ್ತು ಮನೆ ಕಟ್ಟಲು ಬೇಕಾಗುವ ತೇಗಿನ ತೊಲೆಗಳನ್ನು ವೆಗ್ಗಳವಾಗಿ ಕಳಿಸುತಿದ್ದರು. ಮೆಸೊಪೊಟೆಮಿಯದಲ್ಲಿಯ ಉರ್ ಎಂಬ ಪಟ್ಟಣದ ಕೆಲವು ಪುರಾತನ ಅರಮನೆಗಳು ದಕ್ಷಿಣ ಹಿಂದುಸ್ತಾನದಿಂದ ಕಳಿಸಿದ ತೇಗಿನಿಂದ ಕಟ್ಟಲಾದುವುಗಳೆಂದು ಜನರು ಹೇಳುತ್ತಾರೆ. ಇದಲ್ಲದೆ ದೊಡ್ಡ ಜಾತಿಯ ಮಂಗ, ನವಿಲು, ಆನೆಯ ಕೋರೆ, ಮುತ್ತು ಮತ್ತು ಬಂಗಾರಗಳನ್ನು ಹಿಂದುಸ್ತಾನದಿಂದ ಪಾಶ್ಚಾತ್ಯ ದೇಶಗಳಿಗೆ ಕಳಿಸುತಿದ್ದರಂತೆ. ಆ ಕಾಲದಲ್ಲಿ ಭರತ ಖಂಡ ಮತ್ತು ಉಳಿದ ದೇಶಗಳ ನಡುವೆ, ಚೆನ್ನಾದ ವ್ಯಾಪಾರ ನಡೆಯುತಿದ್ದಿರಬೇಕು. ಜನರು ಸುಸಂಸ್ಕೃತರಿದ್ದರೆ ಮಾತ್ರ ವ್ಯಾಪಾರ ನಡೆಯುವುದು.

ಹಿಂದುಸ್ತಾನ ಮತ್ತು ಚೀನ, ಎರಡು ದೇಶಗಳಲ್ಲಿಯೂ ಆಗ ಸಣ್ಣ-ಪುಟ್ಟ ರಾಜ್ಯ ಮತ್ತು ಪಾಳಯಗಳಿದ್ದುವು. ಎರಡೂ ನಾಡುಗಳಲ್ಲಿ, ದೇಶವೆಲ್ಲವೂ ಒಂದೇ ಆಡಳಿತಕ್ಕೆ ಎಂದೂ ಒಳಪಟ್ಟಿರಲಿಲ್ಲ. ಕೆಲವು ಹಳ್ಳಿಗಳನ್ನು ಮತ್ತು ಭೂಮಿಗಳನ್ನು ಒಳಗೊಂಡ ಪ್ರತಿಯೊಂದು ಪಟ್ಟಣ ಒಂದು ರಾಜ್ಯವಾಗುತಿತ್ತು. ಈ ರಾಜ್ಯಗಳಿಗೆ 'ನಗರ-ರಾಜ್ಯ' ಗಳೆಂದು ಹೆಸರು. ಆಗಿನ ತೀರ ಹಿಂದಿನ ಕಾಲದಲ್ಲಿಯೂ ಇವುಗಳೊಳಗಿನ ಎಷ್ಟೋ ರಾಜ್ಯಗಳಲ್ಲಿ 'ಪ್ರಜಾ ಪ್ರಭುತ್ವ' ಬಳಕೆಯಲ್ಲಿತ್ತು. ಅರಸರು ಇರಲಿಲ್ಲ. ಇವುಗಳನ್ನು, ಜನರು ಆರಿಸಿದ ಒಂದು ತರದ ಪಂಚಾ

ಯತು ಆಳುತಿತ್ತು. ಆದರೆ ಇವುಗಳಲ್ಲಿ ಕೆಲವು ಚಿಕ್ಕ ಸಂಸ್ಥಾನಗಳಿದ್ದುವು. 'ನಗರ ರಾಜ್ಯ'ಗಳು ಬೇರೆ ಬೇರೆಯಾಗಿ ಸ್ವತಂತ್ರವಾಗಿದ್ದರೂ ಕೆಲವೊಮ್ಮೆ ಅವು ತಮ್ಮ-ತಮ್ಮಲ್ಲಿ ಸಹಕರಿಸುತಿದ್ದುವು. ಎಂದರೆ ಅವು ಒಂದಕ್ಕೊಂದು ನೆರವಾಗುತ್ತಿದ್ದುವು. ಒಮ್ಮೊಮ್ಮೆ ಚಿಕ್ಕ-ಚಿಕ್ಕ ಸಂಸ್ಥಾನಗಳಿಗೆ ದೊಡ್ಡ ಸಂಸ್ಥಾನವೊಂದು ಮುಂದಾಳಾಗುತಿತ್ತು.

ಚೀನದಲ್ಲಿ **ಈ** ಸಣ್ಣ-ಪುಟ್ಟ ಸಂಸ್ಥಾನಗಳು ಒಂದು ದೊಡ್ಡ ಸಾಮ್ರಾಜ್ಯಕ್ಕೆ ಇಂಬು-ಗೊಟ್ಟವು. ಹಿರಿದಾದ ಗೋಡೆಯನ್ನು ಕಟ್ಟಿದುದು **ಈ** ಸಾಮ್ರಾಜ್ಯ ಯುಗದಲ್ಲಿಯೆ. ಈ ಗೋಡೆಯ ವಿಷಯದಲ್ಲಿ ನೀನು ಓದಿರುವೆ. ಎಂತಹ ಅದ್ಭುತ ಗೋಡೆಯದು! ಉಳಿದ ಮಂಗೋಲಿಯ ಜನಾಂಗಗಳು ಚೀನದಲ್ಲಿ ಒಳ-ನುಗ್ಗಿ ಬರಬಾರದೆಂದು ಸಮುದ್ರದಿಂದ ಉತ್ತರದ ಪರ್ವತಗಳ ವರೆಗೆ ಅದನ್ನು ಕಟ್ಟಲಾಗಿದೆ. **ಈ** ಗೋಡೆ ೧೪೦೦ ಮೈಲು ಉದ್ದ, ೨೦ರಿಂದ ೩೦ ಅಡಿ ಎತ್ತರ, ಮತ್ತು ೨೫ ಅಡಿ ಅಗಲವಾಗಿರುವದು. ನಡು-ನಡುವೆ ಕೋಟೆಗಳೂ ಹೂಡೆಗಳೂ ಇವೆ. ಹಿಂದುಸ್ತಾನದಲ್ಲಿ ಇಂತಹ ಗೋಡೆಯನ್ನು ಕಟ್ಟಿದ್ದರೆ ಅದು ಉತ್ತರದಲ್ಲಿ ಲಾಹೋರಿನಿಂದ, ದಕ್ಷಿಣದಲ್ಲಿ ಮದ್ರಾಸಿನ ವರೆಗೆ ಬೆಳೆಯುತಿತ್ತು. **ಈ** ದೊಡ್ಡ ಗೋಡೆ ಇಂದಿನ ತನಕ ಉಳಿದಿದೆ. ನೀನು ಚೀನಕ್ಕೆ ಹೋದರೆ ಇದನ್ನು ನೋಡಬಲ್ಲೆ.

೨೨

ಕಡಲ ಪಯಣ ಮತ್ತು ವ್ಯಾಪಾರ

ಕುತೂಹಲವನ್ನು ಹುಟ್ಟಿಸುವ ಇನ್ನೊಂದು ಪ್ರಾಚೀನ ಜನಾಂಗ ಫಿನಿಶಿಯನ್ನರದು. ಫಿನಿಶಿಯನ್ನರು ಯಹೂದಿ ಮತ್ತು ಅರಬರ ಪಂಗಡಕ್ಕೆ ಸೇರಿದವರು. ಇವರು ಹೆಚ್ಚಾಗಿ ಏಸಿಯಾ ಮೈನರಿನ ಪಶ್ಚಿಮ ದಂಡೆ-ಎಂದರೆ ಈಗಿನ ತುರ್ಕಸ್ಥಾನದಲ್ಲಿ ಇರುತಿದ್ದರು. ಭೂ-ಮಧ್ಯ ಸಮುದ್ರದ ದಂಡೆಯ ಮೇಲೆ ಏಕರ್ (Acre), ಟೈರ್ ಮತ್ತು ಸಿಡಾನ್ ಎಂಬುವು ಇವರ ಮುಖ್ಯ ಪಟ್ಟಣಗಳು. ಇವರು ವ್ಯಾಪಾರಕ್ಕಾಗಿ ಕಡಲಿನಲ್ಲಿ ಬಹಳ ದೂರದ ವರೆಗೆ ಪ್ರವಾಸ ಮಾಡುವವರೆಂದು ಹೆಸರಾಗಿದ್ದರು. ಭೂ-ಮಧ್ಯ ಸಮುದ್ರದಲ್ಲೆಲ್ಲ ಕಡೆಗೂ, ಕಡಲ ಹಾದಿಯಿಂದ ಇಂಗ್ಲಂಡಿನ ವರೆಗೂ ಇವರು ಹೋಗುತ್ತಿದ್ದರು. ಇವರು ಹಿಂದುಸ್ತಾನಕ್ಕೂ ಬಂದಿರಬಹುದು.

ಈ ಕಾಲದಲ್ಲಿ ನಮಗೆ ಚಿತ್ತಾಕರ್ಷಕವಾದ ಎರಡು ಸಂಗತಿಗಳು ಕಾಣ ಸಿಗುತ್ತವೆ. ಅವು ಯಾವುವೆಂದರೆ: ಸಮುದ್ರ ಪ್ರವಾಸ ಮತ್ತು ವ್ಯಾಪಾರ. ಇವುಗಳಿಗೆ ಒಂದರಿಂದ ಇನ್ನೊಂದಕ್ಕೆ ನೆರವು ಸಿಕ್ಕಿತು. ಆದರೆ ಈಗ ನಮ್ಮ ಕಣ್ಣಿಗೆ ಬೀಳುವ ಹಡಗು ಮತ್ತು ನೌಕೆಗಳು ಆಗ ಇರಲೇ ಇಲ್ಲ. ಮೊದಲಿನ ನಾವೆಗಳು ಬರಿಯ ಪೊಳ್ಳು-ಗೈದ ಮರದ ಬೊಡ್ಡೆಗಳಿದ್ದಿರಬೇಕು. ಇವುಗಳನ್ನು ಹುಟ್ಟು ಹಾಕಿ ನಡಿಯಾಡಿಸುತಿದ್ದರು. ಒಮ್ಮೊಮ್ಮೆ ಗಾಳಿಯನ್ನು ತಡೆದು ಹಿಡಿಯುವುದಕ್ಕಾಗಿ ಹಾಯಿಯನ್ನು ಕಟ್ಟುತಿದ್ದರು. ಆಗಿನ ಕಾಲದ ಜಲ-ಪರ್ಯಟನ ಹುರುಪು ಗೊಳಿಸುವುದಾಗಿದ್ದಿರಬೇಕು. ಸಣ್ಣ-ಸಣ್ಣ ನವಿಗಳು ಹುಟ್ಟಾಡಿಸುತ್ತ ಹಾಯಿಗಳೊಂದಿಗೆ ಪಶ್ಚಿಮ ಸಮುದ್ರವನ್ನು ದಾಟುತ್ತಿರುವುದನ್ನು ಮನಸ್ಸಿನಲ್ಲಿ ಯೋಚಿಸು. ಈ ನಾವೆಯಲ್ಲಿ ಅತ್ತಿತ್ತ ಸರಿದಾಡಲು ಎಡೆ ಇರುತ್ತಿರಲಿಲ್ಲ. ತೀರ ಸ್ವಲ್ಪ ಗಾಳಿಯಿಂದಲೇ ಇದು ಗಿರ-ಗಿರನೆ ತಿರಿಗಿ ಬುಡ-ಮೇಲಾಗಿ ಒಮ್ಮೊಮ್ಮೆ ಮುಳುಗಿಯೂ ಹೋಗುತಿತ್ತು.

ಶೂರರು ಮಾತ್ರ ಇಂತಹ ನವಿಯ ಮೂಲಕ ಹರವಾದ ಕಡಲಿನಲ್ಲಿ ಹೋಗುವ ಸಾಹಸ ಮಾಡುತಿದ್ದರು. ಹೀಗೆ ಹೋಗುವಾಗ ಅನೇಕ ಸಂಕಟಗಳು ಒದಗುತಿದ್ದುವು. ಒಮ್ಮೊಮ್ಮೆ ತಿಂಗಳು ಗಟ್ಟಲೆ ಭೂಮಿಯು ನೋಡಿ ಸಹ ಕಾಣುತಿದ್ದಿಲ್ಲ. ನಡು-ಗಡಲಲ್ಲಿ ಕೂಳು ಮುಗಿದು ಹೋದರೆ ಮೀನುಗಳನ್ನಾಗಲಿ ಹಕ್ಕಿಗಳನ್ನಾಗಲಿ ಹಿಡಿದ ಹೊರತು ಅವರಿಗೆ ಅನ್ನವೇ ದೊರೆಯುತ್ತಿರಲಿಲ್ಲ. ಆಗಿನ ಕಾಲದ ಕಡಲ ಪಯಣವೆಂದರೆ ಅದೊಂದು ಅತ್ಯಂತ ಸಾಹಸದ ಕತೆ. ಆಗಿನ ಅಂಬಿಗರ ಮತ್ತು ಸಮುದ್ರದಲ್ಲಿ ನಡೆದ ವಿಲಕ್ಷಣವಾದ ಸಂಗತಿಗಳ ಎನಿತೊ ಕತೆಗಳನ್ನು ನಾವು ಈಗಲೂ ಕೇಳಬಹುದು.

ಆದರೆ ಕುತ್ತುಗಳಿಗೆ ಎದುರಾಗಿಯೂ ಜನರು ಕಡಲ ಪಯಣವನ್ನು ಮಾತ್ರ ಬಿಡಲಿಲ್ಲ. ಕೆಲವರು ಸಾಹಸ-ಪ್ರಿಯರಾಗಿದ್ದುದರಿಂದ ಇದನ್ನು ಕೈಕೊಳ್ಳುತಿದ್ದರು. ಹಲವರಿಗೆ ಹಣ ಮತ್ತು ಬಂಗಾರದ ಆಸೆ. ಅವರು ಹೋಗುತಿದ್ದುದು ವ್ಯಾಪಾರಕ್ಕಾಗಿ, ಸರಕನ್ನು ಕೊಂಡು ಮಾರುವುದಕ್ಕಾಗಿ. ಹೀಗೆ ಅವರು ದುಡ್ಡು ಗಳಿಸುತಿದ್ದರು.

ವ್ಯಾಪಾರವೆಂದರೇನು, ಅದು ಹೇಗೆ ಮೊದಲಾಯಿತು, ಬಲ್ಲೆಯಾ? ಈಗಿನ ಕಾಲದಲ್ಲಿ ದೊಡ್ಡ-ದೊಡ್ಡ ಅಂಗಡಿಗಳು ನಿನ್ನ ಕಣ್ಣಿಗೆ ಕಾಣುತ್ತವೆ. ಇಂತಹ ಅಂಗಡಿಗಳಿಗೆ ಹೋಗಿ ಬೇಕಾದುದನ್ನು ಕೊಂಡು-ಕೊಳ್ಳುವುದು ಬಹಳ ಸುಲಭ. ಆದರೆ ನೀನು ಕೊಳ್ಳುವ ಪದಾರ್ಥಗಳು ಎಲ್ಲಿಂದ ಬರುತ್ತವೆಂಬುದನ್ನು ಬಲ್ಲೆಯಾ? ಅಲಹಾಬಾದಿನ ಒಂದು ಅಂಗಡಿಯಲ್ಲಿ ನೀನು ಶಾಲು ಕೊಳ್ಳುತ್ತಿ. ಅದು ಕಾಶ್ಮೀರದಿಂದ ಬರುವುದು. ಆ ಶಾಲಿನ ಉಣ್ಣೆ ಕಾಶ್ಮೀರದ ಇಲ್ಲವೆ ಲಡಖ್ ಪ್ರಾಂತದ ಗುಡ್ಡಗಳಲ್ಲಿರುವ ಕುರಿಗಳ ಮೈ-ಮೇಲೆ ಬೆಳೆಯುತ್ತದೆ. ನೀನು ಕೊಂಡುಕೊಳ್ಳುವ ಹಲ್ಲು-ಪುಡಿ ಹಡಗು ಮತ್ತು ಉಗೆ-ಬಂಡಿಯ ಮೂಲಕ ಅಮೇರಿಕೆಯಂತಹ ದೂರ ದೇಶದಿಂದ ಬಂದುದು. ಇದರಂತೆಯೆ ಜಪಾನು, ಚೀನ, ಅಥವಾ ಲಂಡನ್ನಿನಲ್ಲಿ ಹುಟ್ಟುವಳಿಯಾದ ಸರಕನ್ನು ನೀನು ಕೊಂಡುಕೊಳ್ಳುವೆ. ನಮ್ಮ

ಪೇಟೆಯಲ್ಲಿ ಮಾರಾಟವಾಗುವ ಪರದೇಶದ ಬಟ್ಟೆಯ ಒಂದು ತುಂಡನ್ನು ಕುರಿತು ಯೋಚಿಸಿ ನೋಡು. ಹತ್ತಿ ಬೆಳೆಯುವುದು ಹಿಂದುಸ್ತಾನದಲ್ಲಿ. ಇಲ್ಲಿಂದ ಅದು ಇಂಗ್ಲಂಡಿಗೆ ಹೋಗುತ್ತದೆ. ಬಟ್ಟೆಯ ಒಂದು ದೊಡ್ಡ ಕಾರಖಾನೆ ಅದನ್ನು ಕೊಂಡು ಅದರಲ್ಲಿಯ ಕಸ-ಕಡ್ಡಿಯನ್ನು ತೆಗೆದು, ಹಿಂಜಿ, ದಾರ-ಮಾಡಿ, ನೇಯ್ದು ಬಟ್ಟೆಯನ್ನು ಮಾಡುತ್ತದೆ. ಈ ಬಟ್ಟೆ ತಿರಿಗಿ ಹಿಂದುಸ್ಥಾನಕ್ಕೆ ಬಂದು ಇದೇ ಪೇಟೆಯಲ್ಲಿ ಮಾರಾಟವಾಗುತ್ತದೆ. ಮಾರಾಟಕ್ಕಿಡುವ ಮೊದಲು ಅದು ಹಿಂದು-ಮುಂದಕ್ಕೆ ಎಷ್ಟು ಸಾವಿರ ಮೈಲು ತಿರುಗಾಡಿದೆಯೊ! ಹಿಂದುಸ್ತಾನದಲ್ಲಿ ಹುಟ್ಟಿದ ಹತ್ತಿ ಬಟ್ಟೆಯಾಗಬೇಕಾದರೆ ಅಷ್ಟು ದೂರದಲ್ಲಿದ್ದ ಇಂಗ್ಲಂಡಿಗೆ ಹೋಗಿ ಅಲ್ಲಿಂದ ಇಲ್ಲಿಗೆ ಹಿಂದಿರುಗುವುದೆಂದರೆ ಎಂತಹ ಮೂರ್ಖತನದ ಮಾತು! ಇದರಿಂದ ಕಾಲ, ಹಣ, ಶಕ್ತಿ ಎಲ್ಲವೂ ವ್ಯರ್ಥವಾಗುತ್ತದೆ. ಹತ್ತಿಯಿಂದ ಬಟ್ಟೆಯನ್ನು ಹಿಂದುಸ್ತಾನದಲ್ಲಿಯೇ ಮಾಡಿದರೆ ಅದು ಬಹಳ ಚಿಲುವಾಗಿಯೂ ಅಗ್ಗವಾಗಿಯೂ ಆಗುತ್ತದೆ. ನಾವು ಪರದೇಶದ ಬಟ್ಟೆಯನ್ನು ಕೊಳ್ಳುವುದೂ ಇಲ್ಲ, ತೊಡುವುದೂ ಇಲ್ಲವೆಂದು ನಿನಗೆ ಗೊತ್ತಿದೆ. ನಾವು ತೊಡುವುದು ಖಾದಿಯನ್ನು. ಆದಷ್ಟು ಮಟ್ಟಿಗೆ ನಮ್ಮ ದೇಶದಲ್ಲಿ ಮಾಡಿದ ಬಟ್ಟೆ-ಬರೆಗಳನ್ನು ಹಾಕಿಕೊಳ್ಳುವುದೇ ಹೆಚ್ಚು ಜಾಣತನದ ಮಾತು. ಇದಲ್ಲದೆ ನಾವು ಖಾದಿಯನ್ನು ಕೊಂಡು ಹಾಕಿಕೊಳ್ಳುವ ಇನ್ನೊಂದು ಕಾರಣವೆಂದರೆ, ಆದರಿಂದ ನೂಲುವ ಮತ್ತು ನೇಯುವ ಬಡ-ಬಗ್ಗರಿಗೆ ನೆರವಾದಂತಾಗುತ್ತದೆ.

ಹೀಗೆ, ವ್ಯಾಪಾರ ಬಹಳ ತೊಡಕಿನ ಮಾತೆಂಬುದು ನಿನಗೆ ಗೊತ್ತಾಗಿರಬಹುದು. ದೊಡ್ಡ-ದೊಡ್ಡ ಹಡಗುಗಳು ಈಗ ಪದಾರ್ಥಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುತ್ತಿರುತ್ತವೆ. ಆದರೆ ಮೊದಲು ಹೀಗಿರಲಿಲ್ಲ.

ಮನುಷ್ಯನು ಮೊದಲು ಬೀಡು ಬಿಟ್ಟುಕೊಂಡು ನಿಂತ ಕಾಲದಲ್ಲಿ ವ್ಯಾಪಾರವೇ ಇದ್ದಿಲ್ಲ. ಅವನು ತನಗೆ ಬೇಕಾದ ಪ್ರತಿಯೊಂದು ಒಡವೆಯನ್ನು ತಾನೇ ಗಳಿಸಿಕೊಳ್ಳ-ಬೇಕಾಗಿತ್ತು, ಇಲ್ಲವೆ ಮಾಡಿಕೊಳ್ಳ-ಬೇಕಾಗಿತ್ತು. ಆಗ ಅವನಿಗೆ ಬಹಳ ಒಡವೆಗಳು ಬೇಕಾಗುತ್ತಲೂ ಇರಲಿಲ್ಲ.

ನಾನು ನಿನಗೆ ಮೊದಲೇ ಹೇಳಿದಂತೆ ಜನರ ತಂಡದಲ್ಲಿ ದುಡಿತದ ಹಂಚಿಕೆಯಾಯಿತು. ಜನರು ಬೇರೆ ಬೇರೆ ಕೆಲಸಗಳನ್ನು ಕೈಕೊಂಡು ಒಡವೆಗಳನ್ನು ಮಾಡ-ತೊಡಗಿದರು. ಒಮ್ಮೊಮ್ಮೆ ಒಂದು ತಂಡದವರಲ್ಲಿ ಒಂದು ಸಾಮಾನು ಹೆಗ್ಗಳವಾಗಿದ್ದು ಮತ್ತೊಂದು ತಂಡದಲ್ಲಿ ಇನ್ನೊಂದು ಸಾಮಾನು ಹೇರಳವಾಗಿದ್ದಿರಬಹುದು. ಆಗ ಅವರು ತಮಗೆ ಬೇಕಾದ ಸಾಮಾನುಗಳನ್ನು ಅದಲು-ಬದಲು ಮಾಡಿಕೊಳ್ಳು ತಿದ್ದರು. ಒಂದು ತಂಡದವರು ಒಂದು ಚೀಲ ಕಾಳಿಗಾಗಿ ಒಂದು ಆಕಳನ್ನು ಕೊಡುತ್ತಿದ್ದರು. ಆಗಿನ ಕಾಲದಲ್ಲಿ ಹಣವಿದ್ದಿಲ್ಲ. ಒಡವೆಗಳನ್ನು ಅದಲು-ಬದಲು ಮಾಡಿಕೊಳ್ಳುವುದೊಂದೆ ಅನುಕೂಲವಾದ ಹಾದಿಯಾಗಿತ್ತು. ಹೀಗೆ ವಿನಿಮಯ ಮೊದಲಾಯಿತು. ಇದರಿಂದ ತುಸು ಮಟ್ಟಿಗೆ ಅನಾನುಕೂಲ-ವಾಗುತ್ತಿದ್ದಿರಬಹುದು. ಒಂದು ಚೀಲ ಕಾಳು ಇಲ್ಲವೆ ಮತ್ತೇನನ್ನಾದರೂ ಪಡೆಯಬೇಕಾದರೆ ಒಂದು ಆಕಳನ್ನಾಗಲಿ ಎರಡು ಕುರಿಗಳನ್ನಾಗಲಿ ಹೊಡೆದುಕೊಂಡು ಹೋಗಬೇಕಾಗುತಿತ್ತು. ಹೀಗಿದ್ದರೂ ವ್ಯಾಪಾರ ಬೆಳೆಯಿತು.

ಬೆಳ್ಳಿ ಬಂಗಾರದ ಶೋಧವಾದ ಮೇಲೆ ಜನರು ಅದನ್ನು ವ್ಯಾಪಾರಕ್ಕಾಗಿ ಬಳಸ ತೊಡಗಿದರು. ಅದನ್ನು ಕೊಂಡೊಯ್ಯುವುದು ತೀರ ಹಗುರವಾದುದು. ಬರ-ಬರುತ್ತ ಸಾಮಾನುಗಳಿಗಾಗಿ ಬೆಳ್ಳಿ-ಬಂಗಾರ ಕೊಡುವ ಬಳಕೆಯಾಯಿತು. ಇದನ್ನು ಮೊಟ್ಟ-ಮೊದಲು ತಿಳಿದವನು ಬಹಳ ಚುರುಕು ಬುದ್ಧಿಯವನಾಗಿ ಇರಬೇಡವೆ? ಬೆಳ್ಳಿ-ಬಂಗಾರದ ವಾಡಿಕೆಯಿಂದ ವ್ಯಾಪಾರ ಬಹಳ ಸುಲಭವಾಯಿತು. ಇಷ್ಟಾದರೂ ಈಗಿನಂತೆ ನಾಣ್ಯಗಳಿರಲಿಲ್ಲ. ಬಂಗಾರವನ್ನು ತಕ್ಕಡಿಯಲ್ಲಿ ತೂಗಿ ಕೊಡುವ ವಾಡಿಕೆ ಇತ್ತು. ಬಹಳ ಕಾಲವಾದ ಮೇಲೆ ನಾಣ್ಯಗಳು ಬಳಕೆಗೊಂಡವು. ಇದರಿಂದ ವ್ಯಾಪಾರ ವಿನಿಮಯ ಮತ್ತಷ್ಟು ಸುಲಭವಾಯಿತು. ಎಲ್ಲರಿಗೂ ನಾಣ್ಯದ ಬೆಲೆ ಗೊತ್ತಾದುದರಿಂದ ತೂಗುವುದು ಬೇಕಾಗಲಿಲ್ಲ. ಈಗ ಎಲ್ಲ ಕಡೆಯಲ್ಲಿ ನಾಣ್ಯಗಳೆ ಬಳಕೆಯಲ್ಲಿವೆ. ಬರಿಯ ಹಣ ತನ್ನಿಂದ ತಾನೆ ಏನೂ ಉಪಯೋಗದ್ದಲ್ಲವೆಂದು ನೀನು ನೆನಪಿನಲ್ಲಿಡಬೇಕು. ಅದು ನಮಗೆ ಬೇಕಾಗುವುದು

ಬೇಕಾದ ಸಾಮಾನನ್ನು ಕೊಂಡು-ಕೊಳ್ಳಲು ಮಾತ್ರ. ಅದರಿಂದ ಪದಾರ್ಥಗಳ ವಿನಿಮಯಕ್ಕೆ ತುಂಬ ನೆರವುಂಟಾಗುತ್ತದೆ. ಮಿಡಸ್ ದೊರೆಯಲ್ಲಿ ಬಹಳ ಬಂಗಾರವಿತ್ತು. ಆದರೆ ಉಣ್ಣಲು ಮಾತ್ರ ಏನೂ ಇರಲಿಲ್ಲವೆಂಬ ಮಾತು ನಿನಗೆ ನೆನಪಿರಬಹುದು. ನಮಗೆ ಬೇಕಾಗುವ ಪದಾರ್ಥಗಳನ್ನು ಪಡೆಯಲು ಹಣದ ಉಪಯೋಗವಾಗದಿದ್ದರೆ ಅದು ವ್ಯರ್ಥವೇ ಸರಿ.

ಹಳ್ಳಿ-ಪಳ್ಳಿಗಳಲ್ಲಿ ಇಂದಿಗೂ ಕೆಲವೊಮ್ಮೆ ಜನರು ಒಡವೆಗಳನ್ನು ಅದಲು-ಬದಲು ಮಾಡುವುದು ನಿನ್ನ ಕಣ್ಣಿಗೆ ಬೀಳುವುದು. ಆಗ ಅವರು ಹಣ ಕೊಡುವುದಿಲ್ಲ. ಆದರೂ ಅನುಕೂಲಕ್ಕಾಗಿ ನಾಣ್ಯಗಳೆ ವಾಡಿಕೆಯಲ್ಲಿವೆ. ಕೆಲವು ದಡ್ಡ ಜನರು ಬರಿಯ ಹಣ ಬಹಳ ಉಪಯುಕ್ತವೆಂದು ತಿಳಿಯುತ್ತಾರೆ. ಅದನ್ನು ಬಳಸದೆ ಕೂಡಿಡುತ್ತಾರೆ. ಈ ಜನರಿಗೆ ಹಣ ಮೊದಲು ಹೇಗೆ ಹುಟ್ಟಿತೆಂಬುದೂ ಅದರ ಉಪ-ಯೋಗ ಏನೆಂಬುದೂ ತಿಳಿದಿಲ್ಲವೆಂದು ಇದರಿಂದ ಗೊತ್ತಾಗುತ್ತದೆ.

೨೩

ಭಾಷೆ, ಬರಹ, ಮತ್ತು ಸಂಖ್ಯೆಗಳು

ಬೇರೆ ಬೇರೆ ಭಾಷೆಗಳನ್ನೂ ಅವುಗಳ ಪರಸ್ಪರ ಸಂಬಂಧವನ್ನೂ ನಾವು ಪರ್ಯಾಲೋಚಿಸಿದೆವು. ಇನ್ನು ಭಾಷೆ ಹೇಗೆ ಮೊದಲಾಯಿ ತೆಂಬುದನ್ನು ತುಸು ಯೋಚಿಸುವಾ.

ಹಲ-ಕೆಲವು ಪಶುಗಳು ಕೆಲವು ಶಬ್ದಗಳನ್ನು ಬಳಸುತ್ತವೆಂಬುದು ನಮಗೆ ತಿಳಿದ ಮಾತು. ಮಂಗಗಳಲ್ಲಿ ಸರಳ ಮಾತುಗಳಿಗಾಗಿ ಕೆಲವು ಕೂಗುಗಳು ಅಥವಾ ನುಡಿಗಳು ವಾಡಿಕೆಯಲ್ಲಿವೆಯೆಂದು ಕೆಲವರು ಹೇಳುತ್ತಾರೆ. ಕೆಲವು ಪ್ರಾಣಿಗಳು ಭಯ-ಗೊಂಡಾಗ ಅಥವಾ ಸಂಕಟ ಬಂದಿದೆಯೆಂದು ತಮ್ಮ ಜಾತಿಯ ಉಳಿದ ಪ್ರಾಣಿಗಳಿಗೆ ಸೂಚಿಸುವಾಗ ವಿಲಕ್ಷಣ ಧ್ವನಿ ಮಾಡುತ್ತಿರುವುದನ್ನು ನೀನು ನೋಡಿರಬಹುದು.

ಮನುಷ್ಯನಲ್ಲಾದರೂ ಮಾತುಗಳು ಹೀಗೆಯೆ ಮೊದಲಾಗಿರ ಬಹುದು. ಭಯ-ಗೊಂಡಾಗ ಇಲ್ಲವೆ ಭಯವನ್ನು ಸೂಚಿಸುವಾಗ ಮೊದಲು ಬರಿಯ ಕೂಗುಗಳೆ ಬಳಕೆಯಲ್ಲಿದ್ದಿರಬಹುದು. ಅಲ್ಲಿಂದ ದಣಿ ವಿಕೆ ತೋರಬಾರದೆಂದು ಕೂಗು ಹಾಕುವುದು ಪ್ರಾರಂಭವಾಗಿರಬ ಹುದು. ಜನರು ಒಟ್ಟು-ಗೂಡಿ ಕೆಲಸ ಮಾಡುವಾಗ ಎಲ್ಲರೂ ಕೂಡಿ ದನಿ-ಗೆಯ್ಯುತ್ತಾರೆ. ಯಾವುದಾದರೊಂದು ಒಡವೆಯನ್ನು ಒಟ್ಟು-ಗೂಡಿ ಎಳೆಯುವುದನ್ನು ಇಲ್ಲವೆ ಭಾರವೆತ್ತುವುದನ್ನು ನೀನು ನೋಡಿಲ್ಲವೆ? ಒಟ್ಟಾಗಿ ಕೂಗು ಹಾಕುವುದರಿಂದ ಅವರಿಗೆ ದಣಿವು ಕಡಿಮೆಯಾಗುತ್ತ ದೆಂದು ತೋರುತ್ತದೆ. ಈ ದುಡಿತದ ಕೂಗಾಟಗಳೆ ಮನುಷ್ಯನಾಡಿದ ಮೊದಲನೆ ಮಾತುಗಳಾದ್ದಿರಬಹುದು.

ಬರ-ಬರುತ್ತ ನೀರು, ಬೆಂಕಿ, ಕರಡಿ, ಕುದುರೆ, ಮುಂತಾದ ಸರಳ ವಾದ ಮಾತುಗಳು ಹುಟ್ಟಿರಬೇಕು. ಬಹಳ-ಮಾಡಿ ನಾಮ ಪದಗಳೇ ಬಳಕೆ ಗೊಂಡಿರಬಹುದು. ಕ್ರಿಯಾ-ಪದಗಳು ಇದ್ದಿರಲಾರವು. ನಾನು

ಕರಡಿಯನ್ನು ನೋಡಿದೆನೆಂದು ಹೇಳಬೇಕಾಗಿದ್ದರೆ ಬರಿಯ 'ಕರಡಿ' ಎಂಬ ಒಂದೇ ಶಬ್ದವನ್ನು ಹೇಳಿ ಮಕ್ಕಳಂತೆ ಬೆರಳಿನಿಂದ ತೋರಿಸುತ್ತಿದ್ದಿರಬಹುದು. ಬಹುಶಃ ಆಗ ಮಾತು-ಕತೆಗಳು ಇದ್ದಿರಲಿಕ್ಕಿಲ್ಲ.

ನುಡಿ ಬೆಳೆಯಿತು. ಮೊದಲು ಸಣ್ಣ-ಸಣ್ಣ ವಾಕ್ಯಗಳು, ಆ ಮೇಲೆ ದೊಡ್ಡ ವಾಕ್ಯಗಳು ತಲೆ-ದೋರಿದುವು. ಬೇರೆ ಬೇರೆ ಜನಾಂಗಗಳಿಗೆ ಒಂದೇ ನುಡಿ ಇದ್ದಿರಲಾರದು. ಆದರೆ ಒಂದಾನೊಂದು ಕಾಲದಲ್ಲಿ, ಹಲವಾರು ಭಾಷೆಗಳೂ ಇದ್ದಿರಲಾರವು. ನಾನು ನಿನಗೆ ಮೊದಲೇ ಹೇಳಿದಂತೆ ಆಗ ಬಹಳ ಕಡಿಮೆ ಭಾಷೆಗಳಿದ್ದುವು. ಅವು ಒಂದೊಂದಾಗಿ ಬೆಳೆದು ಭಾಷೆಗಳ ದೊಡ್ಡ-ದೊಡ್ಡ ಬಳಗಗಳೇ ಆದುವು.

ನಾವು ಯೋಚಿಸುತ್ತಿರುವ ಪ್ರಾಚೀನ ಸಂಸ್ಕೃತಿಯ ಕಾಲದಲ್ಲಿ ನುಡಿ ಬಹಳ ಮುಂದುವರಿಯಿತು. ಎಷ್ಟೋ ಹಾಡುಗಳು ಹುಟ್ಟಿ ಭಟ್ಟಂಗಿಗಳು ಮತ್ತು ಹಾಡುಗಾರರು ಅವುಗಳನ್ನು ಹಾಡುತ್ತಿದ್ದರು. ಆಗ ಅಷ್ಟೊಂದು ಬರಹವಿದ್ದಿಲ್ಲ. ಪುಸ್ತಕಗಳಂತೂ ಇರಲೇ ಇಲ್ಲ. ಆದುದರಿಂದ ಜನರು ತಾವು ಕಲಿತುದನ್ನು ನೆನಪಿನಲ್ಲಿಡಬೇಕಾಗುತಿತ್ತು. ಪದ-ಪದ್ಯಗಳನ್ನು ನೆನಪಿನಲ್ಲಿಡುವುದು ಬಹಳ ಸುಲಭ. ಅಂತೆಯೆ ಪುರಾತನ ಸಂಸ್ಕೃತಿಗಳುಳ್ಳ ಎಲ್ಲ ದೇಶಗಳಲ್ಲಿ ಪದಗಳು ಮತ್ತು ಲಾವಣಿಗಳು ಎಲ್ಲರ ಬಾಯಿಯಲ್ಲಿದ್ದುದು ನಮಗೆ ಗೊತ್ತಾಗುತ್ತದೆ.

ಸತ್ತು-ಹೋದ ವೀರರ ಕೃತಿಗಳನ್ನು ಹಾಡಿ-ಹೊಗಳುವುದು ಹಾಡುವವರ ಇಲ್ಲವೆ ಲಾವಣಿಕಾರರ ವಿಶೇಷವಾದ ಕೆಲಸವಾಗಿತ್ತು. ಆಗಿನ ಕಾಲದ ಜನರು ಯುದ್ಧ-ಪ್ರಿಯರು. ಆದುದರಿಂದ ಕಾಳಗದಲ್ಲಿಯ ಶೌರ್ಯವೇ ಅವರ ಎಲ್ಲ ಪದ-ಪದ್ಯಗಳ ವಿಷಯವಾಗಿರುತಿತ್ತು. ಹಿಂದುಸ್ತಾನದಲ್ಲಿಯೂ ಇನ್ನಿತರ ದೇಶಗಳಲ್ಲಿಯೂ ಹೀಗೆ ಇದ್ದುದು ನಮಗೆ ತಿಳಿಯುತ್ತದೆ.

ಬರಹದ ಮೊದಲಿಕೆಯಾದ ಸಂಗತಿಯೂ ಬಲು ವಿಲಕ್ಷಣವಾಗಿದೆ. ಚೀನ ಲಿಪಿಯನ್ನು ಕುರಿತು ನಾನು ನಿನಗೆ ಮೊದಲೇ ಹೇಳಿರುವೆನು. ಎಲ್ಲ ಬರಹಗಳು ಮೊಟ್ಟ-ಮೊದಲು ಚಿತ್ರಗಳಿಂದ

ಮೊದಲಾಗಿರಬಹುದು. ನವಿಲಿನ ಬಗೆಗೆ ಒಬ್ಬನು ಏನಾದರೂ ಹೇಳ ಬೇಕಾಗಿದ್ದರೆ ಅವನು ಅದರ ಚಿತ್ರವನ್ನು ಬರೆಯಲು ಹವಣಿಸುತಿದ್ದನು. ಆದರೆ ಈ ಪದ್ಧತಿಯಿಂದ ಬಹಳ ಬರೆಯುವುದಾಗುತ್ತಿದ್ದಿಲ್ಲ. ಬರ-ಬರುತ್ತ ಸುಲಭವಾದ ಚಿತ್ರಗಳು ತಲೆ ಎತ್ತಿದುವು. ಬಹಳ ಕಾಲದ ನಂತರ ಲಿಪಿಯ ಶೋಧವಾಯಿತು. ಇದರಿಂದ ಬರೆಹ ಬಹು ಸುಲಭ ವಾಗಿ ಅದರ ಏಳಿಗೆ ಭರದಿಂದ ಸಾಗತೊಡಗಿತು.

ಅಂಕೆಗಳನ್ನೂ ಎಣಿಕೆಯನ್ನೂ ಗೊತ್ತುಹಚ್ಚಿದ್ದು ಒಂದು ದೊಡ್ಡ ಶೋಧನೆಯೆ ಸರಿ. ಎಣಿಕೆಯಿಲ್ಲದೆ ಎಲ್ಲ ವ್ಯವಹಾರ ಹೇಗೆ ನಡೆಯು-ತಿತ್ತೆಂಬುದನ್ನು ತಿಳಿದುಕೊಳ್ಳುವುದು ಕೂಡ ಬಿಗಿಯಾಗಿದೆ. ಅಂಕೆ ಗಳನ್ನು ಕಂಡು-ಹಿಡಿದವನು ಆಗಿನ ಕಾಲದಲ್ಲಿ ಬಹಳ ಚತುರನೂ ಬುದ್ಧಿವಂತನೂ ಆಗಿರಬೇಕು. ಯುರೋಪಿನಲ್ಲಿ ಮೊದಲು ಅಂಕೆಗಳು ಬಹಳ ಒರಟಾಗಿದ್ದುವು. ರೋಮನ್ ಅಂಕೆಗಳೆಂದು ಹೆಸರುಳ್ಳ ಅಂಕೆಗಳು I, II, III, IV, V, VI, VII, VIII, IX, X ಹೀಗೆ ಇದ್ದುದು ನಿನಗೆ ಗೊತ್ತಿದೆ. ಇವು ತುಂಬ ಒರಟಾಗಿರುವವು. ಇವು ಬಳಸಲು ಶೀರ ಗಡಚಾಗಿವೆ. ಈಗ ಎಲ್ಲ ಭಾಷೆಗಳಲ್ಲಿ ನಾವು ಬಳ-ಸುತ್ತಿರುವ ಅಂಕೆಗಳು ಮೊದಲಿನವುಗಳಿಗಿಂತ ಗೆಲುವಾಗಿರುವವು. ಅವು ಯಾವುವೆಂದರೆ: ೧, ೨, ೩, ೪, ೫, ೬, ೭, ೮, ೯, ೧೦. ಹೀಗೆ ಬರೆಯುವ ಈ ಪದ್ಧತಿಗೆ ಅರಬೀ ಪದ್ಧತಿಯೆಂದು ಹೆಸರು. ಯಾಕೆಂದರೆ, ಯುರೋಪಿನ ಜನರಿಗೆ ಇವು ಗೊತ್ತಾದುದು ಅರಬ್ ದೇಶದಿಂದ. ಆದರೆ ಅರಬರು ಈ ಪದ್ಧತಿಯನ್ನು ಕಲಿತುದು ಭಾರ ತೀಯರಿಂದ. ಆದುದರಿಂದ ಈ ಅಂಕೆಗಳಿಗೆ ಹಿಂದುಸ್ತಾನದ ಅಂಕೆ ಗಳೆಂದು ಕರೆಯುವುದೇ ಹೆಚ್ಚು ಒಪ್ಪುವುದು.

ನಾನು ಈಗ ಬಹಳ ಮುಂದೆ ಹೋಗುತ್ತಿದ್ದೇನೆ. ಇನ್ನೂ ನಾವು ಅರಬರ ತನಕ ಬಂದಿಲ್ಲ.

ಜನರ ಬೇರೆ ಬೇರೆ ವರ್ಗಗಳು

ಹುಡುಗರಿಗೂ ಹುಡಿಗಿಯರಿಗೂ ಈಗ ಇತಿಹಾಸವನ್ನು ಕಲಿಸುವ ಪದ್ಧತಿ ಬಲು ವಿಲಕ್ಷಣವಾದುದು. ಅರಸರ ಮತ್ತು ಇನ್ನಿತರರ ಹೆಸರುಗಳು, ಯುದ್ಧದ ತಿಥಿ, ವಾರಗಳು, ಮುಂತಾದ ವಿಷಯಗಳನ್ನು ಮಾತ್ರ ಮಕ್ಕಳು ಕಲಿಯುವರು. ಇದನ್ನು ಕಲಿಯುವುದು ಇತಿಹಾಸವಲ್ಲ. ಇತಿಹಾಸ, ಒಂದು ನಾಡಿನ ಜನರ ಚರಿತೆಯನ್ನು, ಎಂದರೆ, ಅವರು ಹೇಗೆ ಬಾಳಿದರು, ಏನು ಮಾಡುತಿದ್ದರು, ಏನೇನು ಆಲೋಚಿಸುತಿದ್ದರು ಎಂಬುದನ್ನು ನಮಗೆ ಹೇಳಬೇಕು. ಇತಿಹಾಸದಿಂದ ಅವರ ಸುಖ-ದುಃಖಗಳು, ಅವರಿಗೊದಗಿದ ಸಂಕಟಗಳು, ಅವುಗಳ ನಿವಾರಣೆಯ ಉಪಾಯಗಳು ನಮಗೆ ತಿಳಿಯಬೇಕು. ಇತಿಹಾಸವನ್ನು ಹೀಗೆ ತಿಳಿದುಕೊಂಡರೆ ಅದರಿಂದ ಎಷ್ಟೋ ವಿಷಯಗಳನ್ನು ಕಲಿಯಬಹುದು. ಇದೇ ತರದ ಕಷ್ಟಗಳು ಅಥವಾ ಕುತ್ತುಗಳು ನಮಗೆ ಒದಗಿದರೆ ಅವುಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಇತಿಹಾಸದ ಓದು ನಮಗೆ ನೆರವಾಗಬಹುದು. ಜನರು ಹೆಚ್ಚು-ಹೆಚ್ಚು ಸುಧಾರಿಸುತ್ತ ನಡೆದಿರುವರೊ ಅಥವಾ ಕೆಡುತ್ತ ನಡೆದಿರುವರೊ ಎಂಬುದನ್ನು ಕಂಡು-ಕೊಳ್ಳುವದಕ್ಕೆ ಹಿಂದಿನ ಕಾಲದ ಅಭ್ಯಾಸವೇ ನಮಗೆ ವಿಶೇಷವಾಗಿ ನೆರವಾಗ-ಬಲ್ಲುದು.

ಹಿಂದಿನ ಕಾಲದ ಮಹಾ ಪುರುಷರ ಮತ್ತು ಸ್ತ್ರೀಯರ ಜೀವನ ಚರಿತೆಗಳಿಂದ ನಾವು ಏನನ್ನಾದರೂ ಕಲಿತುಕೊಳ್ಳಲು ಯತ್ನಿಸಬೇಕು. ಬೇರೆ ಬೇರೆ ತರದ ಜನರ ಪೂರ್ವ ಕಾಲದ ಸ್ಥಿತಿ-ಗತಿಗಳನ್ನೂ ಅರಿತು-ಕೊಳ್ಳಲು ನಾವು ಹವಣಿಸಬೇಕು.

ನಾನು ನಿನಗೆ ಎಷ್ಟೋ ಓಲೆಗಳನ್ನು ಬರೆದಿರುವೆನು. ಕ್ರಮಕ್ಕನುಸರಿಸಿ ಇದು ೨೪ ನೆಯ ಪತ್ರ. ನಮಗೆ ವಿಶೇಷವಾಗಿ ಗೊತ್ತಾಗದ ಪುರಾತನ ಸಂಗತಿಗಳನ್ನಷ್ಟೇ ಇಲ್ಲಿಯ ವರೆಗೆ ನಾವು ಚರ್ಚಿಸಿದೆವು. ಇದಕ್ಕೆ ಇತಿಹಾಸವೆನ್ನಲಾಗದು. ಇದಕ್ಕೆ ಇತಿಹಾಸದ ಮೊದಲಿಕೆ ಇಲ್ಲವೆ

ಉದಯವೆನ್ನಬಹುದು. ನಮಗೆ ಹೆಚ್ಚಾಗಿ ಗೊತ್ತಾಗಿರುವ ಆ-ಮೇಲಿನ ಕಾಲದ ಸಂಗತಿಗಳನ್ನು ಇನ್ನು ಮುಂದೆ ನೋಡಿಕೊಳ್ಳೋಣ. ಈ ಕಾಲಕ್ಕೆ ಐತಿಹಾಸಿಕ ಕಾಲವೆನ್ನಬಹುದು. ಪ್ರಾಚೀನ ಸಂಸ್ಕೃತಿಗಳ ವಿಷಯಗಳನ್ನು ಬಿಡುವ ಮೊದಲು ಆಗಿನ ಕಾಲದಲ್ಲಿ ಯಾವ ತೆರನಾದ ಜನರು ಇರುತ್ತಿದ್ದರೆಂಬುದನ್ನು ಇನ್ನೊಮ್ಮೆ ನೋಡಿಕೊಳ್ಳೋಣ.

ಹಿಂದಿನ ಕಾಲದ ಪುರಾತನ ತಂಡಗಳಲ್ಲಿ ಜನರು ಬೇರೆ ಬೇರೆ ಕೆಲಸಗಳನ್ನು ಹೇಗೆ ಮಾಡುತ್ತಿದ್ದರೆಂಬುದನ್ನು ನಾವು ಈಗಾಗಲೇ ನೋಡಿ-ಕೊಂಡಿರುವೆವು. ಶ್ರಮ-ವಿಭಾಗ ಅಥವಾ ದುಡಿತದ ಹಂಚಿಕೆ ಆಗ ವಾಡಿಕೆ-ಗೊಂಡಿತ್ತು. ತಂಡದ ನಾಯಕನು ಅಥವಾ ಹಿರಿಯನು ತನ್ನ ಮನೆತನವನ್ನು ಉಳಿದವರಿಂದ ಬೇರ್ಪಡಿಸಿಕೊಂಡನು. ಅವನು ನಾಯಕತನವನ್ನಷ್ಟೆ ನೋಡುತ್ತಿದ್ದನು. ಅದರಿಂದ ಅವನು ಮೇಲ್ತರ-ಗತಿಯ ಮನುಷ್ಯನಾದನು. ಎಂದರೆ ಇವನ ಮನೆತನ ಬೇರೊಂದು ವರ್ಗದಲ್ಲಿ ಸೇರ ತೊಡಗಿತು. ಜನರಲ್ಲಿ ಹೀಗೆ ಎರಡು ಪಂಗಡಗಳಾದುವು. ಕೆಲಸಗಳನ್ನು ಹಂಚಿ-ಹಾಕುತ್ತ ಹೆಗ್ಗಡೆತನವನ್ನು ಮಾಡುವುದು ಒಂದು ವರ್ಗ; ದುಡಿಯುವುದು ಮತ್ತೊಂದು ವರ್ಗ. ಕೆಲಸ ಮಾಡಿಸುವ ವರ್ಗದ ಪಾಲಿಗೆ ಅಧಿಕಾರ ತಾನಾಗಿಯೆ ಹೆಚ್ಚಿತು. ಅದರಿಂದ ಅವರು ಹುಟ್ಟುವಳಿಯೊಳಗಿನ ದೊಡ್ಡ ಪಾಲನ್ನು ಪಡೆಯ ತೊಡಗಿದುದು ಸ್ವಾಭಾವಿಕವೇ ಸರಿ. ಕೆಲಸಗಾರರಿಂದ ಇವರು ದಿನ-ದಿನವೂ ಹೆಚ್ಚು-ಹೆಚ್ಚಾದ ಹುಟ್ಟುವಳಿಯನ್ನು ಪಡೆಯುತಿದ್ದುದರಿಂದ ಸಿರಿವಂತರಾದರು.

ಹೀಗೆ ಶ್ರಮ-ವಿಭಾಗವಾಗುತ್ತ ನಡೆದಂತೆ ಹಲವಾರು ವರ್ಗಗಳಾದುವು. ಅರಸ, ಅವನ ಮನೆತನದವರು, ಅವನ ಓಲಗದವರು ಹೀಗೆ ವರ್ಗಗಳು ತಲೆ-ದೋರಿದುವು. ಅವರು ದೇಶವನ್ನಾಳುತ್ತ ದೇಶಕ್ಕಾಗಿ ಕಾಳಗಗಳನ್ನು ಹೂಡುತ್ತಿದ್ದರು. ಬೇರೆ ಕೆಲಸಗಳನ್ನು ಅವರು ಸಾಮಾನ್ಯವಾಗಿ ಮಾಡುತ್ತಿರಲಿಲ್ಲ.

ಅಲ್ಲಿಂದ ಪೂಜಾರಿಗಳೂ ದೇವಾಲಯಗಳಿಗೆ ಸಂಬಂಧಿಸಿದ ಬೇರೆ ಜನರೂ ಹುಟ್ಟಿದರು. ಆಗಿನ ಕಾಲದಲ್ಲಿ ಈ ಜನರು ಬಹು ಶ್ರೇಷ್ಠರಾಗಿ

ದ್ದರು. ಇವರು ಮಾಡುತ್ತಿದ್ದ ಕೆಲಸಗಳನ್ನು ಕುರಿತು ಇನ್ನೊಮ್ಮೆ ಯೋಚಿಸೋಣ.

ಮೂರನೆ ತರದ ಜನರೆಂದರೆ ಬಣಜಿಗರು ಅಥವಾ ವ್ಯಾಪಾರಿಗಳು. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಮಾರಾಟಕ್ಕಾಗಿ ಸಾಮಾನುಗಳನ್ನು ಒಯ್ಯುತ್ತಿದ್ದ ಬಣಜಿಗ ಪಂಗಡವಿದು. ಇವರು ಅಂಗಡಿಗಳನ್ನು ಇಡುತ್ತಿದ್ದರು.

ನಾಲ್ಕನೆಯವರು ಕೈಗಾರಿಕೆಯವರು. ಇವರು ನೂಲುವರು, ನೇಯುವರು, ಗಡಿಗೆ-ಮಡಿಕೆಗಳನ್ನು ಮಾಡುವರು, ಬೆಳ್ಳಿ-ಬಂಗಾರದ ಕೆಲಸವನ್ನು ಮಾಡುತ್ತ ಅಕ್ಕಸಾಲಿಗರೆನ್ನಿಸಿಕೊಳ್ಳುವರು, ಆನೆ-ಕೋರೆಯ ಕೆಲಸ ಮಾಡುವರು. ಈ ಜನರು ಇರುತ್ತಿದ್ದುದು ದೊಡ್ಡ ದೊಡ್ಡ ಊರುಗಳಲ್ಲಿ. ಹಳ್ಳಿ-ಪಳ್ಳಿಗಳಲ್ಲಿಯೂ ಎಷ್ಟೊ ಜನ ನೆಲೆಗೊಂಡಿದ್ದರು.

ಹೊಲ-ಗೆಲಸ ಮಾಡುವ ಒಕ್ಕಲಿಗರೂ ಹೊಲಗಳಲ್ಲಿ ಮತ್ತು ಪಟ್ಟಣಗಳಲ್ಲಿ ದುಡಿಯುವ ಕೂಲಿಕಾರರೂ ಕೊನೆಯವರು. ಇದೇ ದೊಡ್ಡದಾದ ಪಂಗಡ. ಬೇರೆ ವರ್ಗದವರೆಲ್ಲರೂ ಇವರ ಗಳಿಕೆಯೊಳಗಿನ ಏನನ್ನಾದರೂ ಪಡೆಯಲು ಹವಣಿಸುವವರೇ.

೨೫

ಅರಸರು, ಗುಡಿಗಳು ಮತ್ತು ಪೂಜಾರಿಗಳು

ಈ ಜಗತ್ತಿನ ಜನರಲ್ಲಿ ಬೇರೆ ಬೇರೆ ಐದು ವರ್ಗಗಳು ಹೇಗೆ ಆದುವೆಂಬುದನ್ನು ಹಿಂದಿನ ಓಲೆಯಿಂದ ನಾವು ತಿಳಿದುಕೊಂಡೆವು. ಇವುಗಳಲ್ಲಿ ಒಕ್ಕಲುತನ ಮತ್ತು ಕೂಲಿ ಮಾಡುವ ವರ್ಗವೇ ದೊಡ್ಡದು. ಒಕ್ಕಲಿಗರು ಭೂಮಿಯನ್ನು ನೇಗಿಲು ಹೊಡೆದು, ಹರಗಿ, ಬಿತ್ತಿ, ಉಣ್ಣುವುದಕ್ಕೆ ಬೆಳೆ ಬೆಳೆಯುತಿದ್ದರು. ಇವರು ಇದನ್ನೆಲ್ಲ ಮಾಡದಿದ್ದರೆ ಅಥವಾ ಹೊಲಗಳಲ್ಲಿ ಇನ್ನಾರೂ ದುಡಿಯದಿದ್ದರೆ ಕಾಳು-ಕಡಿ ಹುಟ್ಟುತ್ತಿದ್ದಿಲ್ಲ. ಹುಟ್ಟಿದರೂ ತೀರ ಸ್ವಲ್ಪ. ಆದುದರಿಂದ ಮುಖ್ಯವಾಗಿದ್ದವರು ಒಕ್ಕಲಿಗರು. ಇವರಿಲ್ಲದಿದ್ದರೆ ಪ್ರತಿಯೊಬ್ಬನೂ ಉಪವಾಸ ಬೀಳುವ ಹೊತ್ತು ಬರುತ್ತಿತ್ತು. ಕೂಲಿಕಾರರು ಕೂಡ ಹೊಲಗಳಲ್ಲಿಯೂ ಪಟ್ಟಣಗಳಲ್ಲಿಯೂ ದುಡಿದು ಸಹಾಯಕರಾಗುತ್ತಿದ್ದರು. ಈ ಜನರು ಇಂತಹ ಮುಖ್ಯವಾದ ಕೆಲಸವನ್ನು ಮಾಡುತ್ತಿದ್ದರೂ ಮತ್ತು ಪ್ರತಿಯೊಬ್ಬನಿಗೂ ಇವರು ಬೇಕಾಗಿದ್ದರೂ ಇವರಿಗೆ ಹೆಚ್ಚಿಗೆ ಏನೂ ದೊರೆಯುತ್ತಿರಲಿಲ್ಲ. ಇವರು ದುಡಿದು ಗಳಿಕೆ ಮಾಡಿದುದೆಲ್ಲ ಅನ್ಯರ ಪಾಲಾಗುತಿತ್ತು. ವಿಶೇಷವಾಗಿ ಇದು ಅರಸರಿಗೆ, ಅವರ ವರ್ಗಕ್ಕೆ ಸೇರಿದ ಪಾಳೆಯಗಾರರಿಗೆ ಮತ್ತು ಶ್ರೀಮಂತರಿಗೆ ಹೋಗುತಿತ್ತು.

ಅರಸು ಮತ್ತು ಇವನ ವರ್ಗದವರಿಗೆ ಅಧಿಕಾರ-ಬಲ ಹೆಚ್ಚಾಗಿತ್ತೆಂದು ನಾವು ತಿಳಿದುಕೊಂಡೆವು. ಹಿಂದಿನ ತಂಡಗಳ ಕಾಲದಲ್ಲಿ ಭೂಮಿ ಒಬ್ಬನದಾಗಿರದೆ ಇಡೀ ತಂಡದ್ದೇ ಆಗಿತ್ತು. ಆಳುವ ಈ ಅರಸು ವರ್ಗ ತನ್ನ ಅಧಿಕಾರ ಬೆಳೆದಂತೆ ಭೂಮಿಯನ್ನೆಲ್ಲ ತನ್ನದು ಎಂದೆನ್ನಲಾರಂಭಿಸಿತು. ಈ ವರ್ಗಕ್ಕೆ ಸೇರಿದವರು ಜಮೀನುದಾರರು. ಹೊಲದಲ್ಲಿ ಮೈ-ಬೆವರು ಸುರಿಸಿ ದುಡಿಯುವವರು ಒಂದು ಪರಿಯಿಂದ ಇವರ ಆಳುಗಳಾದರು. ಒಕ್ಕಲಿಗರು ಭೂಮಿಯಿಂದ ಬೆಳೆದದ್ದೆಲ್ಲ

ಹಂಚಿ-ಹೋಗಿ ಅದರ ಒಂದು ದೊಡ್ಡ ಪಾಲು ಈ ಜಮೀನುದಾರರಿಗೆ ದೊರೆಯತೊಡಗಿತು.

ಕೆಲವು ಗುಡಿಗಳಿಗೆ ಭೂಮಿಗಳಿದ್ದುವು. ಹೀಗೆ ಈ ಗುಡಿಗಳೂ ಭೂಮಿಯ ಒಡೆತನವನ್ನು ಹೊಂದಿದ್ದುವು.

ಈ ದೇವಾಲಯ ಹಾಗು ಪೂಜಾರಿಗಳ ವಿಷಯವನ್ನು ಈಗ ನೋಡೋಣ. ನಾನು ಬರೆದ ಪತ್ರಗಳಲ್ಲೊಂದರಲ್ಲಿ ನಿನಗೆ ಹೇಳಿರುವು ದೇನೆಂದರೆ, ಪೂರ್ವಕಾಲದ ಕಾಡು-ಜನರು ಎಷ್ಟೋ ಸಂಗತಿಗಳನ್ನರಿಯದೆ ತಮಗೆ ತಿಳಿಯಲಾರದ ಪ್ರತಿಯೊಂದು ಪದಾರ್ಥದಿಂದ ಭಯಗೊಂಡರು; ಮತ್ತು ಅದರಿಂದಲೇ ದೇವತೆಗಳನ್ನೂ ಧರ್ಮಾಚರಣೆಯನ್ನೂ ಕಲ್ಪಿಸಿಕೊಂಡರು. ಅವರು ನದಿ, ಗುಡ್ಡ, ಸೂರ್ಯ, ಗಿಡ, ಪಶು ಮತ್ತು ತಮ್ಮ ಕಣ್ಣಿಗೆ ಬೀಳಲಾರದ ಎಷ್ಟೋ ವಸ್ತುಗಳಲ್ಲಿ ಗಂಡು ಹೆಣ್ಣು ದೇವತೆಗಳಿರುವರೆಂದು ಭಾವಿಸಿದರು. ಇವರು ಯಾವಾಗಲೂ ಹೆದರುತಿದ್ದು ತಮ್ಮ ದೇವತೆಗಳು ತಮಗೆ ದಂಡಿಸಲು ಹವಣಿಸುತ್ತಿದ್ದಾರೆಂದು ಬಗೆಯುತಿದ್ದರು. ಇವರ ದೇವತೆಗಳೂ ಇವರಂತೆ ಕ್ರೂರರೂ ಕಟುಕರೂ ಇದ್ದರು! ಆದುದರಿಂದ ಈ ದೇವತೆಗಳಿಗೆ ಬಲಿ-ಗೊಟ್ಟು ಸಮಾಧಾನ ಅಥವಾ ಸಂತೋಷ ಪಡಿಸಬೇಕೆಂದು ಇವರು ಹವಣಿಸುತಿದ್ದರು.

ಈ ದೇವತೆಗಳಿಗಾಗಿ ಗುಡಿಗಳಾದುವು. ಗುಡಿಯಲ್ಲಿ ಗರ್ಭ-ಗುಡಿಯೆಂಬ ಒಂದು ಕೋಣೆ ಇರುವುದು ನಿನಗೆ ಗೊತ್ತು. ಇವರು ಪೂಜಿಸುತ್ತಿದ್ದ ಮೂರ್ತಿಯಿದ್ದುದು ಇಲ್ಲಿಯೆ. ಕಾಣದ ವಸ್ತುವನ್ನು ಪೂಜಿಸಲು ಇವರಿಗೆ ತಿಳಿಯುತ್ತಿರಲಿಲ್ಲ. ಅದು ಸ್ವಲ್ಪ ಬಿಗಿ. ಸಣ್ಣ ಮಗುವಿಗೆ ಯಾವ ಒಡವೆ ಕಣ್ಣಿಗೆ ಬೀಳುತ್ತದೊ ಅದನ್ನೆ ಅದು ಯಾವಾಗಲೂ ಯೋಚಿಸಬಲ್ಲುದು. ಹಿಂದಿನವರಾದರೂ ಸಾಧಾರಣವಾಗಿ ಕೂಸುಗಳಂತೆಯೆ ಇದ್ದರು. ಮೂರ್ತಿಗಳಿಲ್ಲದೆ ಇವರಿಂದ ಪೂಜಿಸಲಾಗುತಿದ್ದಿಲ್ಲ. ಆದುದರಿಂದ ಇವರು ತಮ್ಮ-ತಮ್ಮ ಗುಡಿಗಳಲ್ಲಿ ಮೂರ್ತಿಗಳನ್ನಿಟ್ಟು ಕೊಳ್ಳುತಿದ್ದರು. ಈ ಮೂರ್ತಿಗಳ ರೂಪು ಒಮ್ಮೆ ಪಶುಗಳಂತೆಯೂ

ಇನ್ನೊಮ್ಮೆ ಅರ್ಧ ಪಶು, ಅರ್ಧ ಮನುಷ್ಯನಂತೆಯೂ ಭಯಂಕರವಾಗಿ ಇರುತಿದ್ದುದು ಬಲು ವಿಲಕ್ಷಣವಾದ ಸಂಗತಿ. ಒಂದು ಕಾಲದಲ್ಲಿ ಮಿಸ್ರ ದೇಶದ ಜನರು ಬೆಕ್ಕುಗಳನ್ನು ಆರಾಧಿಸುತಿದ್ದರು. ಇನ್ನೊಂದು ಕಾಲದಲ್ಲಿ ಮಂಗವನ್ನೂ ಪೂಜಿಸುತಿದ್ದರೆಂದು ತೋರುತ್ತದೆ. ಈ ತರದ ಕ್ರೂರ ರೂಪವುಳ್ಳ ಮೂರ್ತಿಗಳನ್ನು ಇವರು ಏಕೆ ಪೂಜಿಸುತ್ತಿದ್ದರೆಂದು ತಿಳಿಯುವುದು ಬಲು ಕಷ್ಟ. ಮೂರ್ತಿಗಳನ್ನು ಪೂಜಿಸುವುದೇ ಆದರೆ ಚೆಲುವಾದ ಮೂರ್ತಿಯನ್ನೇಕೆ ಪೂಜಿಸಬಾರದು? ದೇವರೆಂದರೆ ಭಯ ಪಡಿಸುವ ಯಾವುದೊ ಒಂದು ವಸ್ತುವೆಂದು ಇವರ ತಿಳಿವಳಿಕೆ ಇದ್ದಿರ ಬಹುದು. ಅದಕ್ಕಾಗಿಯೆ ಇವರು ಅತಿ ಭಯಂಕರ ರೂಪವುಳ್ಳ ಮೂರ್ತಿ ಗಳನ್ನು ಮಾಡಿಕೊಂಡರು.

ದೇವರು ಒಬ್ಬನೇ ಎಂದೂ ಅವನು ಸರ್ವ-ಶಕ್ತನೆಂದೂ ಈಗಿನ ವರು ತಿಳಿಯುತ್ತಾರೆ. ಆಗಿನ ಕಾಲದವರು ಹಾಗೆ ತಿಳಿದಿರಲಾರರು. ಅನೇಕ ಹೆಣ್ಣು ಗಂಡು ದೇವತೆಗಳಿರುವವೆಂದು ಭಾವಿಸಿದುದಲ್ಲದೆ ಅವು ತಮ್ಮ-ತಮ್ಮಲ್ಲಿ ಕಚ್ಚಾಡುತ್ತಿರುವವೆಂದೂ ಇವರ ನಂಬಿಕೆ. ಬೇರೆ ಬೇರೆ ಪಟ್ಟಣಗಳಲ್ಲಿ ಮತ್ತು ದೇಶಗಳಲ್ಲಿ ಬೇರೆ ಬೇರೆ ದೇವತೆಗಳಿದ್ದುವು.

ಗುಡಿಗಳು ಪೂಜಾರಿಗಳಿಂದಲೂ ಮೂರ್ತಿಗಳಿಂದಲೂ ಕಿಕ್ಕಿರಿ ದಿದ್ದುವು. ಪೂಜಾರಿಗಳು ಸಾಮಾನ್ಯವಾಗಿ ಉಳಿದೆಲ್ಲರಿಗಿಂತ ಹೆಚ್ಚು ಓದು-ಬರಹ ಬಲ್ಲವರೂ, ವಿದ್ವಾಂಸರೂ, ಆಗಿದ್ದರು. ಆದುದರಿಂದ ಇವರು ಅರಸರ ಸಲಹೆಗಾರರಾಗಿದ್ದರು. ಪುಸ್ತಕ ಬರೆಯುವ ಕೆಲಸ ವನ್ನೂ ಪ್ರತಿ ಮಾಡುವ ಕೆಲಸವನ್ನೂ ಪೂಜಾರಿಗಳೇ ಮಾಡುತಿದ್ದರು. ಇವರಿಗೆ ಕೆಲ-ಮಟ್ಟಿಗಿನ ತಿಳಿವಳಿಕೆ ಇದ್ದುದರಿಂದ ಆಗಿನ ಕಾಲದಲ್ಲಿ ಇವರೇ ಬುದ್ಧಿವಂತರಾಗಿದ್ದರು. ತಮ್ಮ ಬುದ್ಧಿವಂತಿಕೆಯನ್ನು ಜನರಿಗೆ ತೋರಿಸುವುದಕ್ಕಾಗಿ ಇವರು ಕೆಲವು ಕಣ್ಣು-ಕಟ್ಟುಗಳನ್ನು ಮಾಡಿ ತೋರಿಸಿ ಜನರ ಮನಸ್ಸಿನ ಮೇಲೆ ಪರಿಣಾಮವನ್ನು ಉಂಟುಮಾಡು ತಿದ್ದರು. ಜನರು ತಿಳಿಗೇಡಿಗಳಾದುದರಿಂದ ಪೂಜಾರಿಗಳು ಮಾಟ ಗಾರರೆಂದು ಬಗೆದು ಅವರಿಗೆ ಹೆದರಿ ನಡೆಯುತಿದ್ದರು.

ಪೂಜಾರಿಗಳು ಜನ-ಜೀವನದಲ್ಲಿ ಪ್ರತಿಯೊಂದು ಬಗೆಯಿಂದ ಕೂಡಿ ನಡೆಯುತಿದ್ದರು. ಇವರು ತಿಳಿದವರಾದುದರಿಂದ ಬೇನೆ ಬಿದ್ದ ಇಲ್ಲವೆ ಸಂಕಟದಲ್ಲಿದ್ದ ಪ್ರತಿಯೊಬ್ಬನೂ ಇವರ ಬಳಿಗೆ ಹೋಗುತ್ತಿದ್ದನು. ಇವರು ಜನರಿಗಾಗಿ ದೊಡ್ಡ-ದೊಡ್ಡ ಹಬ್ಬಗಳನ್ನೂ ಹೂಡುತ್ತಿದ್ದರು. ಸಾಮಾನ್ಯ ಜನರಿಗಾಗಿ ಆಗಿನ ಕಾಲದಲ್ಲಿ ಪಂಚಾಂಗಗಳಿದ್ದಿಲ್ಲ. ಹಬ್ಬಗಳಿಂದ ಎಣಿಕೆ ಹಾಕಿಕೊಳ್ಳುತಿದ್ದರು.

ಪೂಜಾರಿಗಳು ಹೆಚ್ಚು ಸಲ ಜನರನ್ನು ಮೋಸಗೊಳಿಸುತ್ತ ತಪ್ಪು ದಾರಿಗೆ ಎಳೆಯುತಿದ್ದರು. ಆದರೂ ಇವರು ಬಗೆ-ಬಗೆಯಿಂದ ಜನರಿಗೆ ನೆರವಾಗುತ್ತ ಜನರು ಮುಂದುವರಿಯುವಂತೆ ಮಾಡಿದರು.

ಜನರು ಮೊಟ್ಟ-ಮೊದಲು ಪಟ್ಟಣಗಳಲ್ಲಿ ನೆಲೆ-ಗೊಂಡ ಕಾಲದಲ್ಲಿ ಈ ಪೂಜಾರಿ ವರ್ಗದವರೇ ನಾಡಿನ ಆಡಳಿತಗಾರರಾಗಿರಬಹುದು. ಅರಸರು ಆ ಮೇಲೆ ಮುಂದೆ ಬಂದು ಇವರನ್ನು ಹಿಂದೆ ಸರಿಸಿರಬಹುದು. ಯಾಕೆಂದರೆ ಅರಸರು ಪೂಜಾರಿಗಳಿಗಿಂತ ಯುದ್ಧ ಕಲೆಯನ್ನು ಚೆನ್ನಾಗಿ ಅರಿತವರಾಗಿದ್ದರು. ಮಿಸ್ರ ದೇಶದಲ್ಲಿಯ ಫೆರೊಗಳಂತೆ ಕೆಲವೆಡೆಗಳಲ್ಲಿ ಅರಸನೂ ಪೂಜಾರಿಯೂ ಒಬ್ಬನೇ ಆಗಿದ್ದನು. ಫೆರೋಗಳು ಬದುಕಿರುವಾಗ ಅರ್ಧ ದೇವಾಂಶರೆಂದೂ ಅರ್ಧ ಮನುಷ್ಯರೆಂದೂ ಜನರು ತಿಳಿಯುತಿದ್ದರು. ಸತ್ತ ಕೂಡಲೇ ದೇವತೆಗಳೆಂದು ತಿಳಿದು ಇವರನ್ನು ಪೂಜಿಸುತಿದ್ದರು.

೨೬

ಹಿನ್ನೋಟ

ನನ್ನ ಪತ್ರಗಳಿಂದ ನಿನಗೆ ಬೇಸರಿಕೆಯುಂಟಾಗಿರುವುದಲ್ಲವೆ? ನಿನಗೆ ಸ್ವಲ್ಪ ವಿಶ್ರಾಂತಿ ಬೇಕೆಂದು ನನಗೆ ಎನಿಸುತ್ತದೆ. ಇನ್ನು ಸ್ವಲ್ಪ ಕಾಲದ ವರೆಗೆ ನಾನು ಹೊಸ ಸಂಗತಿಗಳನ್ನು ಬರೆಯುವುದಿಲ್ಲ. ನಾವು ಈ ವರೆಗೆ ಚರ್ಚೆ ಮಾಡಿದುದನ್ನಷ್ಟೆ ನೀನು ಚೆನ್ನಾಗಿ ತಿಳಿದುಕೊಂಡರೆ ಸಾಕು. ನಾವು ಕೆಲವೇ ಪತ್ರಗಳಲ್ಲಿ ಲಕ್ಷಾವಧಿ ವರುಷಗಳನ್ನು ಭರದಿಂದ ದಾಟಿ ಬಂದಿರುವೆವು. ಭೂಮಿ ಸೂರ್ಯನ ಒಂದಂಶವಾಗಿದ್ದ ಕಾಲದಿಂದ ನಾವು ಹೊರಟು ಅದು ಸೂರ್ಯನಿಂದ ಸಿಡಿದು ಬೇರೆಯಾಗಿ ಮೆಲ್ಲ-ಮೆಲ್ಲನೆ ಹೇಗೆ ತಣ್ಣಗಾಗುತ್ತ ನಡೆಯಿತೆಂಬುದನ್ನು ನೋಡಿಕೊಂಡೆವು. ಆ ಮೇಲೆ ಚಂದ್ರನು ಭೂಮಿಯಿಂದ ಸಿಡಿದು ಬೇರೆಯಾದನು. ಭೂಮಿಯಲ್ಲಿ ಎಷ್ಟೋ ಕಾಲದ ವರೆಗೆ ಪ್ರಾಣಿಗಳ ಸುಳಿವೇ ಇದ್ದಿಲ್ಲ. ಲಕ್ಷಾವಧಿ ವರುಷಗಳಲ್ಲಿ ಪ್ರಾಣಿಗಳು ಮೆಲ್ಲ-ಮೆಲ್ಲನೆ ಬೆಳೆಯತೊಡಗಿದುವು. ಲಕ್ಷಾವಧಿ ವರುಷಗಳ ಕಾಲವೆಂದರೆ ಎಷ್ಟೆಂಬುದನ್ನು ನೀನು ಬಲ್ಲೆಯಾ? ಅದನ್ನು ತಿಳಿದುಕೊಳ್ಳುವುದು ಗಡಚಾದ ಕೆಲಸ. ನೀನು ಬರಿಯ ಹತ್ತು ವರುಷದವಳು. ಆಗಲೇ ಬೆಳೆದು ಎಷ್ಟು ದೊಡ್ಡವಳಾಗಿರುವೆಯಲ್ಲ! ನೀನು ಇನ್ನೂ ಮಗು. ನೂರು ವರುಷಗಳೆಂದರೇ ನಿನಗೊಂದು ಬಹಳ ದೊಡ್ಡದಾದ ಕಾಲ! ಆ ಮೇಲೆ ಒಂದು ಸಾವಿರ! ಸಾವಿರಕ್ಕೆ ನೂರು-ಪಟ್ಟು ಎಂದರೆ ಒಂದು ಲಕ್ಷ. ಚಿಕ್ಕದಾದ ನಮ್ಮ ತಲೆ ಇಷ್ಟು ದೊಡ್ಡ ಲೆಕ್ಕವನ್ನು ಸರಿಯಾಗಿ ತುಂಬಿಕೊಳ್ಳಲಾರದೆಂದು ನನ್ನ ತಿಳಿವಳಿಕೆ. ನಾವು ಬಹಳ ಶ್ರೇಷ್ಠರೆಂದು ನಾವು ತಿಳಿದುಕೊಳ್ಳುತ್ತೇವೆ. ಸಣ್ಣ-ಪುಟ್ಟ ಸಂಗತಿಗಳು ನಮ್ಮ ಮನಸ್ಸನ್ನು ನೋಯಿಸುತ್ತ ನಮ್ಮನ್ನು ಹಣ್ಣುಮಾಡುತ್ತವೆ. ಆದರೆ ಜಗತ್ತಿನ ದೊಡ್ಡ ಇತಿಹಾಸದಲ್ಲಿ ಈ ಸಣ್ಣ-ಪುಟ್ಟ ಸಂಗತಿಗಳು ಎಷ್ಟರವು? ಈ ಐತಿಹಾಸಿಕ ಯುಗಗಳೊಳಗಿನ ಹಲ-ಕೆಲವು ಸಂಗತಿಗಳನ್ನು ಓದಿ ತಿಳಿದುಕೊಳ್ಳುವುದರಿಂದ ಅಲ್ಪ ಸಂಗತಿಗಳಿಗಾಗಿ ನಮಗೆ ಮಿಡುಕು ಉಂಟಾಗುವುದಿಲ್ಲ.

ಹಿಂದೆ, ಯಾವ-ತರದ ಪ್ರಾಣಿಗಳೂ ಇಲ್ಲದ ಹಳೆಯ ಅತಿ ದೀರ್ಘ ಕಾಲವೊಂದಿತ್ತೆಂಬುದನ್ನು ನಾವು ಮರೆಯಕೂಡದು. ಸಮುದ್ರದಲ್ಲಿ ಮಾತ್ರ ಪ್ರಾಣಿಗಳಿದ್ದ ಆ-ಮೇಲಿನ ದೀರ್ಘ ಕಾಲವನ್ನೂ ನಾವು ನೆನಪಿನಲ್ಲಿಡಬೇಕು. ಭೂಮಿಯ ಮೇಲೆ ಎಲ್ಲಿಯೂ ಆಗ ಮನುಷ್ಯನಿದ್ದಿಲ್ಲ. ಪಶುಗಳು ಹುಟ್ಟಿ ಲಕ್ಷೋಪಲಕ್ಷ ವರುಷಗಳ ತನಕ ಕಂಡ-ಕಂಡಲ್ಲಿ ಅಡ್ಡಾಡುತ್ತಿರುವವು. ಅವನ್ನು ಕೊಲ್ಲುವ ಮನುಷ್ಯನಿಲ್ಲ. ಕಟ್ಟ-ಕಡೆಗೆ ಮನುಷ್ಯ-ಪ್ರಾಣಿ ಬರುವನು. ಅವನು ಅನೇಕ ಪ್ರಾಣಿಗಳಿಗಿಂತ ದುರ್ಬಲನು, ಸಣ್ಣ ವಸ್ತು. ಮೆಲ್ಲ-ಮೆಲ್ಲನೆ ಸಾವಿರಾರು ವರುಷಗಳಲ್ಲಿ ಅವನು ಬಲಗೊಳ್ಳುತ್ತ ಬುದ್ಧಿವಂತನಾಗುತ್ತ ನಡೆದನು. ಕೊನೆಗೆ ಅವನೇ ಭೂಮಿಯ ಮೇಲೆ ಪ್ರಾಣಿಗಳ ಒಡೆಯನಾದನು. ಉಳಿದ ಎಲ್ಲ ಪ್ರಾಣಿಗಳು ಅವನ ಅಪ್ಪಣೆಯಂತೆ ನಡೆದುಕೊಳ್ಳುವ ಅಡಿಯಾಳಾದುವು.

ಅಲ್ಲಿಂದ ನಾಗರಿಕತೆಯ ಬೆಳವಣಿಗೆಯಾದುದು ನಮಗೆ ಕಂಡು ಬರುತ್ತದೆ. ನಾಗರಿಕತೆಯ ತೀರ ಮೊದಲಿನ ಆರಂಭವನ್ನು ನಾವು ಈ ಮೊದಲೇ ತಿಳಿದುಕೊಂಡಿರುವೆವು. ಇನ್ನು-ಮುಂದೆ ನಾವು ಅದನ್ನು ಹಿಂಬಾಲಿಸುತ್ತ ಹೋಗೋಣ. ನಾವು ಈಗ ಲಕ್ಷಾವಧಿ ವರುಷಗಳನ್ನು ದಾಟುವ ಅವಶ್ಯಕತೆ ಇಲ್ಲ. ನಾವು ಈಗ, ನಾವು ಬದುಕಿರುವ ಕಾಲಕ್ಕಿಂತ ಬರಿಯ ನಾಲ್ಕು ಅಥವಾ ಐದು ಸಾವಿರ ವರುಷಗಳ ಹಿಂದಿನ ಕಾಲದ-ವರೆಗೆ ಬಂದು ಮುಟ್ಟಿರುವೆವು. ಸಂದು-ಹೋದ ಲಕ್ಷಾವಧಿ ವರುಷಗಳ ಸಂಗತಿಗಳಿಗಿಂತ ಈ ನಾಲ್ಕೈದು ಸಾವಿರ ವರುಷಗಳ ಸಂಗತಿಗಳು ನಮಗೆ ಹೆಚ್ಚಾಗಿ ತಿಳಿಯುತ್ತವೆ. ಮನುಷ್ಯನ ಬೆಳವಣಿಗೆಯಾದುದು ಮತ್ತು ಅವನ ಇತಿಹಾಸ ರೂಪುಗೊಂಡುದು ನಿಜವಾಗಿ ಇದೇ ಅವಧಿಯಲ್ಲಿ. ನೀನು ದೊಡ್ಡವಳಾದ ಮೇಲೆ ಈ ಇತಿಹಾಸವನ್ನು ಓದಿಕೊಳ್ಳಬಹುದು. ನಮ್ಮ ಪುಟ್ಟ ಜಗತ್ತಿನಲ್ಲಿ ಮಾನವನಿಗೆ ಯಾವ-ಯಾವ ಸಂಗತಿಗಳು ಒದಗಿದುವೆಂಬುದನ್ನು ತಿಳಿಯಲು ನಿನಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ನಾನು ಬರೆಯುವೆನು.

೨೭

ಮೀನು-ಗಲ್ಲುಗಳ ಚಿತ್ರಗಳು

ನಾನು ನಿನಗೆ ಚಿತ್ರದ ಕೆಲವು ಕಾರ್ಡುಗಳನ್ನು ಕಳಿಸಿರುವೆನು. ಬೇಸರಗೊಳಿಸುವ ಉದ್ದವಾದ ನನ್ನ ಪತ್ರಗಳಿಗಿಂತ ಹೆಚ್ಚಾಗಿ ಇವು ನಿನ್ನನ್ನು ಮೆಚ್ಚಿಸಬಹುದು ! ಇವು ಲಂಡನ್ ನಗರದ ಸೌಥ್ ಕೆನ್ಸಿಂಗ್ ಟನ್ ಸಂಗ್ರಹಾಲಯದ ಮೀನು-ಗಲ್ಲುಗಳ ಚಿತ್ರಗಳು. ನೀನು ಇವನ್ನು ಅಲ್ಲಿ ನೋಡಿರಬಹುದು. ಹಿಂದಿನ ಕಾಲದ ಮೀನುಗಳು ಹೇಗಿದ್ದು ವೆಂಬುದನ್ನು ಈ ಚಿತ್ರಗಳಿಂದ ನೀನು ತುಸು ತಿಳಿದುಕೊಳ್ಳಬಹುದು.

ಗಟ್ಟಿ ಕಲ್ಲಾಗಿ ಉಳಿದಿರುವ ಪುರಾತನ ಕಾಲದ ಪಶು, ಗಿಡ-ಬಳ್ಳಿ ಗಳೇ ಫಾಸಿಲ್ಲುಗಳೆಂದು ನಾನು ನಿನಗೆ ಹೇಳಿರುವೆನು. ಇವು ಗುಡ್ಡ ಮುಂತಾದ ಎಡೆಗಳಲ್ಲಿ ದೊರೆಯುವವು. ಪ್ರಾಣಿಗಳ ಮೆತ್ತಗಿನ ಭಾಗ ಉಳಿದಿರುವುದಿಲ್ಲ. ಬಿರುಸಾದ ಎಲುಬಿನ ಭಾಗಗಳು ಮಾತ್ರ ಬಹಳ ಕಾಲದ ವರೆಗೆ ಉಳಿದಿರುತ್ತವೆ. ಅವುಗಳಲ್ಲಿ ಅನೇಕ, ಸಮುದ್ರದ ತಳದಲ್ಲಿ ಮೆತ್ತಗಿನ ಒಂಡಿನಿಂದ ಮುಚ್ಚಿ ಹೋಗಿ ಹಾಗೆಯೆ ಉಳಿದು ಕೊಂಡಿರುತ್ತವೆ. ಕಾಲ-ಕಳೆದಂತೆ ಆ ಮೆತ್ತಗಿನ ಕೆಸರು ಗಟ್ಟಿಯಾಗಿ ಸಮುದ್ರದ ತಳದಲ್ಲಿ ಹೊರಬಿದ್ದು ಒಣಗಿದ ನೆಲವಾಗುತ್ತದೆ. ಆದುದ ರಿಂದ ಗಟ್ಟಿ ಕಲ್ಲಾಗಿ ಉಳಿದ ಈ ಅವಶೇಷಗಳು ಒಣಗಿದ ನೆಲದಲ್ಲಿ ಈಗ ನಮಗೆ ದೊರೆಯುತ್ತವೆ.

ಗುಡ್ಡಗಳಲ್ಲಿ ದೊರೆತ ಇಂತಹ ಕೆಲವು ಅವಶೇಷಗಳು ಚಿತ್ರಗಳ ಲ್ಲಿವೆ. ಇವು ಅಷ್ಟು ನಿಚ್ಚಳವಾಗಿಲ್ಲ. ಇವುಗಳಲ್ಲಿ ಎರಡು ಮಾತ್ರ ಮಾದರಿಗಳಿವೆ. ಎಂದರೆ ದಿಟವಾದ ಅವಶೇಷಗಳನ್ನು ಹೋಲುವಂತೆ ರಚಿಸಲಾಗಿವೆ.

ಇವುಗಳೊಳಗಿನ ಒಂದು ಅವಶೇಷದಲ್ಲಿ ಬರಿಯ ಹಲ್ಲುಗಳು ಮಾತ್ರ ಕಾಣುತ್ತವೆ.

ಗ ೨೦, ಮತ್ತು ಗ ೨೭, ಈ ಚಿತ್ರಗಳು ಬಹಳ ಸೊಗಸಾಗಿವೆ ಯೆಂದು ನನಗೆ ಎನಿಸುತ್ತದೆ. ಮೀನುಗಳು ಗುಡ್ಡದ ಮೇಲೆ ತಮ್ಮ ಆಕಾರಗಳನ್ನು ಹೇಗೆ ಬಿಟ್ಟಿರುವವೆಂಬುದು ಇದರಿಂದ ನಿಚ್ಚಳವಾಗಿ ಕಾಣುತ್ತದೆ. ಲಕ್ಷಾವಧಿ ವರುಷಗಳ ನಂತರ ಈಗಲೂ ಈ ಆಕಾರ ಗಳನ್ನು ನೋಡಿ ಇವು ಬದುಕಿದ್ದವೆಂದು ಹೇಳಬಲ್ಲೆವು.

ಈ ಚಿತ್ರದ ಕಾರ್ಡುಗಳನ್ನು ಅವುಗಳ ವಿವರವನ್ನು ಬರೆದ ಕಾಗದ ಗಳೊಂದಿಗೆ, ಇತರ ಒಡವೆಗಳಲ್ಲಿ ಬೆರೆಯದಂತೆ, ಕಾಗದದ ಚೀಲದಲ್ಲಿ ಜೋಕೆಯಿಂದ ಇಟ್ಟುಕೊ.

೨೮

ಫಾಸಿಲ್ಲುಗಳು ಮತ್ತು ಹಾಳು ಕಟ್ಟಡಗಳು

ನಾನು ನಿನಗೆ ಓಲೆ ಬರೆಯದೆ ಬಹಳ ದಿನಗಳಾದವು. ನಾವು ನಮ್ಮ ಪತ್ರಗಳಲ್ಲಿ ಚರ್ಚಿಸಿದ ಹಿಂದಿನ ಕಾಲದ ಎಲ್ಲ ಸಂಗತಿಗಳನ್ನೂ ಕೊನೆಯ ಎರಡು ಪತ್ರಗಳಲ್ಲಿ ಮತ್ತೊಮ್ಮೆ ನೋಡಿಕೊಂಡಿರುವೆವು. ಮೀನು-ಗಲ್ಲುಗಳು ಹೇಗಿರುತ್ತವೆಂಬುದನ್ನು ನಿನಗೆ ತಿಳಿಯಲೆಂದು ನಾನು ನಿನಗೆ ಚಿತ್ರದ ಕೆಲವು ಕಾರ್ಡುಗಳನ್ನು ಕಳಿಸಿರುವೆನು. ನಾವಿಬ್ಬರೂ ಮಸೂರಿಯಲ್ಲಿ ಕೂಡಿದ್ದಾಗ ಇತರ ಅವಶೇಷಗಳ ಚಿತ್ರಗಳನ್ನೂ ನಿನಗೆ ತೋರಿಸಿರುವೆನು.

ನೆಲ-ಸವರಿ ನಡೆಯುವ ಹುಳಗಳ ಅವಶೇಷಗಳ ಚಿತ್ರಗಳು ನಿನ್ನ ನೆನಪಿನಲ್ಲಿರಬಹುದು. ಹುಳಗಳೆಂದರೆ ಹಾವು, ಹಲ್ಲಿ, ಮೊಸಳೆ, ಮತ್ತು ಆಮೆಯಂತಹ ಸಾಮಾನ್ಯವಾಗಿ ನೆಲವನ್ನು ಸವರುತ್ತ ನಡೆಯುವ ಪ್ರಾಣಿಗಳು. ಈ ಹುಳಗಳ ಜಾತಿಗೆ ಸೇರಿದ ಬೇರೆ ಕೆಲವು ಬಹಳ ದೊಡ್ಡ ಪ್ರಾಣಿಗಳು ಹಿಂದಿನ ಕಾಲದಲ್ಲಿದ್ದುವು. ಆದರೆ ಇವು ಬಹಳ ದೊಡ್ಡವಾಗಿಯೂ ತೀರ ಬೇರೆಯಾಗಿಯೂ ಇದ್ದುವು. ಸೌಥ್ ಕೆನ್ಸಿಂಗ್ಟನ್ ಸಂಗ್ರಹಾಲಯದಲ್ಲಿ ದೊಡ್ಡ ಪಶುಗಳನ್ನು ನೋಡಿದ್ದು ನಿನಗೆ ನೆನಪಿರಬಹುದು. ಅವುಗಳಲ್ಲಿ ಒಂದು ೩೦-೪೦ ಅಡಿ ಉದ್ದವಿತ್ತು. ಇದಲ್ಲದೆ ಮನುಷ್ಯನಿಗಿಂತ ದೊಡ್ಡದಾದ ಕಪ್ಪೆಯೊಂದಿತ್ತು. ಅಷ್ಟೇ ದೊಡ್ಡದಾದ ಒಂದು ಆನೆಯೂ ಇತ್ತು. ಬಹು ದೊಡ್ಡ ಬಾವಲಿಗಳು ಅಲ್ಲಿ ಹಾರಾಡುತಿದ್ದುವು. ಯುಗಾನೋಡನ್ ಪ್ರಾಣಿಯೊಂದು ಎದ್ದು ನಿಂತಾಗ ಒಂದು ಸಣ್ಣ ಗಿಡದಷ್ಟು ಎತ್ತರವಾಗಿತ್ತು.

ಹಿಂದಿನ ಕಾಲದ ಹಳೆಯ ಸಸಿಗಳ ಅವಶೇಷಗಳನ್ನೂ ನೀನು ನೋಡಿರುವೆ. ಇವು ಕಲ್ಲಿನಲ್ಲಿ ಮೂಡಿದ ಸುಂದರವಾದ ಗಿಡ, ಕೊಲ್ಲೆ ಮತ್ತು ಎಲೆಗಳ ಗುರುತುಗಳಾಗಿದ್ದುವು.

ಹುಳಗಳ ಜಾತಿಗೆ ಸೇರಿದ ನೆಲ-ಸವರುವ ಪ್ರಾಣಿಗಳ ಎಷ್ಟೋ ಕಾಲದ ನಂತರ ಮೊಲೆ-ಯುಣಿಸುವ ಮತ್ತೊಂದು ಜಾತಿಯ ಪ್ರಾಣಿ ಹುಟ್ಟಿ ಬಂತು. ನಾವು ನೋಡುತ್ತಿರುವ ನಮ್ಮ ಸುತ್ತು-ಮುತ್ತಲಿದ್ದ ಎಷ್ಟೋ ಪ್ರಾಣಿಗಳು ಮತ್ತು ಮನುಷ್ಯನು ಕೂಡ ಈ ಜಾತಿಗೆ ಸೇರಿದ ಪ್ರಾಣಿಗಳು. ಆಗಿನ ಕಾಲದ ಮೊಲೆಯೂಡುವ ಪ್ರಾಣಿಗಳು ಈಗಿನ ಅದೇ ಜಾತಿಯ ಕೆಲವು ಪ್ರಾಣಿಗಳಿಗಿಂತ ಅಷ್ಟೇನೂ ಬೇರೆಯಾಗಿರಲಿಲ್ಲ. ಅವು ದೊಡ್ಡವಿದ್ದರೂ ನೆಲ-ಸವರುವ ಪ್ರಾಣಿಗಳಷ್ಟು ದೊಡ್ಡವಾಗಿರಲಿಲ್ಲ. ಆಗ ಅದ್ಭುತವಾದ ಕೋರೆಗಳುಳ್ಳ ಆನೆಗಳು ಮತ್ತು ಬಹು ದೊಡ್ಡ ಕರಡಿಗಳಿದ್ದುವು.

ಮನುಷ್ಯನೂ ಅವಶೇಷವಾಗಿ ಉಳಿದುದನ್ನು ನೀನು ನೋಡಿರುವೆ. ಇವು ಸಾಮಾನ್ಯವಾಗಿ ಬರಿಯ ಡವಗೆ ಮತ್ತು ಎಲುಬುಗಳಿದ್ದುದರಿಂದ ಚಿತ್ತಾಕರ್ಷಕವಾಗಿಲ್ಲ. ಜನರು ತಮ್ಮ ಉಪಯೋಗಕ್ಕೆಂದು ಮಾಡಿಕೊಂಡಿದ್ದ ಹಳಗಾಲದ ಬೆಣಚು-ಗಲ್ಲುಗಳ ಆಯುಧಗಳು ಬಹಳ ಮನೋರಂಜಕವಾಗಿದ್ದುವು.

ಇಜಿಪ್ತು ದೇಶದ ಗುಮ್ಮಟ ಮತ್ತು ಹಳೆಯ ಹೆಣಗಳ ಸುಂದರವಾದ ಚಿತ್ರಗಳನ್ನು ನಾನು ನಿನಗೆ ತೋರಿಸಿರುವೆನು ಇವುಗಳಲ್ಲಿ ಕೆಲವು ಬಹಳ ಸುಂದರವಾಗಿದ್ದುದು ನಿನಗೆ ನೆನಪಿರಬಹುದು. ಹೆಣದ ಪೆಟ್ಟಿಗೆಯ ಮೇಲೆ ಆ ಜನರ ದೊಡ್ಡ ಕತೆಗಳನ್ನು ಚಿತ್ರಿಸಲಾಗಿದೆ. ಮಿಸ್ರ ದೇಶದ ಥೀಬ್ಸ್ (Thebes) ಎಂಬ ಸ್ಥಳದಲ್ಲಿ ಗುಮ್ಮಟಗಳ ಮೇಲಿನ ಚಿತ್ರಗಳು ಬಹಳ ಮನೋಹರವಾಗಿದ್ದುವು.

ಇಜಿಪ್ತಿನೊಳಗಿನ ಥೀಬ್ಸಿನ ಹಾಳು ಅರಮನೆ ಮತ್ತು ಗುಡಿಗಳ ಚಿತ್ರಗಳನ್ನು ಕೂಡ ನೀನು ನೋಡಿರುವೆ. ಅದ್ಭುತವಾದ ಕಂಬಗಳುಳ್ಳ ಭವ್ಯವಾದ ಕಟ್ಟಡಗಳಿವು. ಥೀಬ್ಸಿನ ಹತ್ತಿರ ಬಹಳ ದೊಡ್ಡ ಮೂರ್ತಿಯೊಂದಿರುವದು.

ಉತ್ತರ ಇಜಿಪ್ತಿನ ಕಾರ್ನಾಕ್ ಎಂಬಲ್ಲಿಯ ಹಾಳು ಗುಡಿಗಳ ಮತ್ತು ಕಟ್ಟಡದ ಚಿತ್ರಗಳನ್ನು ಕೂಡ ನೀನು ನೋಡಿರುವೆ. ಹಿಂದಿನ

ಕಾಲದ ಮಿಸ್ರ ದೇಶದ ಗೋಡೆಕಾರರು ಕಟ್ಟುವುದರಲ್ಲಿ ಎಷ್ಟು ನಿಪುಣರಾಗಿದ್ದರೆಂಬುದನ್ನು ಈ ಹಾಳು ಗುಡಿಗಳಿಂದ ನೀನು ತುಸು-ಮಟ್ಟಿಗೆ ಊಹಿಸಬಹುದು. ಇವರು ಶಿಲ್ಪ-ಶಾಸ್ತ್ರವನ್ನು ಚೆನ್ನಾಗಿ ಅರಿಯದ ಹೊರತು ಇಂಥಹ ದೊಡ್ಡ ಕಟ್ಟಡಗಳನ್ನು ಕಟ್ಟುವುದು ಸಾಧ್ಯವಿರಲಿಲ್ಲ.

ನಾವು ನಮ್ಮ ಕಿರಿದಾದ ಹಿನ್ನೋಟವನ್ನು ಈಗ ಮುಗಿಸಿದೆವು. ಮುಂದಿನ ಓಲೆಯಲ್ಲಿ ನಾವು ಮುಂದಿನ ವಿಷಯವನ್ನು ನೋಡೋಣ.

೨೯

ಹಿಂದುಸ್ತಾನಕ್ಕೆ ಆರ್ಯರು ಬಂದರು

ಇಲ್ಲಿಯ ವರೆಗೆ ನಾವು ಅತಿ ಪುರಾತನ ಕಾಲದ ಸಂಗತಿಗಳನ್ನು ಚರ್ಚಿಸಿದೆವು. ಮನುಷ್ಯನ ಬೆಳವಣಿಗೆ ಹೇಗಾಯಿತು, ಮತ್ತು ಅವನು ಏನೇನು ಮಾಡುತ್ತ ಬಂದನೆಂಬುದನ್ನು ನಾವು ಇನ್ನು ಮುಂದೆ ನೋಡೋಣ. ಈ ಎಲ್ಲ ಹಿಂದಿನ ಕಾಲಗಳಿಗೆ ಐತಿಹಾಸಿಕ ಕಾಲಕ್ಕಿಂತ ಮೊದಲಿನ ಕಾಲಗಳೆಂದು ಹೆಸರು. ಯಾಕೆಂದರೆ ಆ ಕಾಲಗಳಲ್ಲಿ ನಿಜವಾದ ಇತಿಹಾಸವಿದ್ದಿಲ್ಲ. ಎಷ್ಟೋ ಸಂಗತಿಗಳನ್ನು ನಾವು ಊಹಿಸಬೇಕಾಗುತ್ತದೆ. ಈಗ ನಾವಿರುವುದು ಇತಿಹಾಸದ ಅಂಚೆಯ ತುದಿಯಲ್ಲಿ.

ಹಿಂದುಸ್ತಾನದಲ್ಲಿ ಏನಾಯಿತೆಂಬುದನ್ನು ನಾವು ಮೊದಲು ತಿಳಿದುಕೊಳ್ಳೋಣ. ಮಿಸ್ರ ದೇಶದಂತೆ ಬಹಳ ಪ್ರಾಚೀನ ಕಾಲದಲ್ಲಿ ಭರತ ಭೂಮಿಯಲ್ಲಿಯೂ ಸಂಸ್ಕೃತಿ ನೆಲೆಗೊಂಡಿದ್ದುದನ್ನು ನಾವು ಈಗಾಗಲೆ ನೋಡಿಕೊಂಡಿರುವೆವು. ವ್ಯಾಪಾರ ನಡೆಯುತಿತ್ತು; ಹಡಗುಗಳು ಹಿಂದುಸ್ತಾನದಿಂದ ಇಜಿಪ್ತು, ಮೆಸಪೊಟಮಿಯ, ಮತ್ತು ಇನ್ನುಳಿದ ನಾಡುಗಳಿಗೆ ಸರಕನ್ನು ಸಾಗಿಸಿಕೊಂಡು ಹೋಗುತಿದ್ದುವು. ಆಗಿನ ಕಾಲದಲ್ಲಿ ಹಿಂದುಸ್ತಾನದಲ್ಲಿದ್ದ ಜನರಿಗೆ ದ್ರಾವಿಡರೆಂದು ಹೆಸರು. ದಕ್ಷಿಣದಲ್ಲಿ ಮದ್ರಾಸಿನ ಸುತ್ತು-ಮುತ್ತು ಇರುತ್ತಿರುವ ಜನರ ಪೂರ್ವಜರೇ ಈ ದ್ರಾವಿಡರು.

ಈ ದ್ರಾವಿಡ ಜನರ ಮೇಲೆ ಆರ್ಯರು ಉತ್ತರದಿಂದ ದಾಳಿ ಮಾಡಿದರು. ಮಧ್ಯ ಏಸಿಯದಲ್ಲಿ ಈ ಆರ್ಯ ಜನರ ದೊಡ್ಡ ಗುಂಪು ಇದ್ದಿರಬಹುದು. ಇವರಿಗೆ ಸಾಕಾಗುವಷ್ಟು ಕಾಳು-ಕಡಿ ಹುಟ್ಟದಿದ್ದುದರಿಂದ ಇವರು ಬೇರೆ ಬೇರೆ ದೇಶಗಳಲ್ಲಿ ಹರಡಿದರು. ಇವರು ದೊಡ್ಡ ದೊಡ್ಡ ಸಮುದಾಯದೊಡನೆ ಪರ್ಸಿಯಕ್ಕೂ ಗ್ರೀಸಿಗೂ ಅದರಂತೆ ಮುಂದೆ ಅತಿ ಪಶ್ಚಿಮಕ್ಕೂ ತೆರಳಿದರು. ಇವರು ಹಿಂದುಸ್ಥಾನಕ್ಕೂ ಕಾಶ್ಮೀರ ಪರ್ವತಗಳನ್ನು ದಾಟಿ ಗುಂಪು-ಗುಂಪಾಗಿ ಬಂದರು.

ಆರ್ಯರು ಕದನದಲ್ಲಿ ಕಲಿಗಳು. ತಮಗೆ ಎದುರಾದ ದ್ರಾವಿಡರನ್ನು ಹಿಂದಕ್ಕಟ್ಟಿದರು. ವಾಯುವ್ಯದಿಂದ ಆರ್ಯರು ತೆರೆಗಳಂತೆ ತಂಡ-ತಂಡವಾಗಿ ಹಿಂದುಸ್ತಾನಕ್ಕೆ ಬಂದಿರಬೇಕು. ದ್ರಾವಿಡರು ಮೊದಲು ಇವರನ್ನು ತಡೆದು ಹಿಡಿದಿರಬಹುದು. ಆದರೆ ಆರ್ಯರು ಹೆಚ್ಚು-ಹೆಚ್ಚಾಗಿ ಬರುತ್ತಿದ್ದುದರಿಂದ ಇವರನ್ನು ತಡೆಯುವುದಾಗಲಿಲ್ಲ. ಎಷ್ಟೋ ಕಾಲದ ವರೆಗೆ ಆರ್ಯರು ಉತ್ತರದ ಅಫಗಾಣಿಸ್ತಾನ ಮತ್ತು ಪಂಜಾಬಿನಲ್ಲಿಯೆ ಉಳಿದರು. ಅಲ್ಲಿಂದ ಈಗ ನಾವಿರುವ ಸಂಯುಕ್ತ ಪ್ರಾಂತಕ್ಕೆ ಸಾಗಿ-ಬಂದರು. ಇವರು ಮಧ್ಯ ಹಿಂದುಸ್ತಾನದಲ್ಲಿರುವ ವಿಂಧ್ಯ ಪರ್ವತಗಳ ವರೆಗೆ ಹರಡುತ್ತ ನಡೆದರು. ಅಲ್ಲಿ ಘನವಾದ ಅಡವಿಗಳಿದ್ದುದರಿಂದ ಅವುಗಳನ್ನು ದಾಟಿ ಮುಂದೆ ಹೋಗುವುದು ಬಹಳ ಗಡಚಾಗಿತ್ತು. ಆದುದರಿಂದ ಆರ್ಯರು ಎಷ್ಟೋ ಕಾಲದ ವರೆಗೆ ವಿಂಧ್ಯ ಪರ್ವತಗಳ ಉತ್ತರ ಸೀಮೆಯಲ್ಲಿಯೆ ಉಳಿದರು. ಇವರೊಳಗಿನ ಎಷ್ಟೋ ಜನರು ಈ ಅಡವಿಗಳನ್ನು ಎಷ್ಟೋ ತೊಂದರೆಗಳನ್ನನುಭವಿಸಿ ದಾಟಿ ದಕ್ಷಿಣಕ್ಕೆ ತೆರಳಿದರು. ಆದರೆ ಇವುಗಳನ್ನು ಜನ-ಜಂಗುಳಿಯಿಂದ ದಾಟುವುದಾಗಲಿಲ್ಲ. ಅದುದರಿಂದ ದಕ್ಷಿಣ ಮುಖ್ಯವಾಗಿ ಬರಿಯ ದ್ರಾವಿಡರದಾಗಿಯೆ ಉಳಿಯಿತು.

ಆರ್ಯರು ಹಿಂದುಸ್ತಾನಕ್ಕೆ ಬರುವುದನ್ನು ತಿಳಿದುಕೊಳ್ಳುವುದು ಬಹಳ ಮನೋರಂಜಕವಾದ ವಿಷಯ. ನಮ್ಮ ಹಳೆಯ ಸಂಸ್ಕೃತ ಪುಸ್ತಕಗಳಿಂದ ಈ ಬಗೆಗೆ ಅನೇಕ ಸಂಗತಿಗಳು ಗೊತ್ತಾಗುವವು. ವೇದ ಮೊದಲಾದ ಈ ಹಳೆಯ ಪುಸ್ತಕಗಳು ಆಗಿನ ಕಾಲದಲ್ಲಿ ರಚನೆಯಾಗಿದ್ದಿರಬೇಕು. ಋಗ್ವೇದವೆ ಎಲ್ಲಕ್ಕಿಂತ ಹಳೆಯ ವೇದ. ಆರ್ಯರು ನೆಲೆಗೊಂಡಿದ್ದ ಹಿಂದುಸ್ತಾನದ ಭಾಗದ ಕಲ್ಪನೆ ಇದರಿಂದ ನಿನಗೆ ಆಗುವುದು. ಇನ್ನುಳಿದ ವೇದಗಳಿಂದಲೂ ಪುರಾಣಗಳಂತಹ ಸಂಸ್ಕೃತ ಹಳೆಯ ಗ್ರಂಥಗಳಿಂದಲೂ ಆರ್ಯರು ಹೇಗೆ ಹರಡಿದರೆಂಬುದು ನಮಗೆ ಗೊತ್ತಾಗುತ್ತದೆ. ಈ ಹಳೆಯ ಪುಸ್ತಕಗಳನ್ನು ಕುರಿತು ನಿನಗೆ ಹೆಚ್ಚಿಗೆ ಗೊತ್ತಿರಲಾರದು. ನೀನು ದೊಡ್ಡವಳಾದಾಗ ನಿನಗೆ ಹೆಚ್ಚಾಗಿ ಗೊತ್ತಾಗುವುದು. ಪುರಾಣದಲ್ಲಿಯ ಎಷ್ಟೋ ಕತೆ

ಗಳು ಈಗಲೂ ನಿನಗೆ ಗೊತ್ತಿವೆ. ಬಹಳ ದಿನಗಳಾದ ಮೇಲೆ ರಾಮಾಯಣವೆಂಬ ದೊಡ್ಡ ಗ್ರಂಥವಾಯಿತು. ಅದಕ್ಕೂ ಈಚೆಯ ಕಾಲದಲ್ಲಿ ಮಹಾ-ಭಾರತ ಹುಟ್ಟಿತು.

ಈ ಗ್ರಂಥಗಳಿಂದ ನಮಗೆ ತಿಳಿಯುವುದೇನೆಂದರೆ—ಆರ್ಯರು ಬರಿಯ ಪಂಜಾಬು ಮತ್ತು ಅಫಗಾಣಿಸ್ತಾನದಲ್ಲಿದ್ದಾಗ ಅವರು ಇದಕ್ಕೆ ಬ್ರಹ್ಮಾವರ್ತವೆಂದು ಕರೆಯುತಿದ್ದರು. ಆಗ ಅಫಗಾಣಿಸ್ತಾನಕ್ಕೆ ಗಾಂಧಾರವೆಂಬ ಹೆಸರಿತ್ತು. ಮಹಾ-ಭಾರತದೊಳಗಿನ ಗಾಂಧಾರಿಯ ನೆನಪು ನಿನಗಿದೆಯೆ? ಅವಳು ಗಾಂಧಾರ ದೇಶದವಳಾದುದರಿಂದ ಅವಳಿಗೆ ಗಾಂಧಾರಿಯೆಂಬ ಹೆಸರು ಬಂತು. ಈಗ ಅಫಗಾಣಿಸ್ತಾನ ಹಿಂದುಸ್ತಾನದಿಂದ ಬೇರೆಯಾಗಿದೆ. ಆದರೆ ಆಗ ಈ ಎರಡೂ ದೇಶಗಳು ಒಂದೇ ಆಗಿದ್ದುವು.

೩೦

ಹಿಂದುಸ್ತಾನದ ಆರ್ಯರು ಹೇಗೆ ಇದ್ದರು ?

ಆರ್ಯರು ಹಿಂದುಸ್ತಾನಕ್ಕೆ ಐದಾರು ಸಾವಿರ ವರುಷಗಳ ಹಿಂದೆ ಅಥವಾ ಅದಕ್ಕೂ ಮೊದಲು ಬಂದಿರಬೇಕು. ಇವರೆಲ್ಲರೂ ಒಟ್ಟು-ಗೂಡಿ ಒಂದೇ ಗುಂಪಿನಿಂದ ಬರಲಿಲ್ಲ. ಅವರು ಗುಂಪು-ಗುಂಪಾಗಿ, ತಂಡ-ತಂಡವಾಗಿ, ಕುಟುಂಬದ ಹಿಂದೆ ಕುಟುಂಬವಾಗಿ ನೂರಾರು ವರುಷಗಳ ವರೆಗೆ ಇಲ್ಲಿಗೆ ಬರುತ್ತಿದ್ದಿರಬಹುದು. ಬೀಡಿಕೆಯು ಎತ್ತಿನ ಮೇಲೆ ಇಲ್ಲವೆ ಪಶುಗಳ ಬೆನ್ನಿನ ಮೇಲೆ ತಮ್ಮ ಬಾಳುವೆಯ ಎಲ್ಲ ಸಾಮಾನನ್ನು ಹೇರಿಕೊಂಡು ಈ ಜನರ ಸಾಲಿಗೆ ಸಾಲೇ ಪ್ರವಾಸ ಮಾಡುತ್ತಿರುವ ನೋಟವನ್ನು ಯೋಚಿಸು. ಈಗಿನ ಕಾಲದ ಪ್ರವಾಸಿಗರಂತೆ ಅವರು ಬರಲಿಲ್ಲ. ಹಿಂದಿರುಗುವ ವಿಚಾರವೇ ಅವರದಿರಲಿಲ್ಲ. ಅವರು ಬಂದದ್ದು ಇಲ್ಲಿಯೆ ನೆಲಿಸಲಿಕ್ಕೆ ಇಲ್ಲವೆ ಯುದ್ಧ ಮಾಡಿ ರಣ-ಭೂಮಿಯಲ್ಲಿ ಮಡಿಯಲಿಕ್ಕೆ. ಅವರೊಳಗಿನ ಅನೇಕ ಜನರು, ನಾನು ನಿನಗೆ ಈ ಮೊದಲು ಹೇಳಿದಂತೆ, ವಾಯುವ್ಯದ ಗುಡ್ಡಗಳನ್ನು ದಾಟಿ ಇಲ್ಲಿಗೆ ಬಂದರು. ಆದರೆ ಕೆಲವರು ಮಾತ್ರ ಪರ್ಶಿಯದ ಕೊಲ್ಲಿಯಿಂದ ಕಡಲ ಮೂಲಕ ಬಂದು ತಮ್ಮ ಚಿಕ್ಕ ಹಡಗುಗಳ ಆಶ್ರಯದಿಂದ ಸಿಂಧೂ ನದಿಯ ಮೇಲ್ಭಾಗಕ್ಕೆ ತೆರಳಿರಬಹುದು.

ಈ ಆರ್ಯರು ಹೇಗೆ ಇದ್ದರೆಂಬ ಬಗೆಗೆ ಇವರು ಬರೆದ ಹೊತ್ತಗೆಗಳಿಂದ ನಮಗೆ ಬೇಕಾದಷ್ಟು ತಿಳಿದು ಬರುತ್ತದೆ. ವೇದಗಳಂತಹ ಕೆಲವು ಪುಸ್ತಕಗಳು ಜಗತ್ತಿನ ಅತಿ ಪುರಾತನ ಗ್ರಂಥಗಳಾಗಿರಬಹುದು. ಬಹುಶಃ ಮೊಟ್ಟ-ಮೊದಲು ಇವು ಬರೆದಿಟ್ಟ ಹೊತ್ತಗೆಗಳಾಗಿರಲಾರವು. ಇವುಗಳನ್ನು ಬಾಯಿ-ಪಾಠ ಮಾಡಿ ಇತರರಿಗೆ ಹಾಡಿ ಹೇಳುತ್ತಿದ್ದರು. ಇವು ಇಂಪಾಗಿ ಹಾಡಲು ಬರುವಂತೆ ಲಲಿತವಾದ ಸಂಸ್ಕೃತದಲ್ಲಿ ಬರೆಯಲಾಗಿವೆ. ಸಂಸ್ಕೃತವನ್ನು ಬಲ್ಲ ಇಂಪಾದ ದನಿಯ ಮನುಷ್ಯನೊಬ್ಬನು ವೇದಗಳನ್ನು ಹಾಡುವುದನ್ನು ಕೇಳಲು ಈಗಲೂ ಬಹಳ ಆನಂದ

ವಾಗುತ್ತದೆ. ವೇದಗಳು ಬಲು ಪವಿತ್ರವಾದುವುಗಳೆಂದು ಹಿಂದೂ ಜನರ ತಿಳಿವಳಿಕೆ. ಆದರೆ 'ವೇದ'ವೆಂಬ ಶಬ್ದದ ಅರ್ಥವೇನು ? ವೇದವೆಂದರೆ 'ಜ್ಞಾನ,' ತಿಳಿವಳಿಕೆ ಎಂದರ್ಥ. ಆಗಿನ ಕಾಲದ ಋಷಿಗಳು ಮತ್ತು ಮುನಿಗಳೆಂದೆನ್ನಿಸಿಕೊಂಡ ಬುದ್ಧಿವಂತರು ಸಂಗ್ರಹಿಸಿದ ಜ್ಞಾನವೇ ವೇದಗಳಲ್ಲಿರುವುದು. ಆ ಕಾಲದಲ್ಲಿ ಉಗಿ-ಬಂಡಿ, ತಂತಿ, ಟಪಾಲು, ಮತ್ತು ಚಲಚ್ಚಿತ್ರಗಳಿದ್ದಿಲ್ಲ. ಎಂದರೆ ಇವರು ಮೂಢರಿದ್ದರೆಂದರ್ಥವಲ್ಲ. ಈಗಿನ ಕಾಲದ ಬುದ್ಧಿವಂತರಿಗಿಂತ ಆಗಿನ ಕಾಲದ ಬುದ್ಧಿವಂತರು ಹೆಚ್ಚು ತಿಳಿವಳಿಕೆಯುಳ್ಳವರೆಂದು ಕೆಲವರು ತಿಳಿಯುತ್ತಾರೆ. ಆದರೆ ಇವರು ಜಾಣರಿರಲಿ, ಇಲ್ಲದಿರಲಿ, ಇವರು ರಚಿಸಿದ ಅತ್ಯದ್ಭುತ ಗ್ರಂಥಗಳನ್ನು ಮಾತ್ರ ಇಂದಿಗೂ ಬಹಳ ಜನರು ಮೆಚ್ಚುತ್ತಾರೆ. ಹಿಂದಿನ ಕಾಲದ ಈ ಜನರು ಎಷ್ಟು ಬುದ್ಧಿವಂತರಾಗಿದ್ದರೆಂಬುದು ಈ ಮಾತಿನಿಂದಲೇ ತಿಳಿಯುತ್ತದೆ.

ನಾನು ಹೇಳಿದಂತೆ ವೇದಗಳನ್ನು ಮೊಟ್ಟ-ಮೊದಲು ಬರೆದಿಡಲಿಲ್ಲ. ಅವುಗಳನ್ನು ಬಾಯಿಯಿಂದ ಕಲಿತು, ನೆನಪಿನಲ್ಲಿಟ್ಟುಕೊಂಡು ಮುಂದಿನ ಸಂತತಿಯವರಿಗೆ ಕಲಿಸುತಿದ್ದರು. ಆಗಿನ ಜನರ ನೆನಪಿನ ಶಕ್ತಿ ಅತ್ಯದ್ಭುತವಾಗಿದ್ದಿರಬಹುದು. ಇಡಿಯ ಪುಸ್ತಕಗಳನ್ನು ನಾವು ಎಷ್ಟು ಜನರು ಪಾಠಮಾಡ ಬಲ್ಲೆವು ?

ವೇದಗಳು ರಚನೆಯಾದ ಕಾಲಕ್ಕೆ ವೈದಿಕ ಕಾಲವೆಂದು ಹೆಸರು. ಋಗ್ವೇದವೇ ಮೊದಲನೆಯ ವೇದ. ಅದು ಮಂತ್ರಗಳಿಂದಲೂ ಹಾಡುಗಳಿಂದಲೂ ತುಂಬಿದೆ. ಅವುಗಳನ್ನು ಹಿಂದಿನ ಕಾಲದ ಆರ್ಯರು ಬಹಳ ಇನಿದಾಗಿ ಹಾಡುತ್ತಿದ್ದರು. ಅವರು ಮನ-ನೊಂದು ಮರಗುವ ಜನರಾಗಿರದೆ ಉತ್ಸಾಹ ಭರಿತರೂ, ಸಾಹಸಿಗರೂ, ಸಂತೋಷ ಭರಿತರೂ ಆಗಿದ್ದಿರಬೇಕು. ತಾವು ಸಂತೋಷದಿಂದಿದ್ದಾಗ ಅವರು ಸುಂದರವಾದ ಪದಗಳನ್ನು ಕಟ್ಟಿ ತಾವು ಪೂಜಿಸುತ್ತಿದ್ದ ದೇವತೆಗಳಿಗಾಗಿ ಅವುಗಳನ್ನು ಹಾಡುತಿದ್ದರು.

ಅವರು ತಮ್ಮ ಮತ್ತು ತಮ್ಮ ಜನಾಂಗದ ವಿಷಯದಲ್ಲಿ ತುಂಬ ಹೆಮ್ಮೆಯುಳ್ಳವರಾಗಿದ್ದರು. ಆರ್ಯ ಎಂಬ ಶಬ್ದದ ಅರ್ಥ ಸಂಭಾ

ವಿತ, ಉತ್ತಮ ಎಂದಾಗುವುದು. ಅವರು ಬಹಳ ಸ್ವಾತಂತ್ರ್ಯ-ಪ್ರಿಯರು. ಹಿಂದುಸ್ತಾನದ ತಮ್ಮ ವಂಶಜರಾದ ಈಗಿನವರಂತೆ ಅವರು ಧೈರ್ಯ-ಗೇಡಿಗಳೂ ಸ್ವಾತಂತ್ರ್ಯ ಕಳೆದು ಹೋದುದರ ಪರಿವೆ ಇಲ್ಲದವರೂ ಎಂದಿಗೂ ಆಗಿರಲಿಲ್ಲ. ಮಾನ-ಹಾನಿ ಇಲ್ಲವೆ ಆಡಿಯಾಳು-ತನಕ್ಕಿಂತ ಸಾವು ಲೇಸೆಂದು ಹಿಂದಿನ ಕಾಲದ ಆರ್ಯರು ಬಗೆಯುತಿದ್ದರು.

ಅವರು ಕದನ-ಕಲಿಗಳು. ಅವರಿಗೆ ಕೆಲವು-ಮಟ್ಟಿಗೆ ಭೌತಿಕ-ಶಾಸ್ತ್ರದ ಜ್ಞಾನವಿತ್ತು. ಒಕ್ಕಲುತನದಲ್ಲಿಯೂ ಅವರು ನಿಪುಣರು. ಒಕ್ಕಲುತನಕ್ಕೆ ಅವರು ಸ್ವಾಭಾವಿಕವಾಗಿ ಮಹತ್ವ ಕೊಡುತಿದ್ದರು. ದೊಡ್ಡ ಹೊಳೆಗಳಿಂದ ವೆಗ್ಗಳವಾದ ನೀರು ದೊರೆಯುತಿತ್ತು. ಆದುದರಿಂದ ಅವರು ಅವುಗಳನ್ನು ತಮ್ಮ ಸ್ನೇಹಿತರು ಮತ್ತು ಉಪಕಾರಿಗಳೆಂದು ಬಗೆಯುತಿದ್ದರು. ಅವರ ನಿತ್ಯ ಜೀವನದಲ್ಲಿ ಮತ್ತು ಒಕ್ಕಲುತನದಲ್ಲಿ ಎತ್ತು ಮತ್ತು ಆಕಳುಗಳು ಬಹಳ ನೆರವಾಗುತ್ತಿದ್ದುವು. ಯಾಕೆಂದರೆ ಆಕಳುಗಳು ಹಾಲು ಕೊಡುತ್ತಿದ್ದುವು. ಹಾಲಿನ ಮಹತ್ವ ಬಹಳವಿತ್ತು. ಆದುದರಿಂದ ಅವರು ಈ ಪ್ರಾಣಿಗಳನ್ನು ಪರಿ-ಪರಿಯಿಂದ ಆರೈಕೆ ಮಾಡಿ ಅವುಗಳನ್ನು ಆದರಿಸುತ್ತಿದ್ದರು. ಆದರೆ ಬರ-ಬರುತ್ತ ಆಕಳನ್ನು ಸಾಕಿ ಸಲಹುವ ನಿಜವಾದ ಕಾರಣವನ್ನು ಮರೆತರು; ಹಾಗು ತಮಗೆ ಕಲ್ಯಾಣವಾಗುವುದೆಂಬ ಭಾವನೆಯಿಂದ ಅವುಗಳನ್ನು ಪೂಜಿಸ ತೊಡಗಿದರು.

ತಾವು ಉತ್ತಮರೆಂದು ಆರ್ಯರು ಹೆಮ್ಮೆ ಪಡುತಿದ್ದುದರಿಂದ ಅವರು ಹಿಂದುಸ್ತಾನದ ಉಳಿದ ಜನರೊಂದಿಗೆ ಬೆರೆತು ಹೋಗಲು ಹೆದರುತಿದ್ದರು. ಹೀಗೆ ಬೆರಿಕೆಯಾಗಬಾರದೆಂದು ಅವರು ಕಟ್ಟಳೆಗಳನ್ನು ಮಾಡಿಕೊಂಡರು. ಆದುದರಿಂದ ಆರ್ಯರು ಅನ್ಯರೊಂದಿಗೆ ಮದುವೆಯಾಗುತ್ತಿರಲಿಲ್ಲ. ಇದೇ ಪದ್ಧತಿ ಬೆಳೆದು ಎಷ್ಟೋ ಕಾಲದ ನಂತರ ಈಗಿನ ಜಾತಿಗಳಾದುವು. ಆದರೆ ಈಗಿನ ಕಾಲದಲ್ಲಿ ಈ ಜಾತಿ-ಪದ್ಧತಿ ಬಹಳ ನಗೆಚಾಟಿಕೆಯ ಮಾತಾಗಿದೆ. ಎಷ್ಟೋ ಜನರು ಎರಡನೆಯವರೊಂದಿಗೆ ಉಣ್ಣುವುದಕ್ಕೂ ಅವರನ್ನು ಮುಟ್ಟುವುದಕ್ಕೂ ಹೆದರುತ್ತಾರೆ. ಸುದೈವದಿಂದ ಈಗ ಇದು ಕಡಿಮೆಯಾಗುತ್ತಿದೆ.

ರಾಮಾಯಣ ಮತ್ತು ಮಹಾ ಭಾರತ

ವೇದಗಳು ರಚನೆಯಾದ ವೈದಿಕ ಕಾಲದ ನಂತರ ಹಿಂದುಸ್ತಾನದಲ್ಲಿ ಪೌರಾಣಿಕ ಕಾಲ ಮೊದಲಾಯಿತು. ಈ ಕಾಲದಲ್ಲಿ ಎರಡು ಮಹಾ-ಕಾವ್ಯಗಳು ಹುಟ್ಟಿದುದರಿಂದ ಇದಕ್ಕೆ ಪೌರಾಣಿಕ ಕಾಲವೆಂದು ಹೆಸರು ಬಂದಿದೆ. ಎರಡೂ ಮಹಾ-ಕಾವ್ಯಗಳಲ್ಲಿ ವೀರ-ಪುರುಷರ ಚರಿತೆಗಳನ್ನು ಕಾವ್ಯ-ರೂಪದಲ್ಲಿ ಹೇಳಲಾಗಿದೆ. ಇವೇ ರಾಮಾಯಣ ಮತ್ತು ಮಹಾ ಭಾರತವೆಂಬ ಎರಡು ಗ್ರಂಥಗಳು. ಇವೆರಡೂ ನಿನಗೆ ಗೊತ್ತಿವೆ.

ಈ ಪೌರಾಣಿಕ ಕಾಲದಲ್ಲಿ ಆರ್ಯರು ಉತ್ತರ ಹಿಂದುಸ್ತಾನದಲ್ಲೆಲ್ಲ ವಿಂಧ್ಯ ಪರ್ವತದ ವರೆಗೆ ಹಬ್ಬಿದ್ದರು. ಈ ಎಲ್ಲ ಭೂ-ಭಾಗಕ್ಕೆ ನಾನು ನಿನಗೆ ಮೊದಲೇ ಹೇಳಿರುವಂತೆ ಆರ್ಯಾವರ್ತವೆಂದು ಹೆಸರಿತ್ತು. ಈಗಿನ ಸಂಯುಕ್ತ ಪ್ರಾಂತಕ್ಕೆ ಮಧ್ಯ ದೇಶವೆಂದು ಹೆಸರಿತ್ತು. ಬಂಗಾಲ ದೇಶಕ್ಕೆ ವಂಗವೆನ್ನುತ್ತಿದ್ದರು.

ನೀನು ತಿಳಿಯಲಿಚ್ಛಿಸಬಹುದಾದ ಮನೋರಂಜಕವಾದ ಇನ್ನೊಂದು ಸಂಗತಿ ಇದೆ. ಹಿಂದುಸ್ತಾನದ ಪಟವನ್ನು ನೋಡಿ ಹಿಮಾಲಯ ಮತ್ತು ವಿಂಧ್ಯ ಪರ್ವತಗಳ ನಡುವೆ ಆರ್ಯಾವರ್ತ ಎಲ್ಲಿದ್ದಿರಬಹುದೆಂದು ಹುಡುಕತೊಡಗಿದರೆ ಅದು ಬಿದಿಗೆಯ ಚಂದ್ರನಂತೆ ನಿನಗೆ ಕಾಣುವುದು. ಆದುದರಿಂದ ಆರ್ಯಾವರ್ತಕ್ಕೆ ಚಂದ್ರನ ಭೂಮಿಯೆಂದು ಹೆಸರಿತ್ತು. ಇಂದುವೆಂದರೆ ಚಂದ್ರ. ಆದುದರಿಂದ ಆರ್ಯಾವರ್ತ *ಇಂದುವಿನ ಭೂಮಿಯಾಗಿತ್ತು.

ಆರ್ಯರು ಬಿದಿಗೆಯ ಚಂದ್ರನನ್ನು ಬಹಳವಾಗಿ ಪ್ರೀತಿಸುತಿದ್ದರು. ಬಿದಿಗೆಯ ಚಂದ್ರನ ಆಕಾರವುಳ್ಳ ಸ್ಥಳಗಳೆಲ್ಲ ಪವಿತ್ರವಾದವುಗಳೆಂದು ಅವರು ತಿಳಿದಿದ್ದರು. ಅವರ ಎಷ್ಟೋ ಪಟ್ಟಣಗಳು ಕಾಶಿ

---

* ಇಂದುವೆಂದರೆ ಇಂದಿರೆಯನ್ನು ಪ್ರೀತಿಯಿಂದ ಕರೆಯುವ ಹೆಸರು.

ಯಂತೆ ಅರ್ಧ-ಚಂದ್ರಾಕಾರವನ್ನು ಹೊಂದಿದ್ದುವು. ಅಲಹಾಬಾದಿನಲ್ಲಿ ಗಂಗೆ ಅರ್ಧ-ಚಂದ್ರಾಕೃತಿಯಿಂದ ಹರಿಯುತ್ತಿರುವಳೆಂಬುದು ನಿನಗೆ ಗೊತ್ತಿದೆ.

ರಾಮಾಯಣ ರಾಮ ಸೀತೆಯರ ಕತೆ. ಲಂಕೆಯ ಎಂದರೆ ಈಗಿನ ಸಿಲೋನಿನ ಅರಸನಾದ ರಾವಣನ ಸಂಗಡ ಇವರು ಯುದ್ಧ ಗೈದುದರ ವರ್ಣನೆ ಇದರಲ್ಲಿದೆ. ಮೂಲ ಕತೆಯನ್ನು ವಾಲ್ಮೀಕಿ ಸಂಸ್ಕೃತದಲ್ಲಿ ಬರೆದಿದ್ದಾನೆ. ಅದೇ ಕತೆಯನ್ನು ಆ ಮೇಲೆ ಬೇರೆ ಬೇರೆ ಭಾಷೆಗಳಲ್ಲಿ ಬರೆದಿದ್ದಾರೆ. ಹಿಂದಿಯಲ್ಲಿ ಬರೆದ ತುಳಸೀದಾಸನ 'ರಾಮಚರಿತ ಮಾನಸ' ಎಂಬ ರಾಮಾಯಣ ಉತ್ತಮವಾದುದೆಂದು ಹೆಸರು ಪಡೆದಿದೆ.

ದಕ್ಷಿಣದಲ್ಲಿಯ ಮಂಗಗಳು ರಾಮನಿಗೆ ನೆರವಾದವೆಂದೂ ಹನುಮಂತನು ಮಂಗಗಳಲ್ಲಿ ಮಹಾವೀರನೆಂದೂ ರಾಮಾಯಣದಲ್ಲಿ ಹೇಳಿದೆ. ರಾಮಾಯಣವೆಂದರೆ ನಿಜವಾಗಿ ಆರ್ಯರು ದಕ್ಷಿಣ ದೇಶದವರೊಂದಿಗೆ ಕಾಳಗವಾಡಿದ ಕತೆ ಇದ್ದಿರಬಹುದು. ರಾವಣನು ತೆಂಕಣಿಗರ ಮುಂದಾಳಾಗಿದ್ದಿರಬಹುದು. ದಕ್ಷಿಣ ಹಿಂದುಸ್ತಾನದಲ್ಲಿ ನೆಲೆಗೊಂಡಿದ್ದ ಕಪ್ಪು ಜನರೆ ಈ ಮಂಗಗಳಾಗಿರಬಹುದು.

ರಾಮಾಯಣದಲ್ಲಿ ಸುಂದರವಾದ ಕತೆಗಳು ತುಂಬಿವೆ. ಆದರೆ ಅವುಗಳನ್ನೆಲ್ಲ ನಾನು ನಿನಗೆ ಇಲ್ಲಿ ಹೇಳಬಯಸುವುದಿಲ್ಲ. ಅವುಗಳನ್ನು ನೀನೆ ಓದಿಕೊಳ್ಳಬೇಕು.

ರಾಮಾಯಣದ ಎಷ್ಟೋ ಕಾಲದ ನಂತರ ಮಹಾಭಾರತವಾಯಿತು. ಅದು ಬಹಳ ದೊಡ್ಡ ಗ್ರಂಥ. ಅದರಲ್ಲಿರುವುದು ಆರ್ಯ ದ್ರಾವಿಡರ ಕದನದ ಸಂಗತಿಗಳಲ್ಲ; ಆದರೆ ಆರ್ಯರು ತಮ್ಮ-ತಮ್ಮಲ್ಲಿಯೆ ಕಾದಾಡಿದ ಕತೆ. ಕಾಳಗದ ಕತೆ ಮಾತ್ರವಲ್ಲದೆ ಅದರಲ್ಲಿ ಬಹಳ ಉದಾತ್ತವಾದ ಕತೆಗಳೂ ತತ್ವ ವಿಚಾರಗಳೂ ತುಂಬಿವೆ. ಇದಕ್ಕಿಂತ ಮಹತ್ವದ ಮಾತೆಂದರೆ ಭಗವದ್ಗೀತೆಯೆಂಬ ಕಾವ್ಯ-ರತ್ನ ಅದರಲ್ಲಿರುವುದರಿಂದ ಅದು ನಮ್ಮೆಲ್ಲರಿಗೆ ಪ್ರೀತಿಯ ಗ್ರಂಥವಾಗಿರುವುದು.

ಹಿಂದುಸ್ತಾನದಲ್ಲಿ ಸಾವಿರಾರು ವರುಷಗಳ ಹಿಂದೆ ಬರೆದ ಗ್ರಂಥಗಳಿವು. ಮಹನೀಯರಲ್ಲದೆ ಇಂತಹ ಗ್ರಂಥಗಳನ್ನು ಯಾರು ಬರೆಯಬಲ್ಲರು? ಎಷ್ಟೋ ಹಿಂದಿನ ಕಾಲದಲ್ಲಿ ಬರೆದಿದ್ದರೂ ಹಿಂದುಸ್ತಾನದಲ್ಲಿ ಇವು ಇಂದಿಗೂ ಉಳಿದುಕೊಂಡಿರುವುವು. ಪ್ರತಿಯೊಂದು ಮಗುವಿಗೂ ಇವುಗಳ ಪರಿಚಯವಿರುವುದಲ್ಲದೆ ಬೆಳೆದು ದೊಡ್ಡವನಾದ ಪ್ರತಿಯೊಬ್ಬನೂ ಇವುಗಳಿಗೆ ತಲೆಬಾಗುತಿದ್ದಾನೆ.

ನಿನ್ನ ತಂದೆ,

ಜವಾಹರಲಾಲ

ತಿಳಿಯದ ಶಬ್ದಗಳಿಗೆ ಅರ್ಥ

ಇಡಿಯ ಕನ್ನಡ ನಾಡಿನ ದೃಷ್ಟಿಯಿಂದ ಬೇರೆ-ಬೇರೆ ಕಡೆಗಳಲ್ಲಿ ಪ್ರಚಾರವಿರುವ ಶಬ್ದಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ. ಆದುದರಿಂದ ಇಲ್ಲಿಯ ಬೇರೆ ಬೇರೆ ಶಬ್ದಗಳು ಬೇರೆ ಬೇರೆಯವರಿಗೆ ತಿಳಿಯಲಾರವೆಂದು ಇವುಗಳ ಅರ್ಥ ಕೊಟ್ಟಿದೆ. ಹೀಗಿದ್ದರೂ ಕೆಲವು ಶಬ್ದಗಳು ಕೈತಪ್ಪಿ ಉಳಿದಿರಬಹುದು; ಎಲ್ಲ ಕಡೆಯೂ ಬಳಿಕೆಯಲ್ಲಿದ್ದ ಕೆಲವು ಶಬ್ದಗಳು ನುಸುಳಿ ಇದರಲ್ಲಿ ಬಂದಿರಲೂ ಬಹುದು

ಅಗಳು = ಅಗೆ, ತೋಡು
ಅಚ್ಚುಮನೆ = ಮುದ್ರಣಾಲಯ
ಅಡಿಯಾಳು = ದಾಸ, ಗುಲಾಮ
ಅದರು = ನಡುಗು
ಅನುವು = ಇಂಬು, ಅನುಕೂಲ
ಅರೆ = ಬಂಡೆಕಲ್ಲು
ಅವಶೇಷ = ಹಾಳಾಗಿ ಉಳಿದ ಭಾಗ
ಆಪು = ನೀರಿನ ದಂಡೆಯ ಮೇಲೆ ಬೆಳೆಯುವ ಒಂದು ತರದ ಹುಲ್ಲು
ಆರೈಕೆ = ಉಪಚಾರ, ಸಾಕುವಿಕೆ
ಆಳ್ತನ = ಒಡೆತನ
ಇಕ್ಕೆಲ = ಎರಡೂ ಬದಿ
ಇಡಪಿಡು = ಠೇವು ಇಡು, ಪುದುವೊಟ್ಟಿಡು, ಡಿಪಾಜಿಟ್ ಇಡು
ಇಸಿದು = ಸವಿ, ಮಧುರ
ಇಬ್ಬಣ = ಎರಡು ಪಂಗಡಗಳು
ಈಯು = ಮರಿಹಾಕು

ಉಡುಪು = ಬಟ್ಟೆಬರೆ, ಪೋಷಾಕು
ಉತ್ತು = ನೇಗಿಲು ಹೊಡೆದು, ಹರಗಿ, (ಉಳ್ ಧಾತು)
ಉಳಿಯಿಡು = ಉಳಿತಾಯ-ಮಾಡು, ಉಳಿಸಿ-ಕೊಳ್ಳು
ಉಲ್ಲೇಖ = ವರ್ಣನೆ, ಹೇಳಿಕೆ
ಒಗ್ಗು = ಸೇರು, ಮನಸ್ಸಿಗೆ ಬರು
ಒಂಡು = ಕೆಸರು
ಕಚ್ಚಾಡು = ಜಗಳಾಡು
ಕಡಿವಡೆದು = ಕಡಿದು ಹೋಗಿ
ಕಣ್ಣು-ಕಟ್ಟು = ಮಾಟ
ಕಲೆಹಾಕು = ಕೂಡಿಸು, ರಾಶಿ ಮಾಡು
ಕಲ್ಲುಕುಟ್ಟಿಗ = ಕಲ್ಲಿನ ಕೆಲಸದವನು
ಕಾದಾಡು = ಯುದ್ಧ ಮಾಡು
ಕಾವಲುಗಾರ = ಪೋಲೀಸು
ಕಿಕ್ಕಿರಿ = ತುಂಬಿಕೊಂಡಿರು
ಕಿಚ್ಚು = ಬೆಂಕಿ, ಬೇಗೆ

ಕುಳ = ಒಕ್ಕಲಿಗನ ಕುಟುಂಬ
ಕೂಳು = ಊಟ, ಆಹಾರ
ಕೊಲ್ಲಿ = ಆಖಾತ
ಕೊಲ್ಲೆ = ಟೊಂಗೆ, ಗೆಲ್ಲು, ಕೊಂಬೆ
ಕೊಳ = ದೊಡ್ಡ ಕೆರೆ, ಸರೋವರ
ಕೊಂಪೆ = ಹಾಳಾದ ಸ್ಥಳ
ಕೋವಿ = ಬಂದೂಕು
ಗಡಚು = ಬಿಗಿ, ಕಷ್ಟ
ಗಳಿಕೆ = ಗಳಿಸಿದ್ದು
ಗೂಳಿಕಾರ = ಗುಳಿಕಟ್ಟಿಕೊಂಡು ತಿರುಗುವವ
ಗೂಳಿಕಟ್ಟು = ಒಲಸೆ ಹೋಗು, ಒಕ್ಕಲು ಹೋಗು
ಗೆಲವು = ಮೇಲ್ತರಹದ್ದು, ಶ್ರೇಷ್ಠವಾದುದು
ಗೋಡೆಕಾರ = ಗೋಡೆ ಕಟ್ಟುವವ, ಶಿಲ್ಪಿ
ಚಾಂಗುಭಲಾ = ಜಯವಾಗಲಿ
ಚಿಪ್ಪುಗಟ್ಟು = ಚಿಪ್ಪಿನಂತೆ ಗಟ್ಟಿಯಾಗು
ಚುಕ್ಕೆ = ನಕ್ಷತ್ರ
ಜಂಗುಳಿ = ಗುಂಪು
ಜರಿ = ಜಾರು
ಜಲ್ಲಿ = ಎಲುಬು ಇಲ್ಲದ ಮೆತ್ತ-ಗಿರುವ ಒಂದು ತರದ ಸಮುದ್ರ-ಪ್ರಾಣಿ
ಜಲ್ಲಿ-ಮೀನು = ಒಂದು ಜಾತಿಯ ಮೀನು
ಜವುಗು = ಜವಳು
ಡವಗೆ = ತಲೆಬುರುಡೆ
ತರುಬು = ಅಡ್ಡಗಟ್ಟು
ತಲೆ-ಚಿಟ್ಟು = ಬೇಸರ
ತವೆ = ಹಂಚು
ತೆಂಕಣಿಗ = ದಕ್ಷಿಣದವನು
ತೊಡಗು = ಮಗ್ನನಾಗು
ದಣಿವಿಕೆ = ಆಯಾಸ
ದರಿ = ಕಂದರ
ದಾವತಿ = ದಣಿವು, ಆಯಾಸ
ದಾಳಿಡು = ಏರಿಬರು, ದಾಳಿಮಾಡು
ದೊಡ್ಡತನ = ಶ್ರೇಷ್ಠತೆ
ನಡೆವಳಿ = ನಡತೆ, ವರ್ತನೆ
ನಡೆವಳಿಸು = ನಡೆ, ವರ್ತಿಸು
ನವಿ = ಸಣ್ಣ ನಾವು
ನವಿಯಾಡಿಸು = ನಾವನ್ನು ತಿರು-ಗಾಡಿಸು
ನಿಚ್ಚಳ = ಸ್ಪಷ್ಟ
ನೀರ್ಮನೆ = ಬಚ್ಚಲು ಮನೆ, ಸ್ನಾನಗ್ರಹ
ನೀರ್ವೆಟ್ಟ = ಕಡಲಿನಲ್ಲಿರುವ ಬೆಟ್ಟ
ನೆಲಸವರು = ಹರಿದಾಡು
ಪರಿವೆ = ಗೊಡವೆ, ಸಂಬಂಧ
ಪಳಗಿಸು = ಶಿಕ್ಷಣ ಕೊಡು, ಸಾಧು-ಮಾಡು, ಸಾಕು
ಪಳಗು = ಜಾಣನಾಗು, ನುರಿ
ಪಾಳಯ = ಸಂಸ್ಥಾನ
ಪ್ರಯೋಗ = ಕಣ್ಣೆದುರಿಗೇ ಮಾಡಿ ತೋರಿಸುವುದು

ಬಗೆ = ತಿಳಿದುಕೊಳ್ಳು, ರೀತಿ, ವಿಷಯ
ಬಡಗಣವರು = ಉತ್ತರದವರು
ಬಣಜಿಗ = ವ್ಯಾಪಾರಿ
ಬರಗೆಡು = ಹಸಿವೆಯಿಂದ ಬಳಲು, ಉಪವಾಸ ಬೀಳು
ಬಸಿರು = ಗರ್ಭ
ಬಳಕೆ = ಉಪಯೋಗ, ರೂಢಿ, ಖರ್ಚು
ಬಳಗ = ಸಂಬಂಧ
ಬಳಸು = ಉಪಯೋಗಿಸು
ಬಿಡುವು = ವಿಶ್ರಾಂತಿ
ಬೀಡಿಕೆ = ಹೇರಾಟ, ಹೇರುವುದು
ಬೀಳು = ಹಾಳು
ಬೀಳ್ಪಡೆ = ಹಾಳುಸ್ಥಿತಿ
ಬೆಡಗು = ಬಣ, ತಂಡ
ಬೆರಿಕೆ = ಮಿಶ್ರಣ, ಕೂಡಿಕೊಳ್ಳುವುದು
ಬೇರ್ಪಡು = ಬೇರೆಯಾಗು
ಬೋನ = ಅನ್ನ, ಆಹಾರ
ಮಡಿಗೂದಲು = ಡೊಂಕು ಕೂದಲು
ಮುಂದಟ್ಟಾಗು = ಖಂಡಿತವಾಗು
ಮರುಳುತನ = ಹುಚ್ಚುತನ
ಮಾರ್ಪಡು = ಬದಲಾಗು
ಮಾರ್ಪಾಡು = ಬದಲಾವಣೆ
ಮಾಸುಗೆಂಪು = ನಸುಗೆಂಪು
ಮಿಡುಕು = ದುಃಖ
ಮಿಣ್ಣೆ = ಬೆನಕ, ಹೊಳೆಯ ದಂಡೆಯ ನುಣುಪಾದ ಚಿಕ್ಕ ಕಲ್ಲು
ಮಿನುಗು = ಮಿಂಚು (Twinkle)
ಮಿಸುನಿ = ಬಂಗಾರ
ಮೀನು-ಗಲ್ಲು = ಮೀನುಗಳ ಅವಶೇಷವುಳ್ಳ ಕಲ್ಲು
ಮೆದೆ = ನೀರಿನಲ್ಲಿ ಬೆಳೆಯುವ ಹುಲ್ಲು
ಮೊಕ ನಾಯಕ = ಮುಂದಾಳು, ಹಿರಿಯ ಹುದ್ದರಿ
ಮೊದಲಿಕೆ = ಆರಂಭ
ಮೊಲೆಯೂಡು = ಮೊಲೆಯುಣಿಸು
ಲಂಚ-ಗೂಳು = ಲಂಚವೆಂದು ಕೊಟ್ಟ ಕೂಳು
ವಿಕಾಸ = ಬೆಳವಣಿಗೆ, ಅರಳುವಿಕೆ
ವೆಗ್ಗಳ = ಬಹಳ, ವಿಪುಲ
ವೆಚ್ಚಿಸು = ವೆಚ್ಚಮಾಡು
ಶಾಸನ = ಕಟ್ಟಳೆ, ಕಾಯದೆ
ಸದೆ = ಕಸಕಡ್ಡಿ, ಕಳೆ
ಸಲಕರಣೆ = ಸಾಮುಗ್ರಿ, ಉಪಕರಣೆ
ಹಚ್ಚಗೆ = ಹಸುರಾಗಿ
ಹತ್ತಿರಿಸು = ಹತ್ತಿರ ಬರು
ಹರಗು = ನೇಗಿಲು ಹೊಡೆ, ಉಳು
ಹರಡು = ಹಬ್ಬು, ಪಸರಿಸು
ಹವಣಿಕೆ = ಯತ್ನ
ಹರವು = ಅಗಲ
ಹರಿ = ಪ್ರವಾಹ, ಹೊನಲು
ಹಳಗಾಲ = ಪ್ರಾಚೀನ ಕಾಲ

ಹಾಯಿ = ಗಾಳಿಯ ಅನುಕೂಲತೆಗಾಗಿ ದೋಣಿಯ ನಡುಗಂಬಕ್ಕೆ ಕಟ್ಟಿದ ಪಟ

ಹಾವಳಿ = ತೊಂದರೆ, ಕಾಟ

ಹಾವು-ರಾಣಿ = ಹಾವಿನ ಮರಿಯಂತಿರುವ ಒಂದು ಹುಳ

ಹಾಳೆ = ಕಾಗದ

ಹಿಂಜು = ಬಿಡಿಸು

ಹಿರಿಯತನ = ಮುಂದಾಳುತನ

ಹಿರಿಹೊಳೆ = ದೊಡ್ಡ ಹೊಳೆ

ಹುದುಗು = ಅಡಗು, ಮುಚ್ಚು

ಹುಳುತು = ಹುಳ ಹಿಡಿದು, ಹುಳತಿಂದು

ಹೂಡಿಕೆ = ಆರಂಭ, ಮೊದಲಿಕೆ

ಹೂಡೆ = ಬುರುಜು (Tower)

ಹೆಕ್ಕು = ಆರಿಸು

ಹೆಗ್ಗಡೆ – ನಾಯಕ, ಮುಂದಾಳು

ಹೆರರು = ಪರಕೀಯರು

ಹೆರು = ಈಯು, ಹಡೆ

ಹೇರಳ = ವಿಪುಲ, ಬಹಳ

ಹೊಟ್ಟೆಸುಡು = ಉಪವಾಸ ಬೀಳು, ಬರಗೆಡು

ಹೊತ್ತಗೆ = ಪುಸ್ತಕ

ಹೊಂದಿಕೆ = ವ್ಯವಸ್ಥೆ

ಹೊಂದಿಕೊಳ್ಳು = ಅವಲಂಬಿಸು

ಹೊಸೆದಾಡು = ತಿಕ್ಕಾಡು

ಹೋರೆ = ಉದ್ಯೋಗ, ಕೆಲಸ